ಸಂಪುಟ 15
ಸಂಚಿಕೆ 15

ಐಕ್ಯರಂಗ


ರೂ. 2.00
18 ಏಪ್ರಿಲ್ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಎಡ-ಪ್ರಜಾಪ್ರಭುತ್ವ ಶಕ್ತಿಗಳಿಗೆ ಪ್ರಚಂಡ ವಿಜಯ

'ತ್ರಿಪುರಾ ಚುನಾವಣೆಯಿಂದಲಾದರೂ ಕಾಂಗ್ರೆಸ್(ಐ) ಪಾಠ ಕಲಿಯಲಿ'

- ಸುರ್ಜೀತ್



ಕಾಂ. ದಶರಥ್ ದೇಬ್ - ತ್ರಿಪುರಾದ ಹೊಸ ಮುಖ್ಯಮಂತ್ರಿ

ಕಾಂ.ದಶರಥ್ ದೇಬ್ ತ್ರಿಪುರಾದ ಹೊಸ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡಿದ್ದಾರೆ. ಕಾಂ.ದೇಬ್ ತ್ರಿಪುರಾದ ಹಿರಿಯ ಬುಡಕಟ್ಟು ಮುಖಂಡರು. ತ್ರಿಪುರಾ ಮಹಾರಾಜನ ವಿರುದ್ಧ ಬುಡಕಟ್ಟು ಜನರ ಐತಿಹಾಸಿಕ ಹೋರಾಟಗಳಿಗೆ ನೇತೃತ್ವ ನೀಡಿದವರು. ತ್ರಿಪುರಾದಲ್ಲಿ ಬುಡಕಟ್ಟು ಜನಗಳು ಹಾಗೂ ಇತರ ಜನಗಳ ನಡುವಿನ ಐಕ್ಯತೆ ಬೆಸೆದವರು. ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿರುವ ಕಾಂ. ದಶರಥ್ ದೇಬ್ 1983-88ರ ಎಡರಂಗ ಸರಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದರು.

ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದ ಎಡ-ಪ್ರಜಾಪ್ರಭುತ್ವ ರಂಗದ ಪ್ರಚಂಡ ವಿಜಯ ಇಡೀ ದೇಶದ ಗಮನ ಸೆಳೆದಿದೆ. ಐದು ವರ್ಷಗಳ ಹಿಂದೆ ಕೇವಲ ಮೋಸದಿಂದ, ಕೊನೆಯ ಗಳಿಗೆಯಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಬೇಕೆಂದೇ ಗಲಭೆ ಸೃಷ್ಟಿಸಿ ಸೇನೆಯನ್ನು ನಿಲ್ಲಿಸಿ ಅಧಿಕಾರ ಕಿತ್ತುಕೊಂಡ ಕಾಂಗ್ರೆ- ಟಿಯುಜೆಎಸ್ ಕೂಟವನ್ನು ತ್ರಿಪುರಾದ ವೀರ ಜನತೆ ಮಣ್ಣು ಮುಕ್ಕಿಸಿದ್ದಾರೆ.

ಎಂತಹ ದಮನ ಚಕ್ರ ನಡೆಸಿದರೂ ಜನಸಮೂಹಗಳ ಉತ್ಸಾಹಭಂಗ ಮಾಡಲು, ಅವರ ಪ್ರಜಾಪ್ರಭುತ್ವ ಆಕಾಂಕ್ಷೆ ಪ್ರಕಟವಾಗದಂತೆ ತಡೆಯಲು ಸಾಧ್ಯವಿಲ್ಲ ಎಂಬುದನ್ನು ಕಾಂಗ್ರೆಸ್(ಐ) ಈಗಲಾದರೂ ಕಲಿಯಬೇಕು ಎಂದು ಎಡ- ಪ್ರಜಾಪ್ರಭುತ್ವ ರಂಗದ ವಿಜಯದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜೀತ್ ಹೇಳಿದ್ದಾರೆ. ಇದು ಬುಡಕಟ್ಟು ಜನಗಳ ಹಾಗೂ ಇತರ ಬಡ ಜನ ವಿಭಾಗಗಳ ಜೀವನ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ ನೀಡಿರುವ ತೀರ್ಪು ಕೂಡಾ ಎಂದು ಸುರ್ಜೀತ್ ಹೇಳಿದ್ದಾರೆ.

ಫೆಬ್ರವರಿ 15ರ ಚುನಾವಣೆಯ ಮುಂದೂಡಿಕೆ, ಈ ಸಂದರ್ಭದಲ್ಲಿ ಕೇಂದ್ರ ಚುನಾವಣಾ ಆಯೋಗದಿಂದ ತ್ರಿಪುರಾ ರಾಜ್ಯ ಸರಕಾರದ ವರ್ತನೆಯ ಬಗ್ಗೆ ತೀವ್ರ ಟೀಕೆಯ ನಂತರವೂ ರಾಜ್ಯಪಾಲರು ಶಿಫಾರಸು ಮಾಡಿದ್ದರೂ ಕಾಂಗ್ರೆಸ್(ಐ) ಕೇಂದ್ರ ಸರಕಾರ ರಾಷ್ಟ್ರಪತಿ ಆಳ್ವಿಕೆ ತರದೆ ಸಮಿರ್ ರಂಜನ್ ಬರ್ಮನ್ ಸರಕಾರವನ್ನು ಮುಂದುವರಿಸಲು ಪ್ರಯತ್ನಿಸಿತು. ಇದರ ವಿರುದ್ಧ ತ್ರಿಪುರಾದ ಎಲ್ಲೆಡೆ ಪ್ರತಿಭಟನೆ ಕಂಡಾಗ ರಾಜ್ಯ ಸರಕಾರವನ್ನು ರಾಜೀನಾಮೆ ನೀಡುವಂತೆ ಹೇಳಿಕೊನೆಗೂ ಮಾರ್ಚ್ 9ರಂದು ರಾಷ್ಟ್ರಪತಿ ಆಳ್ವಿಕೆ ತರಲಾಯಿತು. ಇದು ಇತ್ತೀಚಿನ ಚುನಾವಣೆಗಳ ಸಂದರ್ಭದಲ್ಲಿ ಎಡ-ಪ್ರಜಾಪ್ರಭುತ್ವ ರಂಗದ ಮೊದಲ ವಿಜಯ. ಈ ಮೂಲಕ ಚುನಾವಣಾ ಮೋಸದ ಒಂದು ಮೂಲ ಹೋದಂತಾಯಿತು. ಆದರೂ ಜಾಗರೂಕರಾಗಿರುವಂತೆ ಎಡ-ಪ್ರಜಾಪ್ರಭುತ್ವ ರಂಗ ತ್ರಿಪುರಾ ಜನತೆಯನ್ನು ಮತ್ತೆ-ಮತ್ತೆ ಎಚ್ಚರಿಸಿತು. ಚುನಾವಣೆಯ ಮೂರು ದಿನಗಳ ಮೊದಲು ಅಗರ್ತಲಾದಲ್ಲಿ ನಡೆದ ಅಭೂತಪೂರ್ವ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ಎಡರಂಗದ ಸಂಯೋಜಕ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಮಾಜಿ ಉಪಮುಖ್ಯಮಂತ್ರಿ ದಶರಥ್ ದೇಬ್ ಮತ್ತಿತರ ಮುಖಂಡರು ತ್ರಿಪುರಾದ ಮತದಾರರಿಗೆ ಈ ಬಾರಿ ಕಾಂಗ್ರೆ ಕೂಟ ಮೋಸ ನಡೆಸಲು ಬಿಡದೇಡಿ ಎಂದು ಮತ್ತೊಮ್ಮೆ ಕರೆ ನೀಡಿದರು.

ಕಳೆದ ಐದು ವರ್ಷಗಳಲ್ಲಿ ನಡೆದ ಪ್ರತಿಯೊಂದು ಚುನಾವಣೆಯಲ್ಲೂ ನಡೆದ ಮೋಸದಿಂದ ಪಾಠ ಕಲಿತ ತ್ರಿಪುರಾದ ಜನತೆ ಎಡ-ಪ್ರಜಾಪ್ರಭುತ್ವ ರಂಗದ ಮುಖಂಡರ ಕರೆಗೆ ಓಗೊಟ್ಟು ಈ ಬಾರಿ ಕಾಂಗ್ರೆ ಕೂಟದ ತಂತ್ರಗಳನ್ನು ಸಂಪೂರ್ಣ ವಿಫಲಗೊಳಿಸಿತು. ರಾಜ್ಯದ ಆರ್ಥಿಕವನ್ನು ಹಾಳುಗೆಡವಿದ, ಬೃಹತ್ ಪ್ರಮಾಣದ ಭ್ರಷ್ಟಾಚಾರ, ಮೋಸ ನಡೆಸಿದ, ನೂರಾರು ಬುಡ

ಪುಟ 8ಕ್ಕೆ

ಒಟ್ಟು ಸ್ಥಾನಗಳು		60
ಸಿಪಿಐ(ಎಂ)	44	
ಆರ್‌ಎಸ್‌ಪಿ	2	
ಫಾರ್ವರ್ಡ್ ಬ್ಲಾಕ್	1	
ಜನತಾದಳ(ಬಿ)	1	
ಬೆಂಬಲಿತ ಪಕ್ಷೇತರ ಅಭ್ಯರ್ಥಿ	1	
ಎಡಪ್ರಜಾಪ್ರಭುತ್ವ ರಂಗ		49
ಕಾಂಗ್ರೆಸ್(ಐ)		10
ಟಿಯುಜೆಎಸ್		1

ಹೂಡಿ ಹೋರಾಟಕ್ಕೆ ಜಯ

"ಆಶ್ರಯ" ಸೈಟು ಹಂಚಿಕೆ ರದ್ದು- ಮಂತ್ರಿಗಳ ನೇತೃತ್ವದ ಕಮಿಟಿಯ ಅಕ್ರಮ ಬಯಲಿಗೆ

ಬೆಂಗಳೂರಿನ ಸಮೀಪವಿರುವ ಹೂಡಿ ಗ್ರಾಮದಲ್ಲಿ 'ಆಶ್ರಯ' ಯೋಜನೆಯಡಿ 1383 ನಿವೇಶನಗಳನ್ನು ನೀಡಿರುವುದನ್ನು ರಾಜ್ಯ ಸರಕಾರ ರದ್ದು ಮಾಡಿದೆ. ಕಳೆದ ಅಕ್ಟೋಬರ್ 1992ರಿಂದ "ಹೂಡಿ ಮತ್ತು ದಾಖಲೆ ಗ್ರಾಮಗಳ ಬಗರ್ ಹುಕುಂ ಸಾಗುವಳಿದಾರರ ಹಾಗೂ ನಿವೇಶನ ರಹಿತರ ಹೋರಾಟ ಸಮಿತಿ" ಸಿಪಿಐ(ಎಂ), ಜನತಾದಳ, ದಲಿತ ಸಂಘರ್ಷ ಸಮಿತಿ ಹಾಗೂ ಇತರ ಪ್ರಗತಿಪರ ಸಂಘಟನೆಗಳ ಬೆಂಬಲಿಗರ ಮೇಲೆ ನಡೆದ ಪೋಲೀಸರ ಲಾಠಿ, ಅಶ್ರುವಾಯುಗಳನ್ನು, ಇತರ ಹಲವಾರು ಕಿರುಕುಳಗಳನ್ನು ಲೆಕ್ಕಿಸದೆ ನಡೆಸಿದ ಹೋರಾಟ ಯಶಸ್ವಿಯಾಗಿದೆ. ಸರಕಾರ ಅಕ್ರಮವನ್ನು ಕೊನೆಗೂ ಒಪ್ಪಿಕೊಂಡರೂ ಈ "ಆಶ್ರಯ" ಹಂಚಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಕ್ಷೇತ್ರದ ಶಾಸಕ ಹಾಗೂ ರಾಜ್ಯ ತೋಟಗಾರಿಕಾ ಮಂತ್ರಿ ಎ.ಕೃಷ್ಣಪ್ಪನವರು ಇದರಲ್ಲಿ ತಪ್ಪಿತಸ್ಥರು ಎಂದು 'ಮೊದಲ ನೋಟಕ್ಕೇ' ಯಾವ ಪುರಾವೆಗಳೂ ಇಲ್ಲ ಎಂದು ಮುಖ್ಯಮಂತ್ರಿಗಳು ಈಗಲೂ ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಈ ಅಕ್ರಮ ಹಂಚಿಕೆಗಳು ಕೂಡಲೇ ರದ್ದಾಗಬೇಕು, ಸಮಗ್ರ ತನಿಖೆಯಾಗುವವರೆಗೂ ಕೃಷ್ಣಪ್ಪನವರು ಮಂತ್ರಿಮಂಡಲದಿಂದ ಹೊರಗುಳಿಯಬೇಕು ಅಥವಾ ಮುಖ್ಯಮಂತ್ರಿಗಳು ಇಂತಹುದೇ ಆಪಾದನೆ ಹೊತ್ತಿದ್ದ ಕಾಗೋಡು ತಿಮ್ಮಪ್ಪನವರ ವಿಷಯದಲ್ಲಿ ಮಾಡಿದಂತೆ ಕೃಷ್ಣಪ್ಪನವರನ್ನು ಮಂತ್ರಿಮಂಡಲದಿಂದ ಕೈಬಿಡಬೇಕು ಹಾಗೂ ಜಿಲ್ಲಾಧಿಕಾರಿ ಹಾಲಪ್ಪನವರ್ ಮತ್ತು ಡಿಸಿಪಿ ತಿಂಮಯ್ಯನವರ ಜನ-ವಿರೋಧಿ ವರ್ತನೆಗಳಿಗಾಗಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಹೋರಾಟ ಸಮಿತಿ ಒತ್ತಾಯಿಸಿತ್ತು.

ಮಾರ್ಚ್ 18ರಂದು ಧರಣಿ, ಮಾರ್ಚ್ 21ರಂದು ಧರಣಿಕಾರರ ಮೇಲೆ ಪೋಲೀಸ್ ದೌರ್ಜನ್ಯ, ಮತ್ತೆ ಮಾರ್ಚ್ 29ರಂದು ಪ್ರತಿಭಟನಕಾರರ ಮೇಲೆ ದೌರ್ಜನ್ಯ, ಮಾರ್ಚ್ 31ರಂದು ಇವನ್ನು ಪ್ರತಿಭಟಿಸಿ ಧರಣಿ ಹಾಗೂ ಏಪ್ರಿಲ್ 6ರಂದು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಕಾರ್ಯಕ್ರಮ ನಡೆದವು. ಈ ನಡುವೆ ಹೂಡಿ ಗ್ರಾಮಸ್ಥರ ಹೋರಾಟದ ಒತ್ತಡದಿಂದಾಗಿ ಮತ್ತೆ ಆರಂಭವಾದ ಬೆಂಗಳೂರು ವಿಭಾಗಾಧಿಕಾರಿಗಳ ತನಿಖೆ ಹೂಡಿ ಗ್ರಾಮಸ್ಥರು ಹೇಳಿರುವುದೆಲ್ಲಾ ನಿಜ ಎಂದು ವರದಿ ನೀಡಿದ ಮೇಲೆ ಮಂತ್ರಿಮಂಡಲ ನಿರ್ವಾಹವಿಲ್ಲದೆ ಈ ಅಕ್ರಮ ಹಂಚಿಕೆಗಳನ್ನು ಈಗ ರದ್ದು ಮಾಡಿದೆ.

ತೋಟಗಾರಿಕಾ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪ ಸರಿಯಲ್ಲ ಎಂದು ಮುಖ್ಯಮಂತ್ರಿಗಳು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೂ ಬೆಂಗಳೂರು ವಿಭಾಗಾಧಿಕಾರಿ ಶ್ರೀಮತಿ ವೀಣಾ ಶ್ರೀರಾಮ್‌ರಾವ್‌ರವರ ತನಿಖಾ ವರದಿ ಪರೋಕ್ಷವಾಗಿಯಾದರೂ ಕೃಷ್ಣಪ್ಪನವರ ವರ್ತನೆಯತ್ತ ಬೊಟ್ಟು ಮಾಡಿದೆ ಎಂದು ತಿಳಿದುಬಂದಿದೆ. ಈ ವರದಿ ಟಾಸ್ಕ್‌ಫೋರ್ಸ್ ಕಮಿಟಿ ನಡೆಸಿದ ತೀವ್ರ ಅಕ್ರಮಗಳ ಬಗ್ಗೆ ಕಟುವಾಗಿ ಟೀಕಿಸಿದೆ. ಎ.ಕೃಷ್ಣಪ್ಪನವರು ಈ ಟಾಸ್ಕ್ ಫೋರ್ಸ್ ಕಮಿಟಿಯ ಮುಖ್ಯಸ್ಥರಾಗಿದ್ದರು. ಅವರು ತಪ್ಪಿತಸ್ಥರಲ್ಲವಾದರೆ ಈ ಸಮಿತಿಯ ಅಕ್ರಮಗಳಿಗೆ ಬೇರೆ ಯಾರು ಹೊಣೆ ಎಂದು ಮುಖ್ಯಮಂತ್ರಿಗಳು ಹೇಳಿಲ್ಲ.

1383 ಫಲಾನುಭವಿಗಳಲ್ಲಿ 192 ಮಾತ್ರ ಹೂಡಿ ಗ್ರಾಮ ನಿವಾಸಿಗಳು. ಅಂಗವಿಕಲರಿಗೆ ನೀಡಲಾಗಿದೆಯನ್ನಲಾದ ನಿವೇಶನಗಳ ಬಗ್ಗೆ ವಿವರ ತಿಳಿಯಲು ಸಾಧ್ಯವಾಗಿಲ್ಲ, ಏಕೆಂದರೆ ಇಂತಹ ಫಲಾನುಭವಿಗಳ ವಿಳಾಸ, ವೈದ್ಯಕೀಯ ಸರ್ಟಿಫಿಕೇಟ್‌ಗಳು, ವರಮಾನ ಸರ್ಟಿಫಿಕೇಟ್ ಇತ್ಯಾದಿ ವಿವರಗಳೇ ಇಲ್ಲ ಎಂದು ತನಿಖಾ ವರದಿ ಹೇಳಿದೆ. ಹಲವಾರು ಫಲಾನುಭವಿಗಳು ಎಲ್ಲಿದ್ದಾರೆ ಎಂದೇ ತಿಳಿಯಲು ಸಾಧ್ಯವಾಗಿಲ್ಲ ಎಂದಿರುವ ತನಿಖಾ ವರದಿ ನಿವೇಶನ ಹಂಚಿಕೆ ಮಾಡಿದ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರೇ ಈ ಎಲ್ಲಾ ಅಗತ್ಯ ಕ್ರಮಗಳ ಉಲ್ಲಂಘನೆಯಾಗಿದೆ ಎಂಬುದನ್ನು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ ಎಂದು ಗಮನಿಸಿದ್ದಾರೆ. ಈ ನಿವೇಶನಗಳು ಹೆದ್ದಾರಿ ಸಮೀಪವಿರುವ ಭಾರೀ ಬೆಲೆಬಾಳುವ ಜಮೀನು ಎಂಬುದನ್ನು ತನಿಖಾ ವರದಿ ಒಪ್ಪಿಕೊಂಡಿದೆ.

ಬೆಂಗಳೂರು ಉಪವಿಭಾಗದ ಅಸಿಸ್ಟೆಂಟ್ ಕಮಿಶನರ್ ಎಂ.ಎಸ್.ಉಮೇಶ್ ಚಂದ್ರರವರ ಪ್ರತ್ಯೇಕ ವರದಿಯೊಂದರಿಂದ ಕೂಡಾ ಈ ಅಕ್ರಮಗಳು ಸಾಬೀತಾಗಿದೆ. 1383 ಫಲಾನುಭವಿಗಳಲ್ಲಿ 192 ಹೆಸರುಗಳ ವಿಳಾಸ ಹೂಡಿ ಗ್ರಾಮಕ್ಕೆ ಸೇರಿದ್ದು, ಇನ್ನೂ 70 ಹೆಸರುಗಳು ಸುತ್ತಮುತ್ತಲ ಗ್ರಾಮಗಳದ್ದು ಆದರೆ ಈ 262 ಫಲಾನುಭವಿಗಳಲ್ಲೂ ಶೇ. 30 ನಿಜವಾದ ಹೆಸರುಗಳಲ್ಲ, ಸುಮಾರು ಶೇ. 20 'ಆಶ್ರಯ' ಯೋಜನೆಯ ಪ್ರಕಾರ ಅರ್ಹರೇ ಅಲ್ಲ, ಉಳಿದ 1121 ಫಲಾನುಭವಿಗಳೆಲ್ಲಾ ಬೆಂಗಳೂರು ನಗರವಾಸಿಗಳು ಎಂದು ಈ ತನಿಖಾ ವರದಿಯಿಂದ ತಿಳಿದುಬಂದಿದೆಯಂತೆ. ಇಂತಹ ಬೆಲೆ ಬಾಳುವ ಜಮೀನಿನ ಇಂತಹ ಬಹಿರಂಗ ಅಕ್ರಮಗಳಿಗೆ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರಕ್ಕೆ ಹಾಗೂ ಇವನ್ನು ಪ್ರತಿಭಟಿಸಿದವರ ಮೇಲೆ ಲಾಠಿ, ಅಶ್ರುವಾಯು, ಗುಡಿಸಲುಗಳಿಗೆ ಬೆಂಕಿ ಹಚ್ಚಿಸಿದ್ದಕ್ಕೆ ಹೊಣೆ ಯಾರು ಎಂಬ ಜನರ ಸಹಜ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರವೇನು ಎಂದು ತಿಳಿದಿಲ್ಲ.

ತಾಲ್‌ಕಟೋರದಿಂದ ತಾಲ್‌ಕಟೋರಕ್ಕೆ ಬೆಳೆಯುತ್ತಿರುವ ದುಡಿಯುವ ಜನರ ಐಕ್ಯ ಹೋರಾಟದ ಏಪ್ರಿಲ್ 15ರ ಸಮಾವೇಶ

- ಸಿ. ನಂಜುಂಡಪ್ಪ

ನವದೆಹಲಿಯಲ್ಲಿ ಕಾರ್ಮಿಕ ಸಂಘಗಳು ಸಮಾವೇಶಗಳನ್ನು ನಡೆಸುವ ಅತಿ ದೊಡ್ಡ ಸಭಾಂಗಣವೆಂದರೆ ತಾಲ್‌ಕಟೋರ ಸ್ಟೇಡಿಯಂ ಎನ್ನಬಹುದು. ಇದೇ ಏಪ್ರಿಲ್ 15ರಂದು ತಾಲ್‌ಕಟೋರ ಸ್ಟೇಡಿಯಮ್ಮಿನಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ಒಂದು ಅಖಿಲ ಭಾರತ ಸಮಾವೇಶವನ್ನು ನಡೆಸಲಿದ್ದು ಆ ವಿಶಾಲ ವೇದಿಕೆಯಿಂದ ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್(ಐ) ಸರಕಾರವು ಅನುಸರಿಸುತ್ತಿರುವ ದೇಶದ್ರೋಹಿ ಆರ್ಥಿಕ, ಕೈಗಾರಿಕಾ ನೀತಿಗಳನ್ನು ಹಿಮ್ಮೆಟ್ಟಿಸಲು ಭಾರತ್ ಬಂದ್‌ಗೆ ಕರೆ ಬರಲಿದೆ.

ಭಾರತದ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸದಲ್ಲಿ ಕಾರ್ಮಿಕ ವರ್ಗದ ಅತ್ಯಂತ ಹೆಚ್ಚು ವಿಶಾಲವಾದ ಐಕ್ಯತೆ ಬೆಳೆದು ಬಂದದ್ದು 1978ರ ನವೆಂಬರಿನಲ್ಲಿ, ಅಂದಿನ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಕ್ಷ ಸರಕಾರವು ತರಲು ಹೊರಟಿದ್ದ ಹೊಸ ಕೈಗಾರಿಕಾ ಬಾಂಧವ್ಯಗಳ ಮಸೂದೆಯನ್ನು ವಿರೋಧಿಸಲು, ಸಂಘಟಿಸಲ್ಪಟ್ಟಿದ್ದ ಅಖಿಲ ಭಾರತ ಸಮಾವೇಶದಲ್ಲಿ. ಆ ಸಮಾವೇಶದ ಜತೆಗೇನೇ ಸಿಐಟಿಯು ಜನರಲ್ ಕೌನ್ಸಿಲಿನ ಸಭೆ ನಡೆಯುವುದಿದ್ದು ಕರ್ನಾಟಕದಿಂದ ಕಾಂ.ಎಸ್.ಕೆ.ಉಪಾಧ್ಯಾಯ, ದಿವಂಗತ ಗಂಗಾಧರನ ಮೋಹಿ ಮತ್ತು ನಾನು ಆ ಸಮಾವೇಶದಲ್ಲಿ ಮತ್ತು ಜನರಲ್ ಕೌನ್ಸಿಲಿನ ಸಭೆಯಲ್ಲಿ ಭಾಗವಹಿಸಿದೆವು.

ಆ ಸಮಾವೇಶದಲ್ಲಿ ಐಎನ್‌ಟಿಯುಸಿ ಮತ್ತು ಬಿಎಂಎಸ್ ಸೇರಿದಂತೆ ಭಾರತದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳೂ ಭಾಗವಹಿಸಿದ್ದವು. ಸಮಾವೇಶದಲ್ಲಿಯಾಗಲೀ, ಅದರ ನಂತರ ನಡೆದ ಚಳುವಳಿಗಳಲ್ಲಿಯಲ್ಲಾ ಬಿಎಂಎಸ್ ನಾಯಕರು ಮತ್ತು ಸದಸ್ಯರು ಅಯೋಧ್ಯೆಯ ಪ್ರಶ್ನೆಯನ್ನಾಗಲೀ ರಾಮಮಂದಿರವನ್ನು ಕಟ್ಟುವ ವಿಚಾರವನ್ನಾಗಲೀ ಪ್ರಸ್ತಾಪಿಸಲಿಲ್ಲ. ಆ ಸಮಾವೇಶದಲ್ಲಿ ಮೂಡಿ ಬಂದ ಭಾರತದ ಕಾರ್ಮಿಕ ವರ್ಗದ ಐಕ್ಯತೆಯು ಅಂದಿನ ಮೊರಾರ್ಜಿ ದೇಸಾಯಿ ಸರಕಾರವು ತರಹೊರಟಿದ್ದ ಹೊಸ ಕೈಗಾರಿಕಾ ಬಾಂಧವ್ಯದ ಮಸೂದೆಯನ್ನು ಇತಿಹಾಸದ ಕಸದ ಬುಟ್ಟಿಗೆ ಎಸೆಯಿತು. ಸಮಾವೇಶವು ನಡೆದ ಒಂಭತ್ತು ತಿಂಗಳಲ್ಲಿ ಆ ಸರಕಾರವೇ ಕುಸಿದುಬಿದ್ದು ಹೋಯಿತು.

ಇಡೀ ಪ್ರಪಂಚದ ಜನತೆಯ ಶತ್ರುಗಳಾದ ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿರುವ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವಬ್ಯಾಂಕ್‌ಗಳೆಂಬ ಅಂತರ್ರಾಷ್ಟ್ರೀಯ

ಪುಟ 2 ನೋಡಿ

ಏಪ್ರಿಲ್ 15ರ ಸಮಾವೇಶ ......

ಪುಟ 1ರಿಂದ

ಮಾರವಾಡಿಗಳು ಹಾಕಿದ ಶರತ್ತುಗಳನ್ನು ಕಾರ್ಯಗತಮಾಡುವ, ದೇಶದ ಆರ್ಥಿಕ ಸ್ವಾವಲಂಬನೆ ಯನ್ನು ನಾಶ ಮಾಡುವ, ದೇಶವನ್ನು ನವವಸಾಹತುಶಾಹಿ ಗುಲಾಮಗಿರಿಗೆ ಒಳಪಡಿಸುವ ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್(ಐ)ನ ದುಷ್ಟ ನೀತಿಗಳನ್ನು ವಿರೋಧಿಸಲು ಎರಡು ಅಖಿಲ ಭಾರತ ಮುಷ್ಕರಗಳನ್ನು, ಒಂದು ಸಂಸತ್ ಚಲೋ ಚಳುವಳಿಯನ್ನು ನಡೆಸಿದ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ತಾಲ್‌ಕಟೋರ ಸ್ಟೇಡಿಯಂನಲ್ಲಿ ಏಪ್ರಿಲ್ 15ರಂದು 6000 ಪ್ರತಿನಿಧಿಗಳು ಭಾಗವಹಿಸುವ ಒಂದು ಅಖಿಲ ಭಾರತ ಸಮಾವೇಶವನ್ನು ನಡೆಸುತ್ತಿದೆ.

ಪಿ.ವಿ.ನರಸಿಂಹರಾವ್ ಸರಕಾರದ ಜನವಿರೋದಿ ದೇಶದ್ರೋಹಿ ನೀತಿಗಳನ್ನು ಐಎನ್‌ಟಿಯುಸಿ ಮತ್ತು ಬಿಎಂಎಸ್ ಬೆಂಬಲಿಸುತ್ತಿರುವುದರಿಂದ ಅವು ಈ ಸಮಾವೇಶದಲ್ಲಿ ಪಾಲ್ಗೊಳ್ಳುತ್ತಿಲ್ಲ. ಕಾರ್ಮಿಕರಿಗೆ ಕುತ್ತಾಗುವ 'ಎಕ್ಸಿಟ್ ಪಾಲಿಸಿ' ಯಂತಹ ನೀತಿಗಳನ್ನು ಬಹಿರಂಗವಾಗಿ ಬೆಂಬಲಿಸಲು ಐಎನ್‌ಟಿಯುಸಿ, ಬಿಎಂಎಸ್ ನಾಯಕರುಗಳಿಗೇನೇ ಧೈರ್ಯ ಬರುತ್ತಿಲ್ಲ. 1991ರ ನವೆಂಬರ್ 29ರಂದು ಮತ್ತು 1992 ರ ಜೂನ್ 16ರಂದು ನಡೆದ ಅಖಿಲ ಭಾರತ ಮುಷ್ಕರಗಳಲ್ಲಿ ದೇಶದಲ್ಲಿ ಐಎನ್‌ಟಿಯುಸಿಗೆ ಸೇರಿದ ಕಾರ್ಮಿಕ ಸಂಘಗಳ ಅನೇಕ ಸದಸ್ಯರು, ಬಿಎಂಎಸ್‌ಗೆ ಸೇರಿದ ಕೆಲವು ಸದಸ್ಯರು ಭಾಗವಹಿಸಿದರು. ಕಾಂಗ್ರೆಸ್ ಸರಕಾರದ ನೀತಿಗಳನ್ನು ಬೆಂಬಲಿಸಲೆಂದೇ ಹುಟ್ಟಿದ ಐಎನ್‌ಟಿಯುಸಿ ಮುಷ್ಕರಗಳನ್ನು ಬೆಂಬಲಿಸದಿದ್ದರೂ ಪ್ರಸಕ್ತ ಆರ್ಥಿಕ ನೀತಿ, ಕೈಗಾರಿಕಾ ನೀತಿಗಳ ಕಾವನ್ನು ಅನುಭವಿಸುತ್ತಿರುವ ಐಎನ್‌ಟಿಯುಸಿ ಸದಸ್ಯರು ಸುಮ್ಮನಿರಲು ಸಾಧ್ಯವಿಲ್ಲ. ಬಿಎಂಎಸ್ ಪಿ.ವಿ.ನರಸಿಂಹರಾವ್ ಸರಕಾರದ ಜನವಿರೋಧಿ ದೇಶದ್ರೋಹಿ ನೀತಿಗಳನ್ನು ಪರೋಕ್ಷವಾಗಿ ಬೆಂಬಲಿಸುತ್ತಿದೆ. 1992ರ ಜೂನ್ 16ರ ಮುಷ್ಕರವು ದೇಶದ ಜನರ ಮೇಲೆ ತನ್ನ ಪ್ರಭಾವವನ್ನು ಬೀರಿ ಮುಂದಿನ ಹೋರಾಟಗಳಿಗೆ ಅವರನ್ನು ಆಕರ್ಷಿಸಿತು. ಆದರೆ ಮುಷ್ಕರವಾದ ಮೂರು ವಾರಗಳಲ್ಲಿ ಸಂಘಪರಿವಾರವು ಅಯೋಧ್ಯೆಯಲ್ಲಿ ಕರಸೇವೆಯನ್ನು ನಡೆಸಿ, ಜನರ ಗಮನವನ್ನು ಬೇರೆಡೆಗೆ ಸೆಳೆಯಿತು. 1992ರ ನವೆಂಬರ್ 25ರ ಯಶಸ್ವಿ ಸಂಸತ್ ಪಥಃಚಲನ ನಡೆದು ನವದೆಹಲಿಯ ಮೆಚ್ಚುಗೆಯನ್ನು ಪಡೆದು ಜನರನ್ನು ಮುಂದಿನ ಹೋರಾಟಕ್ಕೆ ಆಕರ್ಷಿಸಿದ ನಂತರದ ಹನ್ನೆರಡೇ ದಿವಸಗಳಲ್ಲಿ ಸಂಘ ಪರಿವಾರವು ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿದ್ದ ಮಸೀದಿಯನ್ನು ನೆಲಸಮ ಮಾಡಿ, ದೇಶಾದ್ಯಂತ ಕೋಮು ಗಲಭೆಗಳು ನಡೆದು ಜನರ ಗಮನವು ವಿಭಜನಕಾರಿ ದಾರಿಯಲ್ಲಿ ಹರಿಯಿತು. ಈ ವಿಧ್ವಂಸಕ ಕೃತ್ಯವು ಕಾರ್ಮಿಕ ವರ್ಗದ ವರ್ಗ ಐಕ್ಯತೆಯನ್ನೇ ಒಡೆಯಲು ಹೊರಟಿತು. ಬಿಎಂಎಸ್ ಒಂದೆಡೆ ಇದರ ಲಾಭವನ್ನು ಪಡೆಯಲು ಯತ್ನಿಸಿದರೆ ಇನ್ನೊಂದೆಡೆ ನರಸಿಂಹರಾವ್ ಸರಕಾರದ ಜನವಿರೋಧಿ, ದೇಶದ್ರೋಹಿ ನೀತಿಗಳು ಬಿಎಂಎಸ್‌ಗೆ ಸೇರಿದ ಕಾರ್ಮಿಕ ಸಂಘಗಳ ಸದಸ್ಯರನ್ನು ಹೋರಾಟದತ್ತ ತಳ್ಳುತ್ತಿದೆ. "ನಮ್ಮ ರಾಮನಿಗೊಂದು ಮಂದಿರ ಕಟ್ಟೋದಕ್ಕೆ ಬಿಡ್ತಾ ಇಲ್ಲ" - ಎಂಬ ಸಂಘ ಪರಿವಾರದವರ ಕೋಮು ಪ್ರಚಾರದ ಪ್ರಭಾವ ಸತ್ಯದರ್ಶನವಾದಂತೆ ದಿನಕಳೆದಂತೆ ಕಡಿಮೆಯಾಗುವುದು.

ನವೆಂಬರ್ 25ರಂದು ಕೆಂಪು ಕೋಟೆಯಿಂದ ನಡೆದ ಪಥಚಲನವು ಸಂಸತ್ತಿನ ಮುಂದಿರುವ ಬೋಟ್ ಕ್ಲಬ್ ಲಾನ್ಸ್‌ನಲ್ಲಿ ಜಮಾಯಿಸಿ "ಭಾರತ್ ಬಂದ್"ಗೆ ಕರೆ ಕೊಟ್ಟಿತು.

ಭಾರತ ಕೃಷಿ ಪ್ರಧಾನ ದೇಶವಾಗಿದ್ದು, ಕಾರ್ಮಿಕ ವರ್ಗದ ಸಂಖ್ಯೆ ಇಡೀ ಜನಸಂಖ್ಯೆಗೆ ಹೋಲಿಸಿದಾಗ ಚಿಕ್ಕದಾಗಿ ಕಾಣುತ್ತದೆ. ಭಾರತ ಬಂದ್ ಆಗಬೇಕಾದರೆ ಕಾರ್ಮಿಕರಲ್ಲದೆ, ರೈತರು, ಕೃಷಿಕೂಲಿಕಾರರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಕುಶಲಕರ್ಮಿಗಳು, ವೃತ್ತಿಪರರು, ಎಲ್ಲಾ ದೇಶಭಕ್ತರು ಸೇರಿ ಭಾರತವನ್ನು ಬಂದ್ ಮಾಡುವ ಮೂಲಕ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಅನುಸರಿಸುತ್ತಿರುವ ಪಿ.ವಿ.ನರಸಿಂಹರಾವ್ ಸರಕಾರಕ್ಕೆ ಮಾರಣಾಂತಿಕ ಪೆಟ್ಟನ್ನು ಕೊಡಬೇಕು, ಭವ್ಯ ಭಾರತವನ್ನು ನಿರ್ಮಿಸುವ ಸ್ವಾವಲಂಬನೆಯನ್ನು ವಿಸ್ತರಿಸುವ ಪ್ರಗತಿಯನ್ನು ಸಾಧಿಸುವ ಪರ್ಯಾಯ ಧೋರಣೆಗಳಿಗಾಗಿ ಹೋರಾಡಬೇಕು.

ಆದುದರಿಂದಲೇ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ದಶಲಕ್ಷಗಟ್ಟಲೆ ಸದಸ್ಯರಿರುವ ಇಂಡಿಯಾ ಕಿಸಾನ್ ಸಭಾಗಳನ್ನು, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಗಳನ್ನು, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸೇರಿದಂತೆ ಮಹಿಳಾ ಸಂಘಟನೆಗಳನ್ನು, ಎಸ್‌ಎಫ್‌ಐ, ಡಿವೈಎಫ್‌ಐ, ಎಐಎಸ್‌ಎಫ್, ಎಐವೈಎಫ್ ಮೊದಲಾದ ವಿದ್ಯಾರ್ಥಿಗಳ, ಯುವಕರ ಸಂಘಟನೆಗಳನ್ನು ಅಖಿಲ ಭಾರತ ಸಮಾವೇಶದಲ್ಲಿ ಸೇರಿಸಿದೆ. ಸಾರ್ವಜನಿಕ ಕ್ಷೇತ್ರದ ಅಧಿಕಾರಿಗಳು ಬ್ಯಾಂಕ್-ವಿಮೆ ಅಧಿಕಾರಿಗಳು, ಐ.ಎ.ಎಸ್. ಅಲ್ಲದ ಸರಕಾರಿ ಅಧಿಕಾರಿಗಳು, ಡಾಕ್ಟರು, ವಿಜ್ಞಾನಿಗಳು ಮೊದಲಾದ ವೃತ್ತಿಪರರು ಸೇರಿರುವ "ಪ್ರೊಫೆಶನಲ್ ವರ್ಕರ್ಸ್ ಟ್ರೇಡ್ ಯೂನಿಯನ್ ಸೆಂಟರ್"ಈ ಸಮಾವೇಶದಲ್ಲಿ ಭಾಗವಹಿಸುವುದು. ಭಾರತದ ಜನತೆಯ ವಿಶಾಲ ವಿಭಾಗಗಳನ್ನು ಪ್ರತಿನಿಧಿಸುವ ತಾಲ್‌ಕಟೋರ ಸ್ಟೇಡಿಯಮ್ಮಿನಲ್ಲಿ ಸೇರುವ ಅಖಿಲ ಭಾರತ ಸಮಾವೇಶವು "ಭಾರತ್ ಬಂದ್"ನ ದಿನವನ್ನು ನಿರ್ಧರಿಸಲಿದೆ.

1978ರ ನವೆಂಬರ್‌ನಲ್ಲಿ ತಾಲ್‌ಕಟೋರ ಸ್ಟೇಡಿಯಮ್ಮಿನಲ್ಲಿ ನಡೆದ ಸಮಾವೇಶವು ಕಾರ್ಮಿಕ ವರ್ಗದ ಹಕ್ಕುಗಳನ್ನು ಕಿತ್ತುಕೊಳ್ಳುವ ಮೊಟಕು ಮಾಡುವ ಸರಕಾರದ ದುಷ್ಟ ಯತ್ನಗಳ ವಿರುದ್ಧ ಹೋರಾಡಿ ಜಯವನ್ನು ಪಡೆಯಿತು.

ಇಂದು ತಾಲ್‌ಕಟೋರ ಸ್ಟೇಡಿಯಮ್ಮಿನಲ್ಲಿ ಸೇರುವ ಸಮಾವೇಶವು ದೇಶದ ಆರ್ಥಿಕ ಸ್ವಾವಲಂಬನೆಯನ್ನು, ಸ್ವಾತಂತ್ರ್ಯವನ್ನು ರಕ್ಷಿಸಲು ಸಾಮ್ರಾಜ್ಯಶಾಹಿ ಸಂಸ್ಥೆಗಳ ಪ್ರೇರಿತ-ನಿರ್ದೇಶಿತ ನೀತಿಗಳ ವಿರುದ್ಧವಾಗಿ ಹೋರಾಡಬೇಕಾಗಿದೆ. ಅದಕ್ಕಾಗಿಯೇ ಭಾರತ್ ಬಂದ್ ಈ ನಿಟ್ಟಿನಲ್ಲಿ ಈಗಾಗಲೇ ಮೂರು ಹಂತಗಳ ಹೋರಾಟಗಳನ್ನು ನಡೆಸಿರುವ ಭಾರತ ...ರ್ಮಿಕ ವರ್ಗವು ಮುಂಬರುವ ವಿಶಾಲ ತಳಹದಿಯ ಐಕ್ಯ ಹೋರಾಟ ... ಭಾರತ್ ಬಂದ್‌ಗೆ ನಾಯಕತ್ವ ಕೊಡುವುದರಲ್ಲಿ ಸಂದೇಹವಿಲ್ಲ.

ಪೇಜಾವರ ಮಠಾಧೀಶರಿಗೆ ಒಂದು ಬಹಿರಂಗ ಪತ್ರ

ಈಗಿನ "ಅಯೋಧ್ಯಾಕಾಂಡ"ದಲ್ಲಿ ಕರ್ನಾಟಕದ ಪೇಜಾವರ ಮಠಾಧೀಶರ ಪಾತ್ರದ ಬಗ್ಗೆ ಮಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿರುವ ಲಕ್ಷ್ಮೀಶ ತೋಳ್ಪಾಡಿಯವರು ಬರೆದಿರುವ ಬಹಿರಂಗ ಪತ್ರದ ಕೆಲವು ಅಂಶಗಳು : -

ಒಂದು ನಿರ್ದಿಷ್ಟ ಉದ್ದೇಶದಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ. ಡಿಸೆಂಬರ್ 6, 1 992ರ ಅಯೋಧ್ಯೆಯ ದುರ್ಘಟನೆಗೆ ಸಂಬಂಧಿಸಿದಂತೆ ನೀವು ಕೊಡುತ್ತಿರುವ ಪತ್ರಿಕಾ ಹೇಳಿಕೆಗಳು ಹಾಗೂ ಮಾಡುತ್ತಿರುವ ಭಾಷಣಗಳು ಒಟ್ಟಾರೆಯಾಗಿ ವ್ಯಕ್ತಪಡಿಸುವ ಸಾಂಸ್ಕೃತಿಕ ಹಾಗೂ ರಾಜಕೀಯ ನಿಲುವಿಗೆ ನನ್ನ ಪ್ರತಿರೋಧವನ್ನು ದಾಖಲಿಸುವುದು ಈ ಪತ್ರದ ಉದ್ದೇಶವಾಗಿದೆ......................

ನೀವು ನನಗೆ ಯಾವತ್ತೂ ಸೈದ್ಧಾಂತಿಕವಾಗಿ ಹತ್ತಿರವಾದವರಲ್ಲ ಮತ್ತು ನನ್ನ ನಿಮ್ಮ ನಡುವೆ ಅಗಾಧವಾದ ಅಂತರವಿದೆ ಎನ್ನುವ ಅರಿವು ನನಗೆ ಮೊದಲಿನಿಂದಲೂ ಇದೆ. ಆದರೂ ಮಠೀಯ ವ್ಯವಸ್ಥೆಯ ಪರಿಮಿತಿಯಲ್ಲಿ ನಿಮ್ಮದೇ ಆದ ರೀತಿಯಲ್ಲಿ ಆದರ್ಶಗಳ ಬೆನ್ನು ಹತ್ತಿದವರು ನೀವು ಎಂದು ನಿಮ್ಮ ಬಗ್ಗೆ ಪ್ರೀತ್ಯಾದರಗಳನ್ನು ಇರಿಸಿಕೊಂಡವನು ನಾನು. ನಿಮ್ಮ ಬಾಲ್ಯದಲ್ಲಿ ಗಾಂಧೀಜಿಯವರ ಮರಣದ ವೃತ್ತಾಂತವನ್ನು ಕೇಳಿ ಹರ್ಷಿಸುತ್ತಿದ್ದ ಉಡುಪಿಯ ಕರ್ಮಠ ಬ್ರಾಹ್ಮಣರ ನಡುವೆ ನೀವು ಏಕಾಂಗಿಯಾಗಿ ಮೌನದಲ್ಲಿ ದುಃಖಿಸಿದ ಕಥೆಯನ್ನು ನಾನು ಕೇಳಿದ್ದೇನೆ..............................

ನಿಮ್ಮ ಬಗೆಗಿನ ಈ ನನ್ನ ಭಾವನೆಗಳು ಎಂತಹ ಭಯಂಕರವಾದ ಭ್ರಮೆ ಎನ್ನುವುದು ಡಿಸೆಂಬರ್ 6, 1992ರ ಮತ್ತು ನಂತರದ ನಿಮ್ಮ ವರ್ತನೆಗಳಿಂದ ನನಗೆ ಸ್ಪಷ್ಟವಾಯಿತು.

ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದ ಘಟನೆ ಗಾಂಧೀಜಿಯವರ ಹತ್ಯೆಯಷ್ಟೇ ಭೀಕರ ಎಂದು ನಾನು ತಿಳಿಯುತ್ತೇನೆ. ಅಧ್ವಾನಿ, ಸಿಂಘಾಲ್, ದಾಲ್ಮಿಯ, ಉಮಾಭಾರತಿಗಳನ್ನೊಳಗೊಂಡು ನೀವು ನಡೆಸಿದ ಈ ಸಾಂಸ್ಕೃತಿಕ ಧಾಳಿ ಯಾವುದೇ ನಾಗರಿಕ ಸಮಾಜ ನಾಚಿಕೆ ಪಟ್ಟುಕೊಳ್ಳುವಂತಹುದು. ಮಸೀದಿ ಕೆಡಹುವ ಯೋಚನೆ ಗೊತ್ತೇ ಇರಲಿಲ್ಲ ಎನ್ನುವ ಮುಗ್ಧತೆಯನ್ನು ನೀವು ಪ್ರದರ್ಶಿಸಬಹುದು. ಮಸೀದಿ ಧ್ವಂಸವಾದ ಬಗ್ಗೆ ಮೊಸಳೆ ಕಣ್ಣೀರನ್ನೂ ಹಾಕಬಹುದು. ಹೊಸ ಮಸೀದಿ ಕಟ್ಟಲು ದೇಣಿಗೆಯನ್ನೂ ಕೊಡಬಹುದು. ಆದರೆ ಇದಾವುದೂ ಮಸೀದಿಯನ್ನು ಧ್ವಂಸ ಮಾಡಿದ ಅಕೃತ್ಯದ ಹೊಣೆಗಾರಿಕೆಯಿಂದ ನಿಮ್ಮನ್ನು ಮುಕ್ತಗೊಳಿಸಲಾರದು..............................

ನೀವು ಮತ್ತು ನಿಮ್ಮ ಪರಿವಾರದವರು ನಡೆಸುತ್ತಿರುವ ಘಾತುಕಕಾರಿ ಸಾಂಸ್ಕೃತಿಕ ರಾಜಕಾರಣಕ್ಕೆ ಈ ಕೆಳಗಿನ ನನ್ನ ಪ್ರತಿಕ್ರಿಯೆ ಮತ್ತು ಪ್ರತಿರೋಧಗಳನ್ನು ದಾಖಲಿಸುತ್ತೇನೆ.

1. ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಮಸೀದಿ ನೆಲಸಮ ಮಾಡಿದ ಘಟನೆ ತೀರಾ ಅಮಾನವೀಯವಾದದ್ದು ಮತ್ತು ಭಾರತ ಹಲವು ಕಷ್ಟಗಳ ನಡುವೆಯೂ ಪಾಲಿಸಿಕೊಂಡು ಬರುತ್ತಿರುವ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳಿಗೆ ವ್ಯತಿರಿಕ್ತವಾದದ್ದು.
2. ದಾಳಿಗೆ ಒಳಗಾದದ್ದು ಮಸೀದಿ ಮಾತ್ರವಲ್ಲ, ಗಾಂಧೀಜಿಯವರ ನಾಯಕತ್ವದಲ್ಲಿ ಲಕ್ಷಾಂತರ ಭಾರತೀಯರು ಶ್ರಮಪಟ್ಟು ದಕ್ಕಿಸಿಕೊಂಡ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಮೌಲ್ಯಗಳೆಲ್ಲವೂ ಈಗ ದಾಳಿಗೆ ತುತ್ತಾಗಿವೆ.
3. ನಮ್ಮ ಕಣ್ಣೆದುರಿಗೇ ಸಂಭವಿಸಿದ ಈ ವಿನೂತನ ದಾಳಿಗೆ ನೀವೂ ಸಹಾ ಜವಾಬ್ದಾರರು. ಆಧುನಿಕ ಭಾರತದ ಇತಿಹಾಸದ ಪುಟಗಳಲ್ಲಿ ನಿಮ್ಮನ್ನು ಸಂಘಪರಿವಾರದ ಇತರ ನಾಯಕರನ್ನು ಮತ್ತು ಎರಡೂವರೆ ಲಕ್ಷ ಕರಸೇವಕರನ್ನು 'ದಾಳಿಕೋರರು' ಎನ್ನುವ ಹೆಸರಿನಲ್ಲಿ ದಾಖಲಿಸಬಹುದು.
4. 'ದಾಳಿಯ ಯೋಜನೆ' ನನಗೆ ಗೊತ್ತಿರಲೇ ಇಲ್ಲ ಎನ್ನುವ ನಿಮ್ಮ ಹಲುಬುವಿಕೆಗೆ ಯಾವ ಅರ್ಥವೂ ಇಲ್ಲ. ನೀವು ನಿಜವಾಗಿಯೂ ಶಾರೀರಿಕವಾಗಿ ದಾಳಿಯಲ್ಲಿ ಭಾಗವಹಿಸಿದ್ದೀರಾ ಎನ್ನುವ ಪ್ರಶ್ನೆ ನನಗೆ ಮುಖ್ಯವಲ್ಲ.
5. ಅಯೋಧ್ಯೆಯ ದುರ್ಘಟನೆಯ ನಂತರ ದೇಶಾದ್ಯಂತ ವ್ಯಾಪಿಸಿದ ನರಮೇಧಕ್ಕೆ ಮತ್ತು ರಕ್ತಪಾತಕ್ಕೆ ನೀವೂ ನೈತಿಕ ಜವಾಬ್ದಾರರು. ಅನಾಹುತ ನಡೆದ ಮೇಲೆ ಕೋಮು ಸೌಹಾರ್ದಕ್ಕೆ ನೀವು ಕೊಡುತ್ತಿರುವ ಸಂದೇಶಗಳು ಮತ್ತು ಮಾಡುತ್ತಿರುವ ಪ್ರಯತ್ನಗಳು ಒಂದು ದುರ್ಬಲ ರಾಜಕೀಯ ನಾಟಕ.

ಇದ್ದಾರೆ ಮಾನವರು

ಮೇಲ್ವರ್ಗದವರೆಲ್ಲ ಕೆಟ್ಟವರು ಎಂದು
ಖಂಡಿತವು ನಾ ತಿಳಿದು ಕೊಂಡಿಲ್ಲ ಇಂದು
ಇದ್ದಾರೆ ಅಲ್ಲಿಯೂ ಮಾನವರು ನಡುವೆ
ಅಂಥವರೇದೇ ಶಕ್ತಿ ಅಮೂಲ್ಯ ಒಡವೆ

ವೈಚಾರಿಕತೆ

ವೈಚಾರಿಕತೆ ಕೂಡ ತಮ್ಮದೇ ಸೊತ್ತು
ಅನ್ನುತ್ತ ಗೋಡೆಗಳ ಕಟ್ಟಿದರು ಸುತ್ತು
ಕೆಲವಡೆಗೆ ಈ ಗೋಡೆ ಒಡೆದುದನ್ನು ಕಂಡು
ಮತಿಗೆಟ್ಟು ಚಡಪಡಿಸ ಹತ್ತಿಹರು ಇಂದು.

ತಿರಸ್ಕರಿಸಲ್ಪಟ್ಟವರು

ಪಾಶ್ಚಾತ್ಯ ದೇಶದೊಳು ತಿರಸ್ಕರಿಸಲ್ಪಟ್ಟ
ಉಂಡಾಡಿ ಚಟಪತಿಯು ಕಾವಿಯನು ಉಟ್ಟ
ಚರಸ್ ಗಾಂಜಾಗಳ ಆ ಅಮಲಿನಿಂದ
ಕುಣಿಯುತ್ತ ಹರೇಕೃಷ್ಣ ಹರೇ ಕೃಷ್ಣ ಅಂದ.

ಮನುಶಾಸ್ತ್ರದಂತೆ ಮಹಿಳೆಯರು

ಮಹಿಳೆಯರ ಕುರಿತಾಗಿ ಕಾವಿ ಪರಿವಾರ
ಹೇಳುವುದು ಏನೆಂದು ಗೊತ್ತೇನೆ ಮಾರಾ?
ನಿನಗಿಲ್ಲ ಎಲ್ಲಿಯೂ ಸಮಾನ ಹಕ್ಕು
ನೀನೊಂದು ಮನೆಯಲ್ಲಿ ಸಾಕಿರುವ ಬೆಕ್ಕು.

ಅದವಾನಿ ಕೇಳು

ಅದವಾನಿ ನಿನ್ನಿಂದ ಸಹಸ್ರಾರು ಮಂದಿ
ನೆತ್ತರಿನ ಮಡುವಿನಲಿ ಆದರೈ ಬಂದಿ
ಆದರೂ ಕನಿಕರವು ನಿನಗಿಲ್ಲ ಇಂದೆ
ನಿನಗಿಂದು ಕಾಣುವುದು ಬರೇ ಕುರ್ಚಿ ಒಂದೇ.

"ಮಹಿಳೆಯರನ್ನು ದಾಸ್ಯದಲ್ಲಿಡಬಯಸುವ ಕೋಮುಶಕ್ತಿಗಳ ಸವಾಲನ್ನು ಎದುರಿಸಿ"

ಎಐಡಿಡಬ್ಲ್ಯುಎ ಕೇಂದ್ರ ಕಾರ್ಯಕಾರಿ ಸಮಿತಿ ಕರೆ

ಮಹಿಳೆಯರ ಸ್ವಾತಂತ್ರ್ಯ ಹಾಗೂ ಘನತೆಗೆ ಒಂದು ಅತ್ಯಂತ ವಾಸ್ತವ ಬೆದರಿಕೆಯನ್ನೊಡ್ಡಿರುವ ಆರ್‌ಎಸ್‌ಎಸ್-ಬಿಜೆಪಿ-ವಿಹೆಚ್‌ಪಿ ಕೂಟದ ಪ್ರತಿಗಾಮಿ ಹಾಗೂ ಮತಾಂಧ ಸೈದ್ಧಾಂತಿಕ ಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವ ಪ್ರಶ್ನೆಯ ಮೇಲೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ(ಎಐಡಿಡಬ್ಲ್ಯುಎ)ದ ಎರಡು ದಿನಗಳ ಕೇಂದ್ರ ಕಾರ್ಯಕಾರಿ ಸಮಿತಿ ತನ್ನ ಗಮನ ಕೇಂದ್ರೀಕರಿಸಿತು. ಕೋಮುವಾದದ ಬಗ್ಗೆ ಒಂದು ವಿವರವಾದ ನಿರ್ಣಯ ಮಾತ್ರವಲ್ಲದೆ, ಕೇಂದ್ರ ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳನ್ನು ಚರ್ಚಿಸಿದೆ. ಆಂಧ್ರಪ್ರದೇಶದಲ್ಲಿ ಸೇಂದಿ-ವಿರೋಧಿ ಆಂದೋಲನ ಹಾಗೂ ತಮಿಳುನಾಡಿನಲ್ಲಿ ಶಿಶು ಹತ್ಯೆ ವಿರೋಧಿ ಪ್ರಚಾರದ ಬಗ್ಗೆ ವರದಿಗಳನ್ನು ಸಲ್ಲಿಸಿತು.

ಸಂಘಟನಾ ರಂಗದಲ್ಲಿ ಸಮಿತಿ ಬೃಂದಾ ಕಾರಟ್ ಅವರನ್ನು ಎಐಡಿಡಬ್ಲ್ಯುಎನ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿತು. ಇದುವರೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ಯಾಮಿಲಿ ಗುಪ್ತ ಅನಿವಾರ್ಯ ಕಾರಣಗಳಿಂದಾಗಿ ದೆಹಲಿಗೆ ಬರಲಾಗದುದರಿಂದ ಸಲ್ಲಿಸಿದ ರಾಜೀನಾಮೆಯನ್ನು ಸಮಿತಿ ಅಂಗೀಕರಿಸಿತು.

ಕೋಮುವಾದದ ಮೇಲೆ ನಿರ್ಣಯ

ಕೋಮುವಾದದ ಮೇಲೆ ವಿವರವಾದ ಚರ್ಚೆಯ ನಂತರ ಕೇಂದ್ರ ಕಾರ್ಯಕಾರಿ ಸಮಿತಿ ಅಂಗೀಕರಿಸಿದ ವರದಿ ಈ ಬೆದರಿಕೆಯನ್ನು ಎದುರಿಸುವಲ್ಲಿ ಕಾಂಗ್ರೆಸ್ ಸರಕಾರದ ವಿಫಲತೆಯನ್ನು ಗಮನಿಸಿತು. ಮಹಿಳಾ ಆಂದೋಲನದ ಸಂದರ್ಭದಲ್ಲಿ ಪರಿಶೀಲಿಸುವಾಗ ಶ್ರೀರಾಮ ಮತ್ತು ಧರ್ಮದ ಹೆಸರಿನಲ್ಲಿ ಮೂಲಭೂತವಾದದ ಹಾಗೂ ಕೋಮುವಾದಿ ಶಕ್ತಿಗಳು ಮಹಿಳಾ ಸಮಾನತೆಯ ಹೋರಾಟಕ್ಕೆ ಒಂದು ಸವಾಲು ಹಾಕಿವೆ, ಇದನ್ನು ನಿರ್ಲಕ್ಷಿಸಿದರೆ ಮಹಿಳಾ ಆಂದೋಲನದ ಮೇಲೆ ತೀವ್ರ ದುಷ್ಪರಿಣಾಮಗಳಾಗುತ್ತವೆ ಎಂದಿದೆ.

ಮಹಿಳೆಯರು ಕೋಮು ಹಿಂಸಾಚಾರದ ಬಹುಪಾಲು ಹೊಡೆತ ಸಹಿಸಬೇಕಷ್ಟೇ ಅಲ್ಲ, ಈ ಶಕ್ತಿಗಳ ಇಡೀ ಮೂಲಭೂತವಾದಿ ನಿಲುವೇ ಮಹಿಳೆಯರಿಗೆ ವಿರುದ್ಧವಾದದ್ದು ಎಂದು ನಿರ್ಣಯ ಅಭಿಪ್ರಾಯಪಟ್ಟಿದೆ. ಹಿಂದೂ ರಾಷ್ಟ್ರದ ಪ್ರತಿಪಾದಕರು ಜಾತಿ ಹಾಗೂ ಲಿಂಗ ಸಮಾನತೆಯ ದಿಕ್ಕಿನಲ್ಲಿ ಈಗಾಗಲೇ ನಡೆದಿರುವ ಸಾಮಾಜಿಕ ಸುಧಾರಣೆಗಳನ್ನು ರದ್ದುಮಾಡಬಯಸುವವರು. ಇದು ದೇಶದಲ್ಲಿ ಮಹಿಳೆಯರ ಸ್ಥಾನಮಾನಕ್ಕೊಂದು ದೊಡ್ಡ ಅಪಾಯ. ಬಿಜೆಪಿಯ ಕಾರ್ಯಕ್ರಮವನ್ನು ರೂಪಿಸುವವರು ಇಂತಹ ಸಾಧು-ಸಂತರೇ. ಆದ್ದರಿಂದ ಇವರೇನು ಮಹಾ ಎಂದು ತಳ್ಳಿಹಾಕುವಂತಿಲ್ಲ. ಇಂತಹ ಪ್ರಚಾರ "ಮಹಿಳೆಯರನ್ನು ದಾಸ್ಯದಲ್ಲಿಡಬಯಸುವ ಸಾಮಾಜಿಕವಾಗಿ ಸಾಂಪ್ರದಾಯಿಕ ಶಕ್ತಿಗಳಿಗೆ" ಬಲ, ಪ್ರೋತ್ಸಾಹ ನೀಡುತ್ತಿದೆ ಎಂದು ಕೇಂದ್ರ ಕಾರ್ಯಕಾರಿ ಸಮಿತಿ ಗಮನಿಸಿದೆ.

ಈ ಶಕ್ತಿಗಳ ವಿರುದ್ಧ ವ್ಯಾಪಕವಾದ, ನಿರಂತರವಾದ ಹೋರಾಟದ ಕರೆ ನೀಡಿರುವ ಎಐಡಿಡಬ್ಲ್ಯುಎನ ಕೇಂದ್ರ ಕಾರ್ಯಕಾರಿ ಸಮಿತಿ "ಅಲ್ಪಸಂಖ್ಯಾಕ ಮೂಲಭೂತವಾದಿ ಗುಂಪುಗಳು ಮುಸಲ್ಮಾನರಲ್ಲಿರುವ ಅಭದ್ರತೆಯ ಭಯದ ಭಾವನೆಯ ದುರುಪಯೋಗಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು ಗಮನಿಸಿ ಖಂಡಿಸಬೇಕು" ಎಂದೂ ಕರೆ ನೀಡಿದೆ.

"ಮಹಿಳೆಯರು ಕೋಮು ಹಿಂಸಾಚಾರದಲ್ಲಿ ಅತೀ ಹೆಚ್ಚು ತೊಂದರೆಗೊಳಗಾಗುವವರಾದ್ದರಿಂದ ತಂತಾನೇ ಅವರು ಜಾತ್ಯಾತೀತತೆಯ ಸಂದೇಶವಾಹಕರಾಗುತ್ತಾರೆ ಎಂದು ಭಾವಿಸುವುದು ಮೌಢ್ಯತನವಾಗುತ್ತದೆ. ಬದಲಾಗಿ ಮಹಿಳೆಯರು ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವಕ್ಕಾಗಿ ದನಿಯೆತ್ತುವ ಬಹುಸಂಖ್ಯಾಕ ವಿಭಾಗವಾಗಬೇಕಾದರೆ ಒಂದು ನಿರಂತರ ಸೈದ್ಧಾಂತಿಕ ಪ್ರಚಾರ ಅಗತ್ಯ" ಎಂದು ಎಐಡಿಡಬ್ಲ್ಯುಎನ ಕಾರ್ಯಕಾರಿ ಸಮಿತಿ ವಿಶ್ಲೇಷಿಸಿದೆ.

ಮನಮೋಹನಸಿಂಗ್‌ರ 'ಉದಾರ' ಆಮದು ನೀತಿಯ ಒಂದು ಉದಾಹರಣೆ.
ಮ್ಯಾಗ್ನೆಸೈಟ್ ಕಾರ್ಮಿಕರಿಗೆ ತಂದಿರುವ ಕುತ್ತು.

ಇತ್ತೀಚಿನ ಬಜೆಟ್‌ನಲ್ಲಿ ಮನಮೋಹನಸಿಂಗ್‌ರವರು ಸುಟ್ಟ ಮ್ಯಾಗ್ನೆಸೈಟ್‌ನ ಮೇಲೆ ಕಸ್ಟಮ್ಸ್ ಸುಂಕವನ್ನು ಶೇ. 70ರಿಂದ ಶೇ. 30ಕ್ಕೆ ಇಳಿಸಿದ್ದರಿಂದ ಆಮದಾದ ಮ್ಯಾಗ್ನಸೈಟ್ ಸ್ಥಳೀಯ ಮ್ಯಾಗ್ನಸೈಟ್‌ಗಿಂತ ಅಗ್ಗವಾಗಿ ಒಟ್ಟು ತಮಿಳುನಾಡಿನಲ್ಲಿ ಈ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವ 10 ಸಾವಿರ ಕಾರ್ಮಿಕರನ್ನು ತೀವ್ರವಾಗಿ ಬಾಧಿಸುತ್ತಿದೆ.

ಭಾರತದಲ್ಲಿನ ಮ್ಯಾಗ್ನಸೈಟ್ ಆಮದುಗ ಳೆಲ್ಲಾ ತಮಿಳುನಾಡಿನ ಸೇಲಂ ಜಿಲ್ಲೆಯಲ್ಲಿಯೇ ಇದೆ. ಮೂರು ಕಂಪೆನಿಗಳು ಬರ್ನ್ ಸ್ಟಾಂಡರ್ಡ್ ಕಂಪೆನಿ, ತಮಿಳುನಾಡು ಮ್ಯಾಗ್ನಸೈಟ್ ಲಿಮಿಟೆಡ್ ಹಾಗೂ ದಾಲ್ಮಿಯಾ ಮ್ಯಾಗ್ನಸೈಟ್ ತೆಗೆದು ಅದನ್ನು ಸುಟ್ಟು ಮ್ಯಾಗ್ನಸೈಟ್ ಆಗಿ ಪರಿವರ್ತಿಸುವ ಕೆಲಸ ನಡೆಸುತ್ತಿವೆ.

ದಾಲ್ಮಿಯಾ ಕಂಪೆನಿ ಆಗಲೇ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಲೇ-ಆಫ್ ಘೋಷಿಸಿದೆ. ಇತರ ಎರಡು ಕಂಪೆನಿಗಳು ಕಾರ್ಮಿಕರ ಸೌಲಭ್ಯಗಳನ್ನು, ಹಕ್ಕುಗಳನ್ನು ಹಿಸುಕಲು ಪ್ರಯತ್ನಿಸುತ್ತಿವೆ. ಸ್ವದೇಶೀ ಮ್ಯಾಗ್ನಸೈಟ್ ಉದ್ದಿಮೆಯನ್ನು ನಾಶ ಮಾಡುವ ಕೇಂದ್ರ ಸರಕಾರದ ಆತ್ಮಹತ್ಯಾಕಾರಿ ಕ್ರಮದಿಂದ ಸಿಟ್ಟಿಗೆದ್ದ ಎಲ್ಲಾ 10 ಸಾವಿರ ಕಾರ್ಮಿಕರು ಹಾಗೂ ಎಲ್ಲಾ ಕಾರ್ಮಿಕ ಸಂಘಗಳು ಈ ಸರಕಾರದ ಈ ವಿಚಿತ್ರ ನಿಲುವಿನ ವಿರುದ್ಧ ಐಕ್ಯ ಕಾರ್ಯಾಚರಣೆಗಿಳಿದಿದ್ದಾರೆ. ಮಾರ್ಚ್ 15ಕ್ಕೆ 'ಸೇಲಂ ಚಲೋ' ಹಾಗೂ ಮಾರ್ಚ್ 1 9ರಂದು ರೈಲ್ ರೋಕೋ ನಡೆಸಿದ್ದಾರೆ.

ಸಿಐಟಿಯುವಿನ ಆರ್.ಸಿಂಗಾರವೇಲು, ಇಂಟಕ್‌ನ ಕಲ್ಯಾಣಸುಂದರಂ ಹಾಗೂ ಇತರ ಕಾರ್ಮಿಕ ಮುಖಂಡರಿದ್ದ ಒಂದು ನಿಯೋಗ ಹಣಕಾಸು ಮಂತ್ರಿಗಳನ್ನು ಮಾರ್ಚ್ 20ರಂದು ಭೇಟಿಯಾಗಿ ಈ ನೀತಿಯನ್ನು ಕೈ ಬಿಡುವಂತೆ ಮನವಿ ಪತ್ರವನ್ನು ಅರ್ಪಿಸಿತು. ಲೋಕಸಭೆಯಲ್ಲಿ ಸೇಲಂ ಕ್ಷೇತ್ರವನ್ನು ಪ್ರತಿನಿಧಿಸುವ ವಿಜ್ಞಾನ-ತಂತ್ರಜ್ಞಾನ ರಾಜ್ಯ ಮಂತ್ರಿ ಪಿ.ಆರ್.ಕುಮಾರ ಮಂಗಳಂ ಕೂಡಾ ಈ ನಿಯೋಗದ ಜತೆಗಿದ್ದರು.

ಅಯೋಧ್ಯಾ ಕಾಂಡ



ಹೃದಯಗಳಲ್ಲಿ ಬಾಂಬ್ : ಚದುರಂಗ ಆತಂಕ

ಮುಂಬೈ ಅಲ್ಲದೆ ದೇಶದ ವಿವಿಧ ಕಡೆ ನಡೆದಿರುವ ಬಾಂಬ್ ಸ್ಫೋಟಕ್ಕೆ ಅಯೋಧ್ಯೆಘಟನೆಯೇ ಕಾರಣ. ಇದರಿಂದಾಗಿ ಇಡೀ ದೇಶ ವಿಚಿತ್ರ ಪರಿಸ್ಥಿತಿಯಲ್ಲಿದೆ. ಮನುಷ್ಯತ್ವ ಕಾಣೆಯಾಗುತ್ತಿದೆ ಎಂದು ಖ್ಯಾತ ಸಾಹಿತಿ ಚದುರಂಗ ವಿಷಾದಿಸಿದ್ದಾರೆ.

ಅಯೋಧ್ಯೆಯ ಘಟನೆ ಇಡೀ ದೇಶವನ್ನು ಆತಂಕಕ್ಕೆ ತಳ್ಳಿದೆಯಲ್ಲದೆ ಭಯೋತ್ಪಾದಕರಿಗೆ ಉತ್ತಮ ತಾಣವನ್ನು ನಿರ್ಮಿಸಿ ಕೊಟ್ಟಿದೆ. ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಆತಂಕವಾದ ಇಡೀ ದೇಶಕ್ಕೆ ಹಬ್ಬಿ ದೇಶದ ಬುಡ ಅಲುಗಾಡಿಸಲು ಈ ಘಟನೆ ಕಾರಣವಾಗಿದೆ. ಆದರೆ ಮಾನ್ಯ ಅಡ್ವಾಣಿ ಸಾಹೇಬರು ಅಯೋಧ್ಯೆ ಘಟನೆಗೂ ಇಂದಿನ ಬಾಂಬ್ ಸ್ಫೋಟಕ್ಕೂ ಯಾವುದೇ ಸಂಬಂಧವಿಲ್ಲ. ಇದೆಲ್ಲ ಈ ಮೊದಲಿಂದ ಇರುವ ಪಾಕಿಸ್ತಾನ್‌ನ ಚಿತಾವಣೆಯ ಫಲ ಎನ್ನುತ್ತಿದ್ದಾರೆ.

ಪ್ರಧಾನಿ ನರಸಿಂಹರಾಯರಿಗೂ ದೇಶ ಉರಿಯುತ್ತಿರುವ ಈ ಸಂದರ್ಭದಲ್ಲಿ ತಮ್ಮದೇ ತುತ್ತೂರಿ ಊದಿಕೊಳ್ಳುವ ಬಯಕೆ. ಆರ್ಥಿಕರಂಗದಲ್ಲಿ ರಾಷ್ಟ್ರ ಪ್ರಗತಿಯನ್ನು ನೋಡಿ ಸಹಿಸಲಾರದ ವಿದೇಶೀ ಶಕ್ತಿಗಳು ಈ ಕೃತ್ಯ ನಡೆಸಿವೆ ಎಂದು ಬಿಕ್ಕುತ್ತಿದ್ದಾರೆ. ಮನಮೋಹನಸಿಂಗರು ರಾಷ್ಟ್ರಕ್ಕೆ ಹಾಕಿಕೊಟ್ಟಿರುವ ಪ್ರಗತಿಯ ಹಾದಿ ಎಂತಹದು ಎಂಬುದು ಎಲ್ಲರಿಗೂ ಗೊತ್ತಿದೆ.


ಇಂತಹ ಸಂದರ್ಭದಲ್ಲಿ ನಮ್ಮ ನಡುವಿನ ಸಾಹಿತಿ ಚದುರಂಗ ಮುಕ್ತ ಮನದಿಂದ ಮಾತಾಡಿದ್ದಾರೆ. ದೇಶಕ್ಕೆ ಒದಗುತ್ತಿರುವ ವಿಪತ್ತಿನ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಮಂದಿರ ನಿರ್ಮಾಣಕ್ಕೆ ಸಹಿ ಹಾಕಲು ಒತ್ತಾಯಿಸಿದ ಆರ್‌ಎಸ್‌ಎಸ್‌ನವರಿಗೆ ಸ್ಪಷ್ಟವಾಗಿ ನಕಾರ ಹೇಳಿದ್ದಾರೆ.

ಅಯೋಧ್ಯೆಯ ಘಟನೆಯಿಂದಾಗಿ ಇಡೀ ರಾಷ್ಟ್ರದಲ್ಲಿ ಈಗ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹೃದಯದಲ್ಲಿ ಸ್ಫೋಟಕವನ್ನಿಟ್ಟುಕೊಂಡು ಓಡಾಡುವ ಸ್ಥಿತಿ ಉಂಟಾಗಿದೆ ಎಂದು ಅವರು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯ ತಮಗೆ ಗೌರವ ಡಾಕ್ಟರೇಟ್ ನೀಡಿದ್ದನ್ನು ಗೌರವಿಸುವುದಕ್ಕೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹೇಳಿದರು.

ಪ್ರೀತಿ ಇರಬೇಕಾದ ಹೃದಯಗಳಲ್ಲಿ ಇಂದು ಅಯೋಧ್ಯೆ ಘಟನೆ ಕಾರಣ ಸ್ಫೋಟಕವಿದೆ. ಹೃದಯಗಳಲ್ಲಿ ಪ್ರೀತಿ ಇಲ್ಲದಿದ್ದರೆ ಸಾಹಿತ್ಯ ಎಲ್ಲಿದೆ. ಸದ್ಯದ ಪರಿಸ್ಥಿತಿಯನ್ನು ಹೋಗಲಾಡಿಸಿ ಮನುಷ್ಯತ್ವ ಮೂಡಿಸುವುದೆ ಸಾಹಿತ್ಯದ ತುರ್ತು ಕೆಲಸ ಎಂದರು.

ಈ ರಾಷ್ಟ್ರದಲ್ಲಿ ಸುಮಾರು 14 ಕೋಟಿ ಮುಸ್ಲಿಮರಿದ್ದಾರೆ. ಅವರನ್ನೆಲ್ಲಾ ಅರಬ್ಬೀ ಸಮುದ್ರಕ್ಕೆ ಎಸೆಯಲು ಸಾಧ್ಯವೇ? ಮೊನ್ನೆ ರಾಮಮಂದಿರ ಕಟ್ಟುವ ಬಗ್ಗೆ ಸಹಿ ಸಂಗ್ರಹಿಸಲು ಒಂದು ಗುಂಪು ನನ್ನ ಬಳಿಗೆ ಬಂತು. ಆ ಗುಂಪಿನ ಜೊತೆ ಒಂದು ಗಂಟೆಗೂ ಹೆಚ್ಚು ಕಾಲ ಇದೇ ವಿಚಾರ ಚರ್ಚಿಸಿದೆ. ಸಹಿ ಮಾಡದೆ ಅವರನ್ನು ಹಿಂದೆ ಕಳಿಸಿದೆ. ಇದು ಹೀಗೆ ಮುಂದುವರಿಸದರೆ ದಿಕ್ಕು ತಪ್ಪುತ್ತವೆ ಎಂದು ವಿಷಾದ ವ್ಯಕ್ತಪಡಿಸಿದ ಚದುರಂಗ ಅವರು ಸಾಹಿತ್ಯ ಸಂಗೀತಗಳಿಂದ ನಾವು ಏನನ್ನಾದರೂ ಮಾಡಲು, ಯಾರನ್ನಾದರೂ ತಲುಪಲು ಸಾಧ್ಯವಾಗದ ಸ್ಥಿತಿಗೆ ತಂದಿಟ್ಟಿದ್ದಾರೆ ಎಂದು ನೋವು ವ್ಯಕ್ತಪಡಿಸಿದರು.

> **ಕರೆ**
>
> ಪ್ರಧಾನಿ
> ಅಧ್ವಾನಿ
> ಬಾಳಠಾ-
> ಕರೆ
> ಒಟ್ಟಾಗಿ
> ಕೊಟ್ಟಿದ್ದಾರೆ ಕರೆ
> ಕೋಮು ಸೌಹಾರ್ದ
> ತೆಗೆ!
>
> — ಎಚ್.ಡುಂಡಿರಾಜ್



ದೇಶದ ಇತರೆಡೆಯಂತೆ ಕರ್ನಾಟಕದಲ್ಲೂ ದೇಶದ ಐಕ್ಯತೆಗೆ, ಸ್ವಾತಂತ್ರ್ಯ ಹೋರಾಟದ ಪರಂಪರೆಗೆ ಬಂದಿರುವ ಕ್ರೂರ ಸವಾಲನ್ನೆದುರಿಸಲು ಎಡ- ಪ್ರಜಾಪ್ರಭುತ್ವ ಶಕ್ತಿಗಳು ತಮ್ಮ ಸೀಮಿತ ಶಕ್ತಿಯ ನಡುವೆಯೂ ಪ್ರಯತ್ನಿಸಿವೆ. ರಾಜ್ಯದ ಹಲವೆಡೆ ಕಾಣುತ್ತಿರುವ ಈ ಪೋಸ್ಟರ್ ಇದಕ್ಕೆ ಒಂದು ಉದಾಹರಣೆ.

ಕೇರಳದಲ್ಲಿ ಮತ್ತೊಂದು ಬೃಹತ್ ಮಾನವ ಸರಪಳಿ

ಮಾರ್ಚ್ *30* : ಕೋಮುವಾದೀ ಶಕ್ತಿಗಳ ವಿರುದ್ಧ ಸೆಣಸುವ ಪ್ರತಿಜ್ಞೆ ಕೈಗೊಳ್ಳುತ್ತಾ ಸಾವಿರಾರು ಕೇರಳೀಯರು ಮತ್ತೊಮ್ಮೆ 1500 ಕಿ.ಮೀ. ಉದ್ದದ ಮಾನವ ಸರಪಳಿ ರಚಿಸಿದ್ದಾರೆ. ರಾಜ್ಯ ಕೋಮುವಾದ-ವಿರೋಧಿ ಆಂದೋಳನ ಇದನ್ನು ಏರ್ಪಡಿಸಿತ್ತು.

ರಾಜಧಾನಿ ತಿರುವನಂತಪುರದಲ್ಲಿ ಈ ಸರಪಳಿಯನ್ನು ಹಿರಿಯ ಸಿಪಿಐ(ಎಂ) ಮುಖಂಡ ಇ.ಎಂ.ಎಸ್., ಮಹಾತ್ಮಾಗಾಂಧೀಜಿಯ ಮರಿ ಮೊಮ್ಮಗಳಾದ ಸರಸ್ವತಿ ಗಾಂಧಿ, ಲೇಖಕ ಎಂ.ವಾಸುದೇವನ್‌ನಾಯರ್, ಎಲ್‌ಡಿಎಫ್ ಮುಖಂಡರು, ಬುದ್ಧಿಜೀವಿಗಳು, ಕಲಾವಿದರು, ಪ್ರಸಿದ್ಧ ಕವಿ ಒ.ಎನ್.ವಿ. ಕುರುಪ್ ಪಾಲ್ಗೊಂಡು ರಾಷ್ಟ್ರೀಯ ಐಕ್ಯತೆಯ ಪ್ರತಿಜ್ಞೆಯನ್ನು ಬೋಧಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್‌ಪಿಳ್ಳೈ, ಇ.ಕೆ.ನಯನಾರ್, ವಿ. ಎಸ್.ಅಚ್ಯುತನಂದನ್, ಸಿಪಿಐ ರಾಜ್ಯ ಕಾರ್ಯದರ್ಶಿ ಪಿ.ಕೆ.ವಾಸುದೇವ್ ನಾಯರ್, ಆರ್‌ಎಸ್‌ಪಿ ಮುಖಂಡ ಬೇಬಿ ಜಾನ್, ಜನತಾದಳ ಮುಖಂಡ ಪಿ.ವಿ ಶ್ರೂಭರನ್ ಮತ್ತಿತರರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕೇರಳದ ದಕ್ಷಿಣ ತುದಿಯಲ್ಲಿರುವ ಕಲಿಯಿಕಾವಿಳದಿಂದ ಉತ್ತರ ತುದಿಯಲ್ಲಿರುವ ಮಂಜೇಶ್ವರದವರೆಗೆ ರಾಷ್ಟ್ರೀಯ ಹೆದ್ದಾರಿಗುಂಟ ಮಾನವ ಸರಪಳಿ ರಚನೆಗೊಂಡಿತು. ಅದೇ ವೇಳೆಗೆ ಈ ಹೆದ್ದಾರಿಯಲ್ಲಿ ಬರದ ಮಲೆನಾಡು ಪ್ರದೇಶಗಳಾದ ವಯನಾಡು, ಇಡುಕ್ಕಿ, ಪತ್ತನಮಿತ್ತಾ ಜಿಲ್ಲೆಗಳಲ್ಲೂ ಮಾನವ ಸರಪಳಿ ಹೆಣೆದವು.

ಕೊಚ್ಚಿಯಲ್ಲಿ ಎಲ್‌ಡಿಎಫ್ ಸಂಯೋಗದ ಎಂ.ಎಂ.ಲಾರೆನ್ಸ್, ಗಾಯಕ ಕೆ.ಜೆ. ಯೇಸುದಾಸ್, ನ್ಯಾಯಮೂರ್ತಿ ಕೃಷ್ಣಅಯ್ಯರ್, ನ್ಯಾಯಮೂರ್ತಿ ಚಂದ್ರಶೇಖರ ಮೆನನ್ ಕೈ ಹೆಣೆದರು. "ನಾನು ಸಂಗೀತ ಕಲಿಯಲಾರಂಭಿಸಿದ್ದು ಎಲ್ಲ ಧರ್ಮ- ಜಾತಿಗಳ ಜನ ಸೋದರರಂತೆ ಬಾಳುವ ನಾಡು ಕೇರಳ ಎಂಬ ಪ್ರಸಿದ್ಧ ದ್ವಿಪದಿಯೊಂದಿಗೆ. ಆದರೆ ಈಗ ನನಗೆ ಇಂದಿನ ದಿನಗಳಲ್ಲಿ ಆ ದ್ವಿಪದಿಯನ್ನು ಹಾಡಲು ನಾಚಿಕೆಯಾಗುತ್ತಿದೆ" ಎಂದರು ಗಾಯಕ ಕೆ.ಜೆ.ಯೇಸುದಾಸ್.

ಬಿಜೆಪಿ ಮತ್ತಿತರ ಅದರ ಮಿತ್ರ ಸಂಘಟನೆಗಳು ಈ ಮಾನವ ಸರಪಳಿ ಹಿಂದೂ- ವಿರೋಧಿ ಎಂದು ಪ್ರಚಾರ ನಡೆಸಲು ತೀವ್ರ ಪ್ರಯತ್ನ ನಡೆಸಿದರು. ಕಾಂಗ್ರೆಸ್(ಐ) ಇದನ್ನು ನಿರ್ಲಕ್ಷಿಸಿ ಅದು ನಡೆಯದಂತೆ ಮಾಡಬಹುದೆಂದು ಭಾವಿಸಿತು. ಅವರ ಈ ಪ್ರಯತ್ನಗಳೆಲ್ಲಾ ಅವರಿಗೇ ತಿರುಗುಬಾಣವಾಯಿತು. ಎಲ್ಲಾ ಜನವಿಭಾಗಗಳೂ ಇವರಲ್ಲಿ ಭಾಗವಹಿಸಿ ಅದನ್ನೊಂದು ಸ್ಮರಣೀಯ ಘಟನೆಯನ್ನಾಗಿ ಮಾಡಿದರು. ಕೇರಳದ ಜನತೆಯ ಮೇಲೆ ಪ್ರಮುಖ ಪ್ರಭಾವ ಬೀರಿದ ಘಟನೆಯಿದು. ದೇಶಾದ್ಯಂತ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಎಲ್ಲರಿಗೂ ಹೊಸ ಉತ್ಸಾಹ ತುಂಬಿದ ಘಟನೆಯಿದು.

ಭಗತ್ ಸಿಂಗ್ ಹುತಾತ್ಮ ದಿನ ಪಶ್ಚಿಮ ಬಂಗಾಳದಲ್ಲಿ ಕೋಮುವಾದ-ವಿರೋಧಿ ಸರ್ವಪಕ್ಷ ಸಭೆ

ಸೈದ್ಧಾಂತಿಕ ಹೋರಾಟದೊಂದಿಗೆ ಆಡಳಿತ ಕ್ರಮಗಳೂ ಕೋಮುವಾದೀ ಸವಾಲನ್ನು ಎದುರಿಸಲು ಅಗತ್ಯ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಕಲ್ಕತ್ತೆಯಲ್ಲಿ ಮಾರ್ಚ್ 23ರಂದು ಭಗತ್ ಸಿಂಗ್‌ರು ಹುತಾತ್ಮರಾದ 63ನೇ ವಾರ್ಷಿಕದ ಸಂದರ್ಭದಲ್ಲಿ ಪಶ್ಚಿಮ ಬಂಗಾಳ ಸರಕಾರ ಏರ್ಪಡಿಸಿದ್ದ ಕೋಮು ಸೌಹಾರ್ದ ಸರ್ವ ಪಕ್ಷ ಸಭೆಯಲ್ಲಿ ಹೇಳಿದರು.

ಜಾತ್ಯಾತೀತತೆ ದೇಶದ ಐಕ್ಯತೆಯ ರಕ್ಷಣೆಗಾಗಿ ಮಾತ್ರವೇ ಅಲ್ಲ, ಪ್ರಗತಿಗೂ ಅಗತ್ಯ ಎಂದು ರಾಜ್ಯಪಾಲ ನೂರುಲ್ ಹಸನ್ ಹೇಳುತ್ತಾ ಪಶ್ಚಿಮ ಬಂಗಾಳದ ಜನತೆ ಕೋಮು ಸೌಹಾರ್ದ ಹಾಗೂ ಜಾತ್ಯಾತೀತತೆಯ ತಮ್ಮ ಪರಂಪರೆಯಿಂದ ವಿಚಲಿತರಾಗುವುದಿಲ್ಲ ಎಂಬ ವಿಶ್ವಾಸ, ನಂಬಿಕೆ ತನಗಿರುವುದಾಗಿ ತಿಳಿಸಿದರು.

ಎಲ್ಲಾ ಪಕ್ಷಗಳ ಸರ್ವಾನುಮತದ ಒಂದು ನಿರ್ಣಯದ ನಂತರ ಈ ಸರ್ವ ಪಕ್ಷ ಸಭೆಯನ್ನೂ ಕರೆಯಲಾಗಿದ್ದರೂ ಯಾವ ಕಾಂಗ್ರೆ ಮುಖಂಡನೂ ಈ ಸಭೆಯಲ್ಲಿ ಭಾಗವಹಿಸುವ ಗೋಜಿಗೇ ಹೋಗಲಿಲ್ಲ.

ಈ ಸಭೆ ನಡೆದ ಸಭಾಂಗಣ ಜನಗಳಿಂದ ಕಿಕ್ಕಿರಿದು ತುಂಬಿತ್ತು. ದೇಶದ ವಿವಿಧ ಭಾಗಗಳ ಜನರ ವೇಷ-ಭೂಷಣಗಳನ್ನು ತೊಟ್ಟು ಮಕ್ಕಳು ಭಾಗವಹಿಸಿದ್ದರು. ಹಿಂದೂಸ್ತಾನಿ ಸಂಗೀತದ ಸುಪ್ರಸಿದ್ಧ ವ್ಯಕ್ತಿಗಳಾದ ಉಸ್ತಾದ್ ಅಮ್ಜದ್ ಅಲಿ ಖಾನ್, ಸಿತಾರ್ ವಾದಕ ಮಣಿಲಾಲ್‌ನಾಗ್‌ರವರು ಸಭಿಕರಿಗೆ ಸಂಗೀತ ಸುಧೆ ಉಣಿಸಿದರು.

ಕೋಮು ಗಲಭೆಗಳ ತಪ್ಪಿತಸ್ಥರ ಬಂಧನದ ಬಗ್ಗೆ ಪ್ರಧಾನಿಯಿಂದ ಭರವಸೆ ಪಡೆದ ಮಹಿಳಾ ನಿಯೋಗ

ಮಾರ್ಚ್ 31ರಂದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ ಮಹಿಳಾ ಸಂಘಟನೆಗಳ ನಿಯೋಗವೊಂದು ಇತ್ತೀಚೆಗೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ, ಗಲಭೆ ಪೀಡಿತ ಪ್ರದೇಶಗಳಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಸಾಕಷ್ಟು ಪರಿಹಾರ, ಪುನರ್ವಸತಿ ವ್ಯವಸ್ಥೆ ಕಲ್ಪಿಸಿಲ್ಲ, ಕೊಟ್ಟ ಪರಿಹಾರ ಏನಕ್ಕೂ ಸಾಲದು ಎಂಬ ದೂರುಗಳ ಬಗ್ಗೆ

ಪುಟ 8 ಕ್ಕೆ

ಏಪ್ರಿಲ್ 14, 1993

ಕಳೆದ ತಿಂಗಳು 12ರಂದು ಮುಂಬೈ ಒಂದು ಕಸಾಯಿಖಾನೆಯೇ ಆಗಿಬಿಟ್ಟಿತು. ಕೆಲವು ದಿನಗಳ ನಂತರ ಕಲ್ಕತ್ತೆಯಲ್ಲಿ. ನವದೆಹಲಿಯಲ್ಲಿಯೂ ಪುನರಾವರ್ತನೆಯಾಗುವ ಸತತ ಭಯ. ಬೆಂಗಳೂರಿನಲ್ಲೂ ಅದೇ ಭಯ. ಇತರ ನಗರಗಳಲ್ಲೂ ಅದೇ ಭಯ. ತನ್ನದೇ ಮಾಫಿಯಾ ಗ್ಯಾಂಗುಗಳನ್ನು ಬೆಳೆಸಿಕೊಂಡಿರುವ ದೇಶದ ಪ್ರತಿಯೊಂದು ನಗರದಲ್ಲೂ ಬಾಡಿಗೆ ಗೂಂಡಾಗಳು ನಡೆಸುವ ಒಂದೊಂದೂ ಭಯೋತ್ಪಾದಕ ಕೃತ್ಯ ಈ ದೇಶದ ಜಾತ್ಯಾತೀತ ಚೌಕಟ್ಟಿಗೆ ನೀಡುತ್ತಿರುವ ಮರ್ಮಾಂತಕ ಏಟು.

ಈ ಅಮಾನುಷ ಏಟುಗಳು ಏಕೆ ಎಂದು ಕಕ್ಕಾಬಿಕ್ಕಿಯಾಗಿ ಯೋಚಿಸುತ್ತಿರುವ ಜನಗಳಿಗೆ ಪ್ರಧಾನಿಗಳ ಸರಕಾರದ ಸಮಜಾಯಿಷಿಯೇನು? ಭಾರತದ 'ಉದಾರೀಕರಣ'ದಿಂದ ಉತ್ಸಾಹಗೊಂಡು ವಿದೇಶೀ ಬಂಡವಾಳ ಭಾರತಕ್ಕೆ ಬರದಿರಲಿ ಎಂದು ವಿದೇಶೀ ಶಕ್ತಿಗಳು ನಡೆಸುವ ಪ್ರಯತ್ನವಂತೆ ಇದು! ವಿದೇಶೀ ಬಂಡವಾಳ ಭಾರತಕ್ಕೆ ಬರಲು, ಭಾರತದಲ್ಲಿ ಸಮೃದ್ಧಿ ತರಲು ಕ್ಯೂ ನಿಂತಿದೆಯೇನೋ ಎಂಬಂತೆ! ಭ್ರಮೆಗಳ ಹರಡುವುದಕ್ಕೂ ಒಂದು ಮಿತಿಯಿರಬೇಕಲ್ಲವೇ?

ಇದು ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ನಡೆಸಿದ ಅತ್ಯಾಚಾರ ಆರಂಭಿಸಿದ ಸರಣಿಯ ಇನ್ನೊಂದು ಗೋಣಸು ಎಂದು ತಿಳಿಯಲು ಯಾರ ತನಿಖೆಯ ಪೂರ್ಣ ವರದಿಯನ್ನೂ ಕಾಯಬೇಕಾಗಿಲ್ಲ. ಅಯೋಧ್ಯೆಯ ನಂತರ ಕಾಶಿ, ಮಥುರಾದ ಬೆದರಿಕೆ, ಡಿಸೆಂಬರ್ ಜನವರಿ ತಿಂಗಳಲ್ಲಿ ಮುಂಬೈ, ಸೂರತ್, ಅಹಮದಾಬಾದ್ ಮತ್ತಿತರ ಕಡೆ ನಡೆದ ಹತ್ಯಾಕಾಂಡ - ಅಲ್ಪಸಂಖ್ಯಾತರಮೇಲೆ ಇಂತಹ ಬರ್ಬರ ಹಿಂಸಾಚಾರ ನಡೆಸುತ್ತಾ ತಾನು ಅಲ್ಪಸಂಖ್ಯಾತ ಮೂಲಭೂತವಾದಿಗಳಿಗೆ, ಮತಾಂಧರಿಗೆ ಹಾಲುಣ್ಣಿಸುತ್ತಿದ್ದೇನೆ ಎಂದು ಕಾವಿ ಪಡೆಗೆ ನೆನಪೇ ಆಗಲಿಲ್ಲ.

ಹೀಗೆ ಹಿಂದೂ ಹಾಗೂ ಮುಸ್ಲಿಂ ಕೋಮುವಾದಿಗಳು ಪರಸ್ಪರ ಹಾಲೆರೆಯುತ್ತಿದ್ದಾಗಲೂ ಕಾಂಗ್ರೆಸ್(ಐ) ಇಂತಹ ಕ್ರೂರ ಶಕ್ತಿಗಳ ಎದುರು ಮೊಣಕಾಲೂರುವ ತನ್ನ ಪ್ರವೃತ್ತಿಯನ್ನು ಬಿಡಲೊಲ್ಲದು. ಪಕ್ಷದೊಳಗೆ ಈ ಬಗ್ಗೆ ಆತಂಕದ ದನಿಯೆತ್ತಿದವರ ದನಿಯನ್ನು ಅಡಗಿಸುವುದೇ ಅದಕ್ಕೆ ಮುಖ್ಯವಾಗಿದೆ.

ಇಂತಹ ಕರಾಳ ಸನ್ನಿವೇಶದಲ್ಲಿ ದೇಶದ ಐಕ್ಯತೆಯ, ಕೋಮು ಸೌಹಾರ್ದದ ಹಾತೆ ಹಚ್ಚಿ ದೇಶದಲ್ಲೆಲ್ಲಾ ಕೋಮು ಶಕ್ತಿಗಳ ಭರಾಟೆಯನ್ನು ತಡೆದು ನಿಲ್ಲಿಸಲು ಯತ್ನಿಸಿದ್ದು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ. ರಾಷ್ಟ್ರೀಯ ಏಕತಾ ಆಂದೋಳನದ ಕಾರ್ಯಕ್ರಮಗಳು, 5 ಕೋಟಿ ಸಹಿ ಸಂಗ್ರಹ ಮೂಲಕ ವ್ಯಾಪಕ ಪ್ರಚಾರ, ಈ ಪ್ರಚಾರದ ಒಂದು ಪ್ರಮುಖ ಘಟ್ಟವಾಗಿ ಏಪ್ರಿಲ್ 14, 1993 ರಂದು ನವದೆಹಲಿಯಲ್ಲಿ ಭವ್ಯ ಐಕ್ಯತಾ ರ್‍ಯಾಲಿ - ಕೋಮು ಸೌಹಾರ್ದದ ರ್‍ಯಾಲಿ ನಡೆಯುತ್ತಲಿದೆ.

ಸಾರ್ವಜನಿಕ ವಲಯದ ನೌಕರರ ಮೂರು ದಿನಗಳ ಮುಷ್ಕರ ಏಕೆ?

-- ವಿ.ಜಿ.ಕೆ. ನಾಯರ್

ಕೇಂದ್ರ ಸಾರ್ವಜನಿಕ ವಲಯದ ಇಂಜಿನಿಯರಿಂಗ್ ಉದ್ದಿಮೆಗಳ ನೌಕರರು ಏಪ್ರಿಲ್ 20, 21 ಹಾಗೂ 22 ರಂದು ದೇಶಾದ್ಯಂತ ಮೂರು ದಿನಗಳ ಮುಷ್ಕರ ನಡೆಸಲಿದ್ದಾರೆ. ಈ ಮುಷ್ಕರದ ಮುಖ್ಯ ಬೇಡಿಕೆಗಳನ್ನು ಹೀಗೆಂದು ವರ್ಗೀಕರಿಸಬಹುದು:

- i ಹಣದುಬ್ಬರಕ್ಕೆ ಅನುಗುಣವಾದ ತುಟ್ಟಿಭತ್ಯೆ ದರ ಹಾಗೂ ತುಟ್ಟಿಭತ್ಯೆಯ ಸ್ಲಾಬ್ ಪದ್ಧತಿ
- ii ಹೊಸ ವೇತನ ಒಪ್ಪಂದಕ್ಕೆ ಸಂಬಂಧಪಟ್ಟ ಮಾತುಕತೆಗಳು
- iii ಮೂರನೇ ನಿವೃತ್ತಿ ಸೌಲಭ್ಯವಾಗಿ ಪೆನ್ಶನ್
- iv ಬೋನಸ್ ಮಿತಿ ರದ್ದತಿ ಹಾಗೂ ಆದಾಯ ತೆರಿಗೆ ವಿನಾಯ್ತಿ ಮಿತಿಯಲ್ಲಿ ಏರಿಕೆ.
- v ಕಾಂಟ್ರಾಕ್ಟ್ ಕಾರ್ಮಿಕರ ವೇತನಮಟ್ಟ ಹೆಚ್ಚಿಸುವುದು ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಕೆಲಸವನ್ನು ಕಾಂಟ್ರಾಕ್ಟ್‌ಗೆ ಕೊಡುವುದನ್ನು ತಪ್ಪಿಸುವುದು.
- vi ಸಾರ್ವಜನಿಕ ವಲಯದ ಶೇರುಗಳ ಮಾರಾಟ, ರೋಗಗ್ರಸ್ತ ಘಟಕಗಳ ಕ್ಲೋಶರ್ ಹಾಗೂ ಎಗ್ಸಿಟ್ ನೀತಿಗಳನ್ನು ರದ್ದುಗೊಳಿಸುವುದು.

ಈ ಅಖಿಲ ಭಾರತ ಕಾರ್ಯಾಚರಣೆಗೆ ಸಿದ್ಧತೆ ನಡೆಯುತ್ತಿರುವಾಗಲೇ ಮಾರ್ಚ್ 19 ರಂದು ಒಂದು ದಿನದ ಮುಷ್ಕರಕ್ಕೆ ಈ ಬೇಡಿಕೆಗಳಲ್ಲೇ ಕೆಲವನ್ನು ಒತ್ತಾಯಿಸುತ್ತಾ ಕರೆ ನೀಡಿದ ಇಂಟಕ್ ಕೇಂದ್ರ ಸರಕಾರದೊಂದಿಗೆ ಇವುಗಳಲ್ಲಿ ಮೂರು ಬೇಡಿಕೆಗಳ ಬಗ್ಗೆ ಒಪ್ಪಂದಕ್ಕೆ ಬಂದಿದೆ ಎಂದು ಹೇಳಿಕೊಂಡಿದೆ.

ಬೆಲೆಯೇರಿಕೆ ಸೂಚ್ಯಂಕ ಪ್ರತಿ ಪಾಯಿಂಟ್ ಏರಿಕೆಗೆ 2ರೂ ದರದ ತುಟ್ಟಿಭತ್ಯೆ ವ್ಯವಸ್ಥೆಯನ್ನು ಕೆಲವು ಫ್ಯಾಕ್ಟರಿಗಳು ಈಗಾಗಲೇ 1.4.89ರಿಂದ ಅನ್ವಯವಾಗುವಂತೆ ಜ್ಯಾರಿಗೆ ತಂದಿವೆ ಎಂದು ಸರಕಾರ ಹೇಳಿತು. ಹೊಸ ವೇತನ ಒಪ್ಪಂದಕ್ಕಾಗಿ ಮಾತುಕತೆಗಳ ನಡೆಸಬಾರದು ಎಂದಿದ್ದ ನಿರ್ಬಂಧವನ್ನು ತೆಗೆದುಹಾಕಿರುವಾಗ ಕೂಡಾ ಸರಕಾರ ಹೇಳಿದೆ. ಅಲ್ಲದೆ ಭವಿಷ್ಯನಿಧಿಗೆ ಲಗತ್ತಾದ ಒಂದು ಪೆನ್ಶನ್ ಯೋಜನೆಯನ್ನು ಜ್ಯಾರಿಗೆ ತರುವ ಬಗ್ಗೆ ಸಂಸತ್ತಿನಲ್ಲಿ ಒಂದು ಮಸೂದೆ ಮಂಡಿಸಿರುವುದಾಗಿ ಸರಕಾರ ಹೇಳಿತು.

ಇಂಟಕ್ ಹಾಗೂ ಸರಕಾರದ ನಾಟಕ ಈಗಾಗಲೇ ಸಾರ್ವಜನಿಕ ವಲಯದ ಆಂದೋಲನವನ್ನು ಸ್ವಲ್ಪ ಅಸ್ತವ್ಯಸ್ತಗೊಳಿಸಿದೆ. ಕೆಲವರು ಮೂರು ದಿನಗಳ ಮುಷ್ಕರದ ಉದ್ದೇಶ ಈಗೇನೂ ಉಳಿದಿಲ್ಲ ಎನ್ನುತ್ತಿದ್ದಾರೆ. ಆದರೆ ಇದು ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ಬಗೆಯುವ ದ್ರೋಹ ಎಂದು ಸಿಐಟಿಯು ಭಾವಿಸುತ್ತದೆ. ಈ ಮುಷ್ಕರ ಕಾರ್ಯಾಚರಣೆಗೆ ಕರೆ ನೀಡಿರುವ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ, ಸಿಪಿಎಸ್‌ಟಿಯು ಇದುವರೆಗೆ ಮುಷ್ಕರದ ಕರೆಯನ್ನು ಹಿಂತೆಗೆದುಕೊಂಡಿಲ್ಲ. ದೇಶದ ಬೇರೆಡೆಗಳಲ್ಲಾ ಮುಷ್ಕರಕ್ಕೆ ಸಿದ್ಧತೆ ನಡೆಯುತ್ತಿದ್ದರೂ ಬೆಂಗಳೂರಿನಲ್ಲಿ ಎಂದಿನಂತೆ ಇಂಟಕ್ ಹಾಗೂ ಸರಕಾರದ ಬಾಲಕ್ಕೆ ಜೋತು ಬೀಳುವ ಪ್ರಯತ್ನ ಸಾಗಿದೆಯೆಂದು ನಮಗೆ ತಿಳಿದು ಬಂದಿದೆ. ಆದ್ದರಿಂದಲೇ ಈ ಮುಷ್ಕರಕ್ಕೆ ಸಂಬಂಧಪಟ್ಟಂತೆ ಕೆಲವು ಅಂಶಗಳನ್ನು ಸ್ಪಷ್ಟಗೊಳಿಸಬೇಕಾಗಿದೆ. ಈ ಪುಟಗಳಲ್ಲಿ ಇಂತಹ ಎರಡು ಮುಖ್ಯ ಅಂಶಗಳಾದ ತುಟ್ಟಿಭತ್ಯೆ ಹಾಗೂ ಪೆನ್ಶನ್ ಬಗ್ಗೆ ಲೇಖನಗಳನ್ನು ನೋಡಿ:

ಬೆಲೆಯೇರಿಕೆಯಿಂದ ಪೂರ್ಣಪರಿಹಾರಕ್ಕಾಗಿಹೋರಾಟದಪ್ರಶ್ನೆ : ತುಟ್ಟಿಭತ್ಯೆಯ ಪ್ರಶ್ನೆ

-- ವಿ.ಜಿ.ಕೆ. ನಾಯರ್

ಸಾರ್ವಜನಿಕ ವಲಯದ ಕಾರ್ಮಿಕರು ಬಹಳ ಕಾಲದಿಂದ ತುಟ್ಟಿಭತ್ಯೆ ಕುರಿತಂತೆ ಒಂದು ತರ್ಕ ಬದ್ಧ ನೀತಿ ರೂಪಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ತುಟ್ಟಿಭತ್ಯೆ ಎಂದರೆ ಬೆಲೆಯೇರಿಕೆಯಿಂದಾಗಿ ಸಂಬಳ ಅಥವಾ ಕೂಲಿಹಣದ ನಿಜವಾದ ಬೆಲೆಯಲ್ಲಾಗುವ ಇಳಿಕೆಯನ್ನು ತುಂಬಲೆಂದು ಕೊಡಬೇಕಾದ ಹಣ. ಸಾರ್ವಜನಿಕ ವಲಯದ ಕಾರ್ಮಿಕರಿಗೆ ನೀಡಲಾಗುವ ತುಟ್ಟಿಭತ್ಯೆಯ ವ್ಯವಸ್ಥೆಯನ್ನು 'ಕೈಗಾರಿಕಾ ತುಟ್ಟಿಭತ್ಯೆ' ಎನ್ನಲಾಗುತ್ತದೆ. ಈ ವ್ಯವಸ್ಥೆ ಬೆಲೆಯೇರಿಕೆಯಿಂದಾಗಿ ಕಾರ್ಮಿಕರ ಆದಾಯದಲ್ಲಿ ಆಗುವ ಖೋತಾವನ್ನು ಪೂರ್ಣವಾಗಿ ತುಂಬಿಸಿಕೊಡುವುದಿಲ್ಲ. ಏಕೆಂದರೆ ತುಟ್ಟಿಭತ್ಯೆ ದರ ಈ ವ್ಯವಸ್ಥೆಯಲ್ಲಿ ಸಂಬಳ 408 ಅನುಗುಣವಾಗಿ ಇರದೆ, ಎಲ್ಲ ಸಂಬಳ ಮಟ್ಟಗಳಿಗೂ ಒಂದೇ ದರವಿರುತ್ತದೆ. ಅಂದರೆ ಬೆಲೆಯೇರಿಕೆಯಿಂದಾಗಿ ಬಳಕೆದಾರರ ಬೆಲೆ ಸೂಚ್ಯಂಕದಲ್ಲಿ ಒಂದು ಪಾಯಿಂಟ್ ಹೆಚ್ಚಳವಾದರೆ ತುಟ್ಟಿಭತ್ಯೆ ರೂ. 1.30 ಹೆಚ್ಚುತ್ತಿತ್ತು. ನಂತರ ಈ ದರವನ್ನು ಕಾರ್ಮಿಕರ ಹೋರಾಟಗಳಿಂದಾಗಿ 1.50ಕ್ಕೆ 1.65ಕ್ಕೆ ಹೆಚ್ಚಿಸಲಾಯಿತು. ಈಗ 2ರೂಗೆ ಹೆಚ್ಚಿಸಲಾಗಿದೆ. ಆದರೆ ಈ 2ರೂ ಹೆಚ್ಚಳ ರೂ. 1000 ಸಂಬಳ ಬರುತ್ತಿರುವವರಿಗೂ ಅಷ್ಟೇ, ರೂ. 3000 ಸಂಬಳ ಬರುವವರಿಗೂ ಅಷ್ಟೇ. ಇದರಿಂದಾಗಿ ಆಡಳಿತ ಮಂಡಳಿ ಹಾಗೂ ಕಾರ್ಮಿಕ ಸಂಘಗಳು ಒಪ್ಪಿಕೊಂಡು ಜ್ಯಾರಿಗೆ ತರುವ ವೇತನಗಳ ಮಟ್ಟ ಬೆಲೆಯೇರಿಕೆಯಿಂದಾಗಿ ಇಳಿಯುತ್ತಾ ಹೋಗುತ್ತದೆ.

ಉದಾಹರಣೆಗಳನ್ನು ನೋಡೋಣ-

1987ರಲ್ಲಿ ಬಳಕೆದಾರರ ಬೆಲೆ ಸೂಚ್ಯಂಕ 600 ಪಾಯಿಂಟ್ ಇದ್ದಾಗ ಕನಿಷ್ಟ ಸಂಬಳ ರೂ. 1200 ಎಂದಿಟ್ಟುಕೊಳ್ಳೋಣ. ಅಂದರೆ ಪ್ರತಿ ಒಂದು ಪಾಯಿಂಟಿಗೆ 2 ರೂಯೆಂದಂತಾಯಿತು[1200 - 600]. 1991-92ರಲ್ಲಿ ಬೆಲೆ ಸೂಚ್ಯಂಕ 1200 ಪಾಯಿಂಟಿನಷ್ಟಾಗಿ ಅಂದರೆ 600 ಪಾಯಿಂಟಿನಷ್ಟು ಹೆಚ್ಚಿದೆ. ಅಂದರೆ 2ರೂ ದರದಲ್ಲಿ 1200ರೂ ತುಟ್ಟಿಭತ್ಯೆ ಸೇರಿ ಒಟ್ಟು ಸಂಬಳ 2400 ರೂ. ಆಗುತ್ತದೆ.

ಇದೇ ಬಳಕೆದಾರ ಸೂಚ್ಯಂಕ ಮಟ್ಟದಲ್ಲಿ ಇನ್ನೊಂದು ಉದಾಹರಣೆಯನ್ನು ಪರಿಶೀಲಿಸೋಣ. ಸಂಬಳ 1987ರಲ್ಲಿ 1500ರೂ. ಎಂದಿಟ್ಟುಕೊಳ್ಳೋಣ. ಅಂದರೆ ಪ್ರತಿ ಪಾಯಿಂಟಿಗೆ **1500 – 600 = 2.50** ರೂ. ಹೆಚ್ಚಬೇಕು. ಈ ಲೆಕ್ಕದಲ್ಲಿ 1991-92ರಲ್ಲಿ ಬೆಲೆ ಸೂಚ್ಯಂಕ 1200 ಆದಾಗ, ಅಂದರೆ 600 ಪಾಯಿಂಟಿನಷ್ಟು ಏರಿದಾಗ ತುಟ್ಟಿಭತ್ಯೆ 600 x **2.50 = 1500** ರೂ. ಆಗಬೇಕಿತ್ತು. ಅಂದರೆ 1991-92ರಲ್ಲಿ ಒಟ್ಟು ಸಂಬಳ 3000 ರೂ. ಆದರೆ ಮಾತ್ರವೇ 1987ರ 1500 ರೂ. ಮಟ್ಟವನ್ನು ಉಳಿಸಿಕೊಂಡಂತಾಗಿದೆ. ಏಕೆಂದರೆ ಬೆಲೆಗಳು ದ್ವಿಗುಣಗೊಂಡಿವೆ. ಆದರೆ ಕೈಗಾರಿಕಾ ತುಟ್ಟಿಭತ್ಯೆ ವ್ಯವಸ್ಥೆಯಲ್ಲಿ ಇಷ್ಟು ಸಂಬಳ ದೊರೆಯುವುದಿಲ್ಲ. ಎಲ್ಲರಿಗೂ 2ರೂ. ದರದಿಂದಾಗಿ 1987ರಲ್ಲಿ 1500ರೂ. ಸಂಬಳದವನಿಗೂ ಸಿಗುವ ತುಟ್ಟಿಭತ್ಯೆ 1200ರೂ. ಅಂದರೆ 1991-92ರಲ್ಲಿ ಒಟ್ಟು ಸಂಬಳ 3000ರೂ. ಇರಬೇಕಾದಲ್ಲಿ 2700ರೂ ಮಾತ್ರ ಆಗಿರುತ್ತದೆ. ಅಂದರೆ 1987ರಲ್ಲಿ ಒಪ್ಪಿದಷ್ಟು ಸಂಬಳದ ಮಟ್ಟ ಈ ಬೆಲೆಯೇರಿಕೆ ಹಾಗೂ ಕೈಗಾರಿಕಾ ತುಟ್ಟಿಭತ್ಯೆಯ ವ್ಯವಸ್ಥೆಯಿಂದಾಗಿ ಕೆಳಗಿಳಿದು 300ರೂನಷ್ಟು ಕಡಿತವಾಗುತ್ತದೆ. ಇದೇ ರೀತಿ 1987 ರಲ್ಲಿ ಸಂಬಳ 1800ರೂ ಇದ್ದಿದ್ದರೆ 1991-92ರ ವೇಳೆಗೆ ಬೆಲೆಯೇರಿಕೆಯಿಂದಾಗಿ 600 ರೂ. ಕಳಕೊಂಡಂತಾಗುತ್ತದೆ. ಹೀಗೆ ಈ ಕೈಗಾರಿಕಾ ತುಟ್ಟಿಭತ್ಯೆ ವ್ಯವಸ್ಥೆಯಲ್ಲಿ ಬೆಲೆಯೇರಿಕೆಯಿಂದಾಗಿ 1200ರೂಗಿಂತ ಹೆಚ್ಚಿನ ಸಂಬಳವಿರುವ ಎಲ್ಲರಿಗೂ ನಿಜವಾದ ಸಂಬಳದಲ್ಲಿ ಕಡಿತವಾಗಿ ಜೀವನಮಟ್ಟ ಇಳಿಯುತ್ತಿದೆ.

ಬೆಲೆಯೇರಿಕೆಗೆ ಭಾಗಶಃ ಪರಿಹಾರ

ಕೇಂದ್ರ ಸಾರ್ವಜನಿಕ ವಲಯದ ಕನಿಷ್ಟ ಸಂಬಳ ಬಳಕೆದಾರ ಬೆಲೆ ಸೂಚ್ಯಂಕ 672 ಇದ್ದಾಗ 1207ರೂ. ತುಟ್ಟಿಭತ್ಯೆ ದರ **1207 — 672** ಅಂದರೆ 1.80ರೂ ಆಗಬೇಕಿತ್ತು ಬೆಲೆ ಸೂಚ್ಯಂಕ ದ್ವಿಗುಣಗೊಂಡು 1344 ಪಾಯಿಂಟ್ ತಲುಪಿದಾಗ ಕನಿಷ್ಟ ಸಂಬಳ ಕೂಡಾ 2414ರೂ. ಆಗಬೇಕಿತ್ತು. ಆದರೆ ಸರಕಾರ ಪಾಯಿಂಟಿಗೆ ರೂ. 1.65 ಮಾತ್ರ ತುಟ್ಟಿಭತ್ಯೆಯಾಗಿ ಕೊಟ್ಟದ್ದರಿಂದ ಸಂಬಳ 2316ರೂ. ಆಗಿದೆಯಷ್ಟೇ. ಅಂದರೆ ಕನಿಷ್ಟ ಕೂಲಿಯ ಮಟ್ಟದಲ್ಲೇ 98ರೂ.ಗಳ ಕಡಿತವಾಗಿದೆ. ಈಗ ಸರಕಾರ 1.4.89 ರಿಂದ 2.00ರೂ. ತುಟ್ಟಿಭತ್ಯೆ ದರಕ್ಕೆ ಒಪ್ಪಿರುವುದರಿಂದ ಕನಿಷ್ಟ ಸಂಬಳ ಮಟ್ಟದಲ್ಲಿ ಈ ಕಡಿತ ತಪ್ಪಿದಂತಾಗುತ್ತಿದೆ. ಆದರೆ ಬೇರೆ ಸಂಬಳ ಮಟ್ಟಗಳಲ್ಲಿ ಅಂದರೆ ಸಂಬಳ 1207ರೂ.ಗಿಂತ ಹೆಚ್ಚಿರುವವರಿಗೆ ಈ ಇಳಿತ ಮುಂದುವರಿಯುತ್ತದೆ.

ಉದಾಹರಣೆಗೆ 1301ರೂ. ಮೂಲ ವೇತನ ಹಾಗೂ 420ರೂ. ಸ್ಥಿರ ತುಟ್ಟಿಭತ್ಯೆ ಅಂದರೆ ಒಟ್ಟು ಸಂಬಳ 1721ರೂ ಇದ್ದ ಒಬ್ಬ ಕಾರ್ಮಿಕರಿಗೆ(672 ಪಾಯಿಂಟಿನಲ್ಲಿ) ಬೆಲೆಯೇರಿಕೆಯಿಂದ ಕಡಿತವಾಗದಿರಬೇಕಾದರೆ ಪ್ರತಿ ಪಾಯಿಂಟಿಗೆ 2.56ರೂ. ತುಟ್ಟಿಭತ್ಯೆ(1721 - 672) ಇರಬೇಕಿತ್ತು. ಅಂದರೆ ಪ್ರತಿ ಪಾಯಿಂಟಿನಷ್ಟು ಬೆಲೆಯೇರಿಕೆಯಾದಾಗ ಈ ಕಾರ್ಮಿಕನಿಗೆ 0.56 ಪೈಸೆ ನಷ್ಟವಾಗುತ್ತಿದೆ. ಕಳೆದ ವೇತನ ಒಪ್ಪಂದದ ನಂತರ 600ಕ್ಕೂ ಹೆಚ್ಚು ಪಾಯಿಂಟಿಗಳಷ್ಟು ಬೆಲೆಯೇರಿಕೆಯಾಗಿರುವುದರಿಂದ ಈ ಕಾರ್ಮಿಕನಿಗೆ 330ರೂ.ಗಿಂತಲೂ ಹೆಚ್ಚು ಸಂಬಳ ಕಡಿತವಾದಂತಾಗುತ್ತಿದೆ.

ಸಾರ್ವಜನಿಕ ಉದ್ದಿಮೆಗಳಲ್ಲಿ ಇರುವ ಈ ಕೈಗಾರಿಕಾ ತುಟ್ಟಿಭತ್ಯೆ ವ್ಯವಸ್ಥೆಯಲ್ಲಿ ಮೇಲಿರುವ ಉದಾಹರಣೆಯಲ್ಲಿ ನೋಡಿರುವಂತೆ ಒಂದು ಸ್ಥಿರ ತುಟ್ಟಿಭತ್ಯೆ ಅಂಶವೂ ಇದೆ. ಇದು ಬೇರೆ- ಬೇರೆ ಸಂಬಳ ಶ್ರೇಣಿಗಳಲ್ಲಿ(ಸ್ಲಾಬ್‌ಗಳಲ್ಲಿ) ಬೇರೆ ಬೇರೆಯಾಗಿದೆ. 1.1.87 ರಂದು ಇದು ಕನಿಷ್ಟ 100ರೂನಿಂದ ಗರಿಷ್ಟ 420ರೂ. ವರೆಗೆ ಇತ್ತು. ಅಥವಾ 1.4.89ರಂದು ರೂ. 200 ನಿಂದ 520ರವರೆಗಿತ್ತು. ಈಗ 2ರೂ. ದರಕ್ಕೆ ಸರಕಾರ ಒಪ್ಪಿರುವುದರಿಂದ 600 ಪಾಯಿಂಟುಗಳ ನಂತರ ಈ ಸ್ಲಾಬ್‌ಗಳೂ ಏರಬೇಕಿತ್ತು. ಮೇಲಿನ ಉದಾಹರಣೆಯಲ್ಲಿ ಸ್ಥಿರ ತುಟ್ಟಿಭತ್ಯೆ 420 ರೂನಿಂದ 750ರೂಗೇರಬೇಕಿತ್ತು.

ಸರಕಾರದ ಇತ್ತೀಚಿನ ಹೇಳಿಕೆ ಈ ಅಂಶವನ್ನು ನಿರ್ಲಕ್ಷಿಸಿದೆ. ಆದ್ದರಿಂದ ಕನಿಷ್ಟ ಸಂಬಳಕ್ಕಿಂತ ಹೆಚ್ಚು ಸಂಬಳ ಪಡೆಯುತ್ತಿರುವ ಎಲ್ಲಾ ಕಾರ್ಮಿಕರಿಗೂ ಈಗ ಬೆಲೆಯೇರಿಕೆಯಿಂದಾಗುತ್ತಿರುವ ಸಂಬಳಕಡಿತದ ನಷ್ಟ ಹಾಗೆಯೇ ಮುಂದುವರಿಯುತ್ತದೆ.

ನೂರು ಶೇಕಡಾ ಪರಿಹಾರ

ಬೆಲೆಯೇರಿಕೆಯಿಂದಾಗುವ ನಷ್ಟಕ್ಕೆ ಪೂರ್ಣ ಪರಿಹಾರ ಅಂದರೆ ನೂರು ಶೇಕಡಾ ಪರಿಹಾರ - ಇದು ಕಾರ್ಮಿಕರು ಎತ್ತಿರುವ ಬೇಡಿಕೆಯ ಹಿಂದಿರುವ ತರ್ಕ. ಈ ಹಿನ್ನೆಲೆಯಲ್ಲಿ ಸರಕಾರಿ ನೌಕರರು ಹಾಗೂ ಎಲ್‌ಐಸಿ ಬ್ಯಾಂಕುಗಳಂತಹ ಹಣಕಾಸು ಸಂಸ್ಥೆಗಳ ನೌಕರರ ತುಟ್ಟಿಭತ್ಯೆಯ ದರದೊಡನೆ ಹೋಲಿಸಿ ನೋಡೋಣ.

ಎಲ್‌ಐಸಿಯಲ್ಲಿ ಹಿಂದಿನ ವೇತನ ಒಪ್ಪಂದದಲ್ಲಿ ಮೂಲವೇತನವನ್ನು ಬೆಲೆ ಸೂಚ್ಯಂಕದ 600 ಪಾಯಿಂಟಿನಲ್ಲಿ ನಿರ್ಧರಿಸಲಾಯಿತು. 2500ರೂ. ಮೂಲ ವೇತನದವರೆಗೆ ಬೆಲೆಯೇರಿಕೆಯಿಂದ ನೂರು ಶೇಕಡಾ ಪರಿಹಾರ ದೊರೆಯುತ್ತಿದೆ. ಬೆಲೆ ಸೂಚ್ಯಂಕದ ಪ್ರತಿ ನಾಲ್ಕು ಪಾಯಿಂಟ್ ಏರಿಕೆಗೆ ಮೂಲ ವೇತನದ **0.67%** ರಷ್ಟು ತುಟ್ಟಿಭತ್ಯೆ ನೀಡುವ ಮೂಲಕ ಇದನ್ನು ಕೊಡಲಾಗುತ್ತದೆ. ಇದರಿಂದಾಗಿ ಕನಿಷ್ಟ ಸಂಬಳ 785ರೂ.(600 ಪಾಯಿಂಟ್ ಇದ್ದಾಗ) ಪಡೆಯುತ್ತಿದ್ದ ನೌಕರರಿಗೆ ಬೆಲೆ ಸೂಚ್ಯಂಕ 1200 ಪಾಯಿಂಟ್ ತಲುಪಿದಾಗ 788.93 ತುಟ್ಟಿಭತ್ಯೆ ಸಿಗುತ್ತದೆ. ಅದೇ ರೀತಿ 1210ರೂ. ಮೂಲ ವೇತನ ಪಡೆದಿದ್ದ ನೌಕರರಿಗೆ 1216.05 ತುಟ್ಟಿಭತ್ಯೆ ಸಿಗುತ್ತದೆ. 2400 ಮೂಲವೇತನವಿದ್ದವರಿಗೆ 2472.30ರೂ. ತುಟ್ಟಿಭತ್ಯೆ ಸಿಗುತ್ತದೆ.

ಮೂಲವೇತನ 2500ರೂಗಿಂತ ಜಾಸ್ತಿಯಿದ್ದ ನೌಕರರಿಗೆ ನೂರು ಶೇಕಡಾ ಪರಿಹಾರ ಸಿಗುವುದಿಲ್ಲ. 2500ರೂಗಿಂತ ಹೆಚ್ಚಿನ ಮೂಲವೇತನಕ್ಕೆ 75 ಶೇಕಡಾ ಪರಿಹಾರ ಮಾತ್ರ ದೊರೆಯುತ್ತದೆ. ಅಂದರೆ 2580ರೂ. ಮೂಲ ವೇತನ ಇರುವ ನೌಕರರಿಗೆ 2500ರೂವರೆಗೆ ನೂರು ಶೇಕಡಾ ಪರಿಹಾರ ಅಂದರೆ ಮೂಲ ವೇತನ 0.6 7 ಶೇಕಡಾ ತುಟ್ಟಿಭತ್ಯೆ, ಉಳಿದ 80ರೂ. ಗೆ 75ಶೇ.

ಕಾಮಧೇನು ನೀಡಿರುವ(ಕಪ್ಪು) ಹಾಲು

-- ಜಿ.ಎಸ್. ಮಣಿ

ಸಾರ್ವಜನಿಕ ವಲಯದ ಕೋಲ್ ಇಂಡಿಯ ಲಿಮಿಟೆಡ್(ಸಿಐಎಲ್) 1992-93ರ ಸಾಲಿಗೆ ಅಧಿಕ ಕಲ್ಲಿದ್ದಲು ಸರಬರಾಜು ಮಾಡಿದೆ. ಉಕ್ಕು ಉದ್ಯಮಕ್ಕೆ ಅದು ನೀಡಿರುವ ಕಲ್ಲಿದ್ದಲು 45 ಮಿಲಿಯ ಡಾಲರುಗಳಷ್ಟು ಆಮದನ್ನು ಕಡಿಮೆಗೊಳಿಸಿದೆ. ಬಹು ಅಮೂಲ್ಯವಾದ ವಿದೇಶೀ ವಿನಿಮಯವನ್ನು ದೇಶಕ್ಕೆ ಉಳಿಸಿದೆ.

ಖಾಸಗಿ ಉದ್ಯಮಗಳ ಪ್ರಶಂಸೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಬಗೆಗೆ ಅಪಪ್ರಚಾರ ಸತತವಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಸಿಐಎಲ್‌ನ ಈ ಸಾಧನೆ ಚೇತನದಾಯಕವಲ್ಲವೇ? ಸಾರ್ವಜನಿಕ ವಲಯದ ಉದ್ಯಮಗಳ ಪ್ರಾಮುಖ್ಯತೆಯನ್ನು ಇದು ತೋರುತ್ತದಲ್ಲವೇ?

ಅಂಬಲಿ ಕುಡಿಯುವವನಿಗೆ ಜೋರು ಮೀಸೆ?

ನಮ್ಮ ಕೇಂದ್ರ ಹಣಕಾಸು ಮಂತ್ರಿಗಳು ತಮ್ಮ ಘನ ಉದ್ದೇಶವನ್ನು ಘೋಷಿಸಿದ್ದಾರೆ. ಭಾರತವನ್ನು ಆರ್ಥಿಕವಾಗಿ ಒಂದು ಅತ್ಯಂತ ಪ್ರಬಲ ರಾಷ್ಟ್ರವನ್ನಾಗಿ ಮಾಡುವ ಹಂಬಲ ಅವರದ್ದು. ಮತ್ತು ಅವರ ಸರಕಾರದ್ದಂತೆ. ಭಾರತದಲ್ಲಿರುವ ಅಧಿಕಾರಶಾಹಿಯನ್ನು ಸಿದೆಬಡಿದು 21ನೇ ಶತಮಾನದ ವೇಳೆಗೆ ಭಾರತ ಜಾಗತಿಕ ಮಟ್ಟದಲ್ಲಿ ಒಂದು ಗಣನೀಯ ದೇಶವಾಗಬೇಕು ಎಂದು ಅವರು ಹೇಳಿದ್ದಾರೆ.


ಈ ಮಾತನ್ನು ಯಾರಾದರೂ ನಂಬಿಯಾರೇ? ಭಾರತ ಪ್ರಬಲ ರಾಷ್ಟ್ರವಾಗುವುದು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಪ್ರಬಲನಾದಾಗ ಅಲ್ಲವೇ? ಹೊಸ ಆರ್ಥಿಕ ನೀತಿಯಡಿ ಬಹುತೇಕ ಜನ ಬಡವರಾಗಿ ಕೆಲವೇ ಕೆಲವರು ಶ್ರೀಮಂತರಾಗುವಾಗ ಈ ದೇಶ 21ನೇ ಶತಮಾನದಲ್ಲಿ ಏನಾಗಬಹುದು?

ಇಂತಹ ಮಾತುಗಳನ್ನು ಆಡುತ್ತಿರುವ ಈ ಮನಮೋಹನಸಿಂಗರು ಇನ್ನೂ ಒಂದು ಮಾತನ್ನು ಹೇಳುತ್ತಾರೆ. "ಆರ್ಥಿಕ ಸುಧಾರಣೆಗಳು ಫಲ ನೀಡಲು ದಶಕಗಳು ಬೇಕಾಗುತ್ತವೆ" ಎಂದು. ಅಂದರೆ ಇಂದಿನ ಅವರ ಕ್ರಮಗಳು ದಶಕಗಳ ನಂತರ ಫಲ ನೀಡುವುದಾದರೆ ಆ ಫಲ ಉಣ್ಣಲು ನಮ್ಮ ಜನ ದಶಕಗಳ ಕಾಲ ಉಪವಾಸವಿರಬೇಕೇ? ಈಗಂತೂ ಅಂತಹ ಲಕ್ಷಣಗಳೇ ಕಾಣುತ್ತಿರುವುದು ಅಲ್ಲವೇ?

ಬಡವರಿಗಾಗಿ ಹಣದುಬ್ಬರ!!

ಹುದ್ಬೇರಿಸಬೇಡಿ. ಈ ಹಣದುಬ್ಬರ ಬಡವರಿಗಾಗಿ ಯಾಕೆಂದರೆ 'ಅದು ಇಳಿಯುತ್ತಿದೆ' ಎಂದು ಸರಕಾರ ದೊಬ್ಬಿಡುತ್ತಿದೆ. ಹಣದುಬ್ಬರದ ಇಳಿತ ಖಂಡಿತವಾಗಿಯೂ ಬಡವರಿಗಾಗಿ. ಇದರಲ್ಲಿ ಸಂಶಯವೇನೂ ಇಲ್ಲ.

ಆದರೆ ನಿಜದಲ್ಲಿ ಆಗುತ್ತಿರುವುದೇನು. ಬೆಂಗಳೂರಿನ ಭಾರತೀಯ ಸಾಮಾಜಿಕ ಆರ್ಥಿಕ ಅಧ್ಯಯನ ಕೇಂದ್ರ ಇತ್ತೀಚೆಗೆ ಅಧ್ಯಯನವೊಂದನ್ನು ನಡೆಸಿತು. ಈ ವರ್ಷದ ಬಜೆಟ್ ಮಂಡನೆಯ ನಂತರ ಹಣದುಬ್ಬರ ಕಡಿಮೆಯಾಗಿದೆಯೋ ಎಂಬುದನ್ನು ತಿಳಿದುಕೊಳ್ಳಲು ಈ ಅಧ್ಯಯನ. ಈ ಅಧ್ಯಯನದಿಂದ ಬೆಳಕಿಗೆ ಬಂದ ಅಂಶಗಳೇನು ಗೊತ್ತೆ?



ನರಸಿಂಹರಾವ್ ಸರಕಾರದ 22ನೇ ತಿಂಗಳಲ್ಲಿ

ವಿವಿಧ ಗುಣಮಟ್ಟದ ಅಕ್ಕಿಯ ಬೆಲೆ ಶೇ. 31.5ರಿಂದ ಶೇ. 46.5ರಷ್ಟು ಏರಿದೆ. ರಾಗಿಯ ಬೆಲೆ ಶೇ. 26.31ರಷ್ಟು, ಜೋಳದ ಬೆಲೆ ಶೇ. 45.45ರಷ್ಟು, ತೊಗರಿಯ ಬೆಲೆ ಶೇ,. 24.24 ರಷ್ಟು, ಹೆಸರುಕಾಳಿನ ಬೆಲೆ ಶೇ. 22.22ರಷ್ಟು, ಕಡಲೆಕಾಳಿನ ಬೆಲೆ ಶೇ. 11.53ರಷ್ಟು, ಸಕ್ಕರೆಯ ಬೆಲೆ ಶೇ. 21.05ರಷ್ಟು ಮತ್ತು ಬೆಲ್ಲದ ಬೆಲೆ ಶೇ. 50ರಷ್ಟು ಏರಿದೆಯಂತೆ.

ಹಾಗಾದರೆ ಹಣದುಬ್ಬರ ಕಡಿಮೆಯಾಗಿರುವುದು ಎಲ್ಲಿ?

ಭಾರತದ ವಿಮಾ ಕ್ಷೇತ್ರಕ್ಕೆ ಗಂಟು ಬೀಳುವ ಆರ್.ಎನ್. ಮಲ್ಹೋತ್ರ

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲು ನರಸಿಂಹಮ್ ಎಂಬುವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆ ಸಮಿತಿ ಖಾಸಗೀಕರಣವೂ ಸೇರಿದಂತೆ ಹಲವು ಜನ ವಿರೋಧಿ, ಐಎಂಎಫ್, ವಿಶ್ವಬ್ಯಾಂಕ್ ಪರ ಶಿಫಾರಸ್ಸುಗಳನ್ನು ಮಾಡಿರುವುದು ಸರಿಯಷ್ಟೇ.

ಈಗ ವಿಮಾ ಕ್ಷೇತ್ರಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ಆರ್. ಎನ್.ಮಲ್ಹೋತ್ರ ಗಂಟು ಬೀಳಲಿದ್ದಾನೆ. ಈತನ ನೇತೃತ್ವದಲ್ಲಿ ವಿಮಾ ಕ್ಷೇತ್ರ ಸುಧಾರಣೆ ಬಗೆಗೆ ಅಧ್ಯಯನ ಮಾಡಲು ಕೇಂದ್ರ ಸರಕಾರ ಸಮಿತಿಯೊಂದನ್ನು ರಚಿಸಿದೆ. ಡಂಕೆಲ್ ಪ್ರಸ್ತಾವಗಳು ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನದ ಒತ್ತಡಗಳು ಆಗಲೇ ಭಾರತದ ಮೇಲೆ ಇದ್ದವು. ಭಾರತದ ಈ ಸೇವಾ ಕ್ಷೇತ್ರವನ್ನು ತೆರೆದರೆ ವಿದೇಶೀ ಕಂಪೆನಿಗಳು ಹೇರಳ ಲಾಭ ಪಡೆಯಬಹುದು.

ವಿದೇಶಿಯ ಕಂಪೆನಿಗಳಿಗೆ ದೇಶವನ್ನೇ ತೆರಯಲಿದೆ ಈ ಸಮಿತಿ.

ತೇಲುವ ರೂಪಾಯಿ ಸ್ಥಿರವಾಗಿರುವುದೇಕೆ?

ಮನಮೋಹನಸಿಂಗರು ರೂಪಾಯಿಯನ್ನು ತೇಲಿ ಬಿಟ್ಟವರ ಬಗ್ಗೆ ಅದರಿಂದ ಆಗಬಹುದಾದ ಪರಿಣಾಮಗಳ ಬಗ್ಗೆ ನಿಮಗಾಗಲೇ ತಿಳಿದಿದೆಯಲ್ಲವೇ? ಡಾಲರ್‌ನ ಎದುರು ರೂಪಾಯಿ(ತೇಲಿ ಬಿಟ್ಟ ಮೇಲೂ) ಸ್ಥಿರವಾಗಿರುವುದನ್ನು ಹಲವರು ಹಲವು ರೀತಿಯಲ್ಲಿ ವಿಶ್ಲೇಷಿಸುತ್ತಿದ್ದಾರೆ.

ಇದಕ್ಕೆ ಎರಡು ಮುಖ್ಯ ಕಾರಣಗಳು ಕೆಳಗಿವೆ.

1. ಭಾರತದ ರಫ್ತುದಾರರು ರೂಪಾಯಿಯ ಪೂರ್ಣ ಪರಿವರ್ತನೆಯ ನಿರೀಕ್ಷೆಯಲ್ಲೇ ಇದ್ದರು. ಈ ನಿರೀಕ್ಷೆಯಲ್ಲಿದ್ದ ಅವರು ಸರಕನ್ನು ರಫ್ತು ಮಾಡಿದ ಮೇಲೂ ಹಣ ಪಾವತಿ ಮಾಡಿಸಿಕೊಂಡಿರಲಿಲ್ಲ. ರೂಪಾಯಿ ಪೂರ್ಣ ಪರಿವರ್ತಿತವಾದ ಮೇಲೆ ಈ ಹಣ ವಿದೇಶಗಳಿಂದ ಪಾವತಿಯಾಯಿತು. ಇದು ಡಾಲರುಗಳ ರೂಪದಲ್ಲಿದ್ದುದರಿಂದ ವಿದೇಶೀ ವಿನಿಮಯದ ಹೆಚ್ಚಳವಾಯಿತು.

2. ವಿದೇಶೀ ಕಂಪೆನಿಗಳು ಪಾಲು ಬಂಡವಾಳವನ್ನು ಭಾರತಕ್ಕೆ ತಂದವು. ಇವೂ ಡಾಲರುಗಳ ರೂಪದಲ್ಲಿ ಬಂದವು.

ಹೀಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಕೈಗೆ ಹೆಚ್ಚು ಡಾಲರುಗಳು ಹರಿದು ಬಂದಿದ್ದರಿಂದ ಅದು ತೆರೆಯ ಮರೆಯ ಕಾರ್ಯಾಚರಣೆಗಳನ್ನು ಮಾಡಿ ರೂಪಾಯಿಯನ್ನು ಸ್ಥಿರಗೊಳಿಸಿತು.

ಭಾರತ ಸರಕಾರದ ಕೈಯಲ್ಲಿ ಡಾಲರುಗಳ ಅಭಾವ ಕಂಡು ಬಂದಾಗ ಪೂರ್ಣ ಪರಿವರ್ತನಶೀಲ ರೂಪಾಯಿಯ ಪೂರ್ಣ ಪರಿಣಾಮಗಳು ಕಂಡುಬರಬಹುದು.

...ಹಾರ ಅಂದರೆ ಪ್ರತಿನಾಲ್ಕು ಪಾಯಿಂಟ್ ...ರಿಕೆಗೆ ಮೂಲ ವೇತನದ 0.55ಶೇ. ದರ ...ಲ್ಲಿ ತುಟ್ಟಿಭತ್ತೆ ಸಿಗುತ್ತದೆ. ಅಂದರೆ ಒಟ್ಟು ...578.80 ತುಟ್ಟಿಭತತ್ತೆ ಸಿಗುತ್ತದೆ. ಈ ...ತಿ 2500ರೂ ನಂತರ ತುಟ್ಟಿಭತ್ತೆ ಪರಿ...ಹಾರದ ಪ್ರಮಾಣ ಕಮ್ಮಿಯಾಗುತ್ತಾ ಹೋಗು...ದೆ. 3900ರೂ ಮೂಲ ವೇತನ ಪಡೆದಿರು...ವರಿಗೆ ಸಿಗುವ ತುಟ್ಟಿಭತ್ಯೆ 3566.50ಪೈಸೆ ...ಯಾಗುತ್ತದೆ. ಮೂಲವೇತನ 4000ರೂ. ...ದಾಟಿದ ನಂತರತುಟ್ಟಿಭತ್ಯೆ ಪರಿಹಾರ ಶೇ. ...0 ಕ್ಕಿಳಿಯುತ್ತದೆ. ಅಂದರೆ ದರ ಪ್ರತಿ ...ನಾಲ್ಕು ಪಾಯಿಂಟ್ ಏರಿಕೆಗೆ ಮೂಲವೇತ...ನದ **0.33%**. 5261ರೂ. ದಾಟಿದ ...ನಂತರ ಇದು **0.17%** ಕ್ಕಿಳಿಯುತ್ತದೆ.

ಇದೇ ರೀತಿ ಸರಕಾರಿ ನೌಕರರಿಗೂ ...ಶೇಕಡಾ ತುಟ್ಟಿಭತ್ತೆ ಸಿಗುತ್ತದೆ. ಕರ್ನಾ...ಟಕ ರಾಜ್ಯ ಸರಕಾರಿ ನೌಕರರಿಗೆ 1.7.92ರ ...ವೇಳೆಗೆ 3500ರೂ. ಮೂಲವೇತನದವ...ರಿಗೆ ಮೂಲ ವೇತನ **76%**, 3501ರಿಂದ ...000ರವರೆಗೆ **57%** ಹಾಗೂ ಅದಕ್ಕಿಂತ ...ಹೆಚ್ಚು ಮೂಲವೇತನಕ್ಕೆ ಶೇ. 49 ದರದಲ್ಲಿ ...ತುಟ್ಟಿಭತ್ತೆ ನೀಡಲಾಗುತ್ತದೆ.

ಸರಕಾರದ ಕ್ರಮ

ಸಾರ್ವಜನಿಕ ವಲಯದ ನೌಕರರು ...ನೂರು ಶೇಕಡಾ ತುಟ್ಟಿಭತ್ತೆ ಪರಿಹಾರದ ...ಬೇಡಿಕೆಯತ್ತ 1988ರಲ್ಲಿ ದೇಶವ್ಯಾಪಿ ಮುಷ್ಕ...ರದ ಕರೆ ನೀಡಿದ್ದಾಗ ಆಗ ಪ್ರಧಾನಿಯಾ...ಗಿದ್ದ ರಾಜೀವ್‌ಗಾಂಧಿ ಸಾರ್ವಜನಿಕ ವಲ...ಯದ ಕಾರ್ಮಿಕರಿಗೆ ನೂರು ಶೇಕಡಾ ತುಟ್ಟಿ...ಭತ್ಯೆ ಪರಿಹಾರ ನೀಡುವುದಾಗಿ ಭರವಸೆ ...ನೀಡಿದರು. ಕೇಂದ್ರ ಮಟ್ಟದಲ್ಲಿ ತುಟ್ಟಿ...ಭತ್ಯೆ ಕುರಿತಂತೆ ಒಂದು ತ್ರಿಪಕ್ಷೀಯ ಸಮಿ...ತಿಯನ್ನು ರಚಿಸಲಾಯಿತು. ನಂತರ ಈ ...ಸಮಿತಿ ನೂರು ಶೇಕಡಾ ಪರಿಹಾರದ ಪ್ರಶ್ನೆ...ಯನ್ನು ...ಗೊತ್ತಲು ಪ್ರಯತ್ನಿಸಿತು. ಇದರ ...ವಿರುದ್ಧ ಮತ್ತೆ-ಮತ್ತೆ ಚಳುವಳಿ ನಡೆಸದೇಕಾ...ಯಿತು. ಕಳೆದ ವರ್ಷ ಪ್ರತಿ ಪಾಯಿಂಟಿಗೆ ...ರೂ. ತುಟ್ಟಿಭತ್ಯೆ ಹಾಗೂ ಸ್ಥಿರ ತುಟ್ಟಿಭತ್ಯೆಯ ...ಸ್ಲ್ಯಾಬ್‌ಗಳಲ್ಲಿ ಏರಿಕೆಯಾಗದೇಕೆಂದು ಶಿಫಾ...ರಸು ಮಾಡಿತು. ಈಗ ಸರಕಾರ 2ರೂ. ದರ...ವನ್ನು ಒಪ್ಪಿಕೊಂಡರೂ ಸ್ಥಿರ ತುಟ್ಟಿಭತ್ಯೆಯ ...ಸ್ಲ್ಯಾಬ್‌ಗಳನ್ನು ಪರಿಷ್ಕರಿಸಿಲ್ಲ. ಇಂತಹ ಪರಿಷ್ಕ...ರಣವಿಲ್ಲದಿದ್ದರೆ ಕನಿಷ್ಟ ಸಂಬಳಕ್ಕಿಂತ ಹೆಚ್ಚು ...ಸಂಬಳ ಪಡೆಯುತ್ತಿರುವವರಿಗೆ ಬೆಲೆಯೇರಿ...ಕೆಯನ್ನು ಸರಿದೂಗಿಸುವ ತುಟ್ಟಿಭತ್ತೆ ಸಿಗುವು...ದಿಲ್ಲ.

...ಹೋರಾಟಕ್ಕಿಳಿಯದಿದ್ದರೆ....

ಸಾರ್ವಜನಿಕ ವಲಯದ ಕಾರ್ಮಿಕರು ...ಕೈಗಾರಿಕಾ ತುಟ್ಟಿಭತ್ಯೆಯ ಬದಲು ಶೇಕಡಾ ...ತುಟ್ಟಿಭತ್ಯೆಗಾಗಿ ಹೋರಾಟ ಆರಂಭಿಸಿದರು.

ನಂತರ ಒಂದು ಹಂತದವರೆಗೆ ಸ್ಲಾಬ್ ವ್ಯವಸ್ಥೆಯಲ್ಲಿ ಸಂಬಳಕ್ಕೆ ಅನುಗುಣವಾಗಿ ತುಟ್ಟಿಭತ್ಯೆ ಹಾಗೂ ಉಳಿದಂತೆ ಎಲ್ಲರಿಗೂ ಒಂದೇ ತರದ ತುಟ್ಟಿಭತ್ಯೆಯ ಸೂತ್ರವನ್ನೂ ಒಪ್ಪಿಕೊಳ್ಳುವ ಲಕ್ಷಣ ತೋರಿದರು. ಈಗ ಸ್ಲಾಬ್ ವ್ಯವಸ್ಥೆಯ ಪ್ರಯೋಜನವಿಲ್ಲದೆಯೇ ಎಲ್ಲರಿಗೂ ಒಂದೇ ತುಟ್ಟಿಭತ್ಯೆಯ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಈಗಲೂ ಹೋರಾಟ ನಡೆಸಲು ಅವರು ನಿರ್ಧರಿಸದಿದ್ದರೆ ನೂರು ಶೇಕಡಾ ತುಟ್ಟಿಭತ್ಯೆಯ ದೇಡಿಕೆಯನ್ನು ಬಿಟ್ಟುಕೊಟ್ಟಂತಾಗುತ್ತದೆ.

ಬೆಲೆಯೇರಿಕೆಯನ್ನು ಸರಿಹೊಂದಿಸಲಾರದ ಕೈಗಾರಿಕಾ ತುಟ್ಟಿಭತ್ಯೆಯಿಂದ ಜೀವನಮಟ್ಟ ಇಳಿಯುತ್ತಿರುವುದರಿಂದಾಗಿ ಸಾರ್ವಜನಿಕ ವಲಯದ ಅಧಿಕಾರಿಗಳಲ್ಲಿ ತೀವ್ರ ಅಸಂತುಷ್ಟ ಹರಡಿ, ಅದರ ಪರಿಣಾಮವಾಗಿ ಅಧಿಕಾರಿಗಳ ಟ್ರೇಡ್ ಯೂನಿಯನ್ ಆಂದೋಲನ ಮೂಡಿ ಬಂದಿದೆ. ಒಟ್ಟು ಕಾರ್ಮಿಕ ಆಂದೋಲನ ಈ ಪ್ರಶ್ನೆಯ ಮೇಲೆ ಇಡೀ ಕಾರ್ಮಿಕ ವರ್ಗವನ್ನು ಹೋರಾಟಕ್ಕಿಳಿಸದಿದ್ದರೆ ಕಾರ್ಮಿಕ ಆಂದೋಲನಕ್ಕೆ ತೊಂದರೆಯಾಗಬಹುದು. ಆದರೆ ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳ ಮುಖಂಡರಿಗೆ ಅಂಧಕಾರದ ಆಚೆಯಿಂದ ಬೆಳಕು ಇನ್ನೂ ಕಾಣುತ್ತಿಲ್ಲ. ಅವರ ಹಿಂಬಾಲಕರು ಇಂಟಕ್ ಬಾಲ ಹಿಡಿದು ಅಂಧಕಾರದಲ್ಲಿ ನಿಂತಿದ್ದಾರೆ.

ಬೋನಸ್ ಕಾನೂನು ಹಾಸ್ಯಾಸ್ಪದಗೊಂಡಿದೆ

ತುಟ್ಟಿಭತ್ಯೆಯ ದರಗಳ ಕೊರತೆಯಿಂದಾಗಿ ಕಾರ್ಮಿಕರ ಆದಾಯದಲ್ಲಿ ದಿನೇ-ದಿನೇ ಖೋತಾ ಆಗುತ್ತಿದೆಯಷ್ಟೇ ಅಲ್ಲ, ಬೋನಸ್ ಮಿತಿಯನ್ನು ಏರಿಸಲು ನಿರಾಕರಿಸಿ ಸರಕಾರ ಬೋನಸ್ ಕಾನೂನನ್ನು ಕೂಡಾ ಹಾಸ್ಯಾಸ್ಪದಗೊಳಿಸಿದೆ.

1965ರಲ್ಲಿ ಬೋನಸ್ ಶಾಸನ ಬಂದಾಗ ಬೋನಸ್ ಮಟ್ಟದ ಮಿತಿ ತಿಂಗಳಿಗೆ 750 ರೂ. ಇತ್ತು. ತಿಂಗಳಿಗೆ 1600ರೂಗಿಂತ ಹೆಚ್ಚು ಸಂಬಳದವರಿಗೆ ಬೋನಸ್‌ನ ಅರ್ಹತೆಯಿರಲಿಲ್ಲ. 1965ರಲ್ಲಿ ಬೆಲೆ ಸೂಚ್ಯಂಕ ಸುಮಾರು 130. ಈಗ ಅದು 1300 ದಾಟಿದೆ. ಅಂದರೆ ಬೆಲೆ ಮಟ್ಟ ಹತ್ತು ಪಟ್ಟಾಗಿದೆ. ಪರಿಣಾಮವಾಗಿ ಬೋನಸ್ ಮಿತಿ ತಿಂಗಳಿಗೆ 7500ರೂ.ಯಾಗಬೇಕು. 16000ರೂ.ವರೆಗೆ ಮಾಸಿಕ ಸಂಬಳವಿರುವವರು ಬೋನಸ್‌ಗೆ ಅರ್ಹರಾಗಬೇಕು. ಆದರೆ ತಿಂಗಳಿಗೆ 2500ರೂಗಿಂತ ಹೆಚ್ಚು ಸಂಬಳವಿರುವವರು ಬೋನಸ್‌ಗೆ ಅರ್ಹರಾಗುವುದಿಲ್ಲ. 2500ರೂಗಿಂತ ಕಮ್ಮಿ ಮಾಸಿಕ ಸಂಬಳವಿರುವವರಿಗೂ ಮಾಸಿಕ 1600ರೂ.ಗಿಂತ ಹೆಚ್ಚು ಬೋನಸ್ ಕೊಡುವಂತಿಲ್ಲ.

ನಿವೃತ್ತಿ ವೇತನದ ಮಸೂದೆ ಯಾರ ಲಾಭಕ್ಕಾಗಿ?

-- ಕೆ.ವಿ. ಶ್ರೀನಿವಾಸ್

ಕೇಂದ್ರ ಸರಕಾರ ಇತ್ತೀಚೆಗೆ ನಿವೃತ್ತಿವೇತನ ಕುರಿತ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಇದು ದುಡಿಯುವ ಜನರ ಬಗ್ಗೆ ತನ್ನ ಕಾಳಜಿಯ ಪ್ರತೀಕವಾಗಿ ನೀಡಿರುವ ಹೊಸ ಸೌಲಭ್ಯ ಎಂದು ಅಬ್ಬರದ ಪ್ರಚಾರ ನಡೆಸಿದೆ.

ಆದರೆ ಸತ್ಯಸಂಗತಿಯೇನು? ಮೊದಲನೆಯದಾಗಿ, ಇದು ಹೊಸ ಸೌಲಭ್ಯವೇನೂ ಅಲ್ಲ. ಸಾಮಾನ್ಯವಾಗಿ ಸಂಘಟಿತ ಕಾರ್ಮಿಕರು ನಿವೃತ್ತರಾಗುವಾಗ ಅವರು ಎರಡು ಸೌಲಭ್ಯಗಳನ್ನು ಪಡೆಯುತ್ತಾರೆ. ಒಂದು ಗ್ರಾಚ್ಯುಯಿಟ್ ಹಣ, ಇನ್ನೊಂದು ಪ್ರಾವಿಡೆಂಡ್ ಫಂಡ್ ಅಥವಾ ಭವಿಷ್ಯ ನಿಧಿ ಹಣ. ಭವಿಷ್ಯನಿಧಿಗೆ ಕಾರ್ಮಿಕ ಕೆಲಸ ಮಾಡುತ್ತಿರುವ ಅವಧಿಯಲ್ಲಿ ಆತನ ಸಂಬಳದಿಂದ ನಿರ್ದಿಷ್ಟ ಹಣವನ್ನು ಸಂದಾಯಮಾಡಲಾಗುತ್ತದೆ. ಮಾಲಕರೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ವಂತಿಗೆ ನೀಡಬೇಕಾಗುತ್ತದೆ. ಕಾರ್ಮಿಕ ನಿವೃತ್ತನಾಗುವ ವೇಳೆಗೆ ಈ ವಂತಿಗಳ ಮೂಲಕ ಸಂಗ್ರಹವಾದ ಹಣವನ್ನು ಭವಿಷ್ಯನಿಧಿಯೆಂದು ಪಡೆಯುತ್ತಾನೆ. ಈ ನಡುವೆ ತಾನು ಈ ನಧಿಗೆ ನೀಡಿರುವ ವಂತಿಕೆಯ ಬಹುಪಾಲನ್ನು ಆತ ಮಕ್ಕಳ ಶಿಕ್ಷಣ, ಮದುವೆ ಇತ್ಯಾದಿಗಳಿಗೆ ಸಾಲರೂಪದಲ್ಲಿ ಪಡೆದಿರುತ್ತಾನೆ: ಆದ್ದರಿಂದ ನಿವೃತ್ತನಾಗುವಾಗ ಆತನಿಗೆ ಸಿಗುವುದು ಮಾಲಿಕನ ವಂತಿಗೆಯಿಂದ ಸಂಗ್ರಹವಾದ ಹಣವಷ್ಟೆ. ಸರಕಾರ ದೊರಕಿಸಿರುವ ಹೊಸ ಮಸೂದೆ ಹೀಗೆ ಸಂಗ್ರಹವಾದ ಹಣವನ್ನು ಕಿತ್ತುಕೊಂಡು ಅದರ ಬದಲು ನಿವೃತ್ತ ವೇತನ ಕೊಡುತ್ತದೆ. ಈ ದೃಷ್ಟಿಯಿಂದ ಇದು ಒಂದು ಹೊಸ ಸೌಲಭ್ಯ ಅಲ್ಲ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಈಗ ನಿವೃತ್ತಿವೇತನ ಸೌಲಭ್ಯವಿರುವ ಸರಕಾರೀ ಇಲಾಖೆಗಳಲ್ಲಿ ನಿವೃತ್ತನಾಗುವ ನೌಕರನಿಗೆ ಆತನ ಕೊನೆಯ ವೇತನದ ಅರ್ಧದಷ್ಟು ಪೆನ್ಶನ್ ಸಿಗುತ್ತದೆ. ಆದರೆ ಸರಕಾರ ಈಗ ಮಂಡಿಸಿರುವ ಮಸೂದೆಯ ಸೂತ್ರದ ಪ್ರಕಾರ ಭವಿಷ್ಯನಿಧಿಗೆ ಮಾಡುವ ವಂತಿಗೆ ಕಳಕೊಳ್ಳುವ ಕಾರ್ಮಿಕನಿಗೆ ಸಿಗುವ ನಿವೃತ್ತಿ ವೇತನ ಅಥವಾ ಪೆನ್ಶನ್ ಅರ್ಧಕ್ಕಿಂತಲೂ ಕಮ್ಮಿ ಹಣದುಬ್ಬರ ಹೆಚ್ಚಿದಂತೆ ಅದರ ಬೆಲೆ ಕಮ್ಮಿಯಾಗುತ್ತಾ ಇರುತ್ತದೆ. ಏಕೆಂದರೆ ಇದಕ್ಕೆ ತುಟ್ಟಿಭತ್ಯೆಯಿಲ್ಲ.

ಆದರೂ ಸರಕಾರ ಈ ಮಸೂದೆ ಏಕೆ ತಂದಿದೆ. ಹಣಕಾಸು ಸಂಸ್ಥೆಗಳ ಉದಾಹರಣೆ ನೋಡಿ.

ಇಲ್ಲಿ ಭವಿಷ್ಯನಿಧಿಯಲ್ಲಿ ಮಾಲಕರ ವಂತಿಗೆಯ ಮೊತ್ತ ಈಗ 3500 ಕೋಟಿರೂ. ಒಂದೇ ಏಟಿಗೆ ಇಷ್ಟು ಹಣವನ್ನು ವಂಚಿಸಲೂ ಸಾಧ್ಯ. ಅಲ್ಲದೆ ಪ್ರತೀವರ್ಷ ನೀಡಬೇಕಾಗಿದ್ದ 650 ಕೋಟಿರೂಗಳನ್ನು ಮಾಲಕರು ನೀಡಬೇಕಾಗಿಲ್ಲ.

ಈ ಕಾರಣಕ್ಕಾಗಿಯೇ ಸಿ.ಐ.ಟಿ.ಯು ಹಾಗೂ ಹಲವು ಇತರ ಕಾರ್ಮಿಕ ಸಂಘಟನೆಗಳು ಇದನ್ನು ವಿರೋಧಿಸುತ್ತಿವೆ. ಈಗಾಗಲೇ ಪೆನ್ಶನ್ ಇನ್ನೊಂದು ಸೌಲಭ್ಯವಾಗಿ ಅಂದರೆ ಮೂರನೇ ಸೌಭ್ಯಲವಾಗಿ ಸಿಗಬೇಕೆಂದು ಒತ್ತಾಯಿಸಿದೆ. ಬೆಲೆಯೇರಿಕೆ ದುಡಿಯುವ ಜನರ ಆದಾಯವನ್ನೆಲ್ಲಾ ಕರಗಿಸುತ್ತಿರುವ ಹಿನ್ನೆಲೆಯಲ್ಲಿ ಸಂಘಟಿತ ಕಾರ್ಮಿಕರು ಕೂಡಾ ನಿವೃತ್ತಿಯ ನಂತರ ಬದುಕಲು ಹೆಣಗಾಡಬೇಕಾದ ಸ್ಥಿತಿ ತಪ್ಪಿಸಲು ಪೆನ್ಶನ್ ಇನ್ನೊಂದು ಸಾಮಾಜಿಕ ಭದ್ರತಾ ಕ್ರಮವಾಗಿ ಜಾರಿಗೆ ತರಬೇಕೆಂದು ಒತ್ತಾಯಿಸುತ್ತಿವೆ. ಕಲ್ಲಿದ್ದಲು ಉದ್ದಿಮೆಯಲ್ಲಿ ಈ ಬಗ್ಗೆ ಒಂದು ಒಪ್ಪಂದವೂ ಹೋರಾಟಗಳಿಂದಾಗಿ ಸಾಧ್ಯವಾಗಿತ್ತು. ಆದರೆ ಸರಕಾರ ಇದನ್ನು ಜಾರಿಮಾಡಲಿಲ್ಲ. ಇತ್ತೀಚೆಗೆ 12 ಲಕ್ಷ ಬ್ಯಾಂಕ್, ವಿಮಾ ನೌಕರರು, ಅಧಿಕಾರಿಗಳು ನಡೆಸಿದ ಒಂದು ದಿನ ಮುಷ್ಕರದಲ್ಲೂ ಇದು ಒಂದು ಮುಖ್ಯ ದೇಡಿಕೆಯಾಗಿತ್ತು. ಮಂದಿನ ತಿಂಗಳು ಎಪ್ರಿಲ್ 20,21,22, ರಂದು ನಡೆಯಲಿರುವ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರದಲ್ಲೂ ಇದೊಂದು ಮುಖ್ಯ ದೇಡಿಕೆಯಾಗಿದೆ.




ಕೃಪೆ: ಆರ್.ಕೆ. ಲಕ್ಷ್ಮಣ್, ಟೈಮ್ಸ್ ಆಫ್ ಇಂಡಿಯಾ

ಸಂಸತ್ತಿಗೂ ಮೋಸ--ಜನಗಳಿಗೂ ದೊಡ್ಡ ಹೊರೆ

ನಮ್ಮ ಸಂಸತ್ತಿನಲ್ಲಿ ಈಗ ಪ್ರತಿವರ್ಷ ಫೆಬ್ರವರಿ ಕೊನೆಯ ದಿನದಂದು ಮಂಡಿಸುವ ಬಜೆಟ್ಟಿಗೆ ಏನಾದರೂ ಅರ್ಥವುಳಿದಿದೆಯೋ?

ಕೋಷ್ಟಕ 1

(ಎಕ್ಸೈಜ್ ಸುಂಕದಿಂದ ಪಡೆದ ಹೆಚ್ಚಿನ ಆದಾಯ ಹಾಗೂ ಸರಕಾರ ತಾನೇ ಬೆಲೆಯೇರಿಸಿ ಗಿಟ್ಟಿಸಿದ ಹೆಚ್ಚಿನ ಆದಾಯ- ಕೋಟಿರೂಗಳಲ್ಲಿ)



ನಾವು ಆರಿಸಿಕೊಂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ದೇಶದ ರಾಜಕೀಯ, ಆರ್ಥಿಕ ಮತ್ತಿತರ ಎಲ್ಲಾ ಅಂಶಗಳ ಬಗ್ಗೆ ಶಾಸನ ರಚಿಸುವ ಅತ್ಯುಚ್ಚ ಸಂಸ್ಥೆ ಸಂಸತ್ತು. ದೇಶದ ಆಯುವ್ಯಯದ ಪ್ರತಿಯೊಂದು ಅಂಶವೂ ಸಂಸತ್ತಿನ ಪರೀಕ್ಷೆಗೆ ಒಳಪಡಬೇಕು. ಆದರೆ ಕಳೆದ ಕೆಲವಾರು ವರ್ಷಗಳಲ್ಲಿ ಕಾಂಗ್ರೆಸ್(ಐ) ಸರಕಾರ ಸಂಸತ್ತಿನ ಪರೀಕ್ಷೆಯಿಂದ ತಪ್ಪಿಸಿಕೊಳ್ಳುವ ಮೋಸದ ದಾರಿ ಹಿಡಿದಿದೆ. ಅದೆಂದರೆ ಬಜೆಟ್ ಮಂಡಿಸುವ ಮೊದಲೇ ಸರಕಾರವೇ ಉಕ್ಕು ಕಲ್ಲಿದ್ದಲು ಇತ್ಯಾದಿಗಳ ಬೆಲೆ ಏರಿಸುವುದು. ಈ ಮೂಲಕ ಸಂಸತ್ತಿನ ಬೆನ್ನ ಹಿಂದೆ ಜನಗಳ ಮೇಲೆ ಹೊರೆ ಹಾಕುವುದು.

ಈ ರೀತಿ ಸರಕಾರೀ ಆದೇಶದ ಮೂಲಕ ಬೆಲೆಯೇರಿಸುವುದರಲ್ಲಿ ಕೇಂದ್ರ ಸರಕಾರಕ್ಕೆ ಇನ್ನೊಂದು ಲಾಭವೂ ಇದೆ. ದೇಶದ ಪ್ರತಿಯೊಬ್ಬ ಪ್ರಜೆಯ ಮೇಲೂ ಕೇಂದ್ರ ಸರಕಾರ ಹಾಕುವ ಅತಿ ದೊಡ್ಡ ಪರೋಕ್ಷ ಹೊರೆಯೆಂದರೆ ಎಕ್ಸೈಸ್ ಸುಂಕ. ಆದರೆ ವರ್ಷವರ್ಷ ಈ ಭಾರೀ ಪರೋಕ್ಷ ಹೊರೆ ಹಾಕುವುದರಲ್ಲೂ ಸರಕಾರಕ್ಕೆ ಒಂದು ತೊಡಕು ಕಂಡಿತು. ಜನಗಳಿಂದ ಈ ಮೂಲಕ ಹೀರಿಕೊಂಡ ತೆರಿಗೆಗಳಲ್ಲಿ ಒಂದು ಪಾಲನ್ನು ಹಣಕಾಸು ಆಯೋಗದ ಶಿಫಾರಿಸಿನಂತೆ ರಾಜ್ಯಗಳಿಗೂ ಕೊಡಬೇಕಾಗುವುದು. ಆದರೆ ಕೇಂದ್ರ ಸರಕಾರವೇ ಬೆಲೆಯೇರಿಸಿ ಗಿಟ್ಟಿಸಿದ ಈ ಸಂಪನ್ಮೂಲಗಳಲ್ಲಿ ಯಾವುದೇ ಪಾಲನ್ನು ರಾಜ್ಯಗಳಿಗೆ ಕೊಡಬೇಕಾಗಿಲ್ಲ.

ಕೋಷ್ಟಕ -2

ವರ್ಷ	ಸರಕಾರ ಬೆಲೆಏರಿಸಿ ಪಡೆದ ಹಣ(ಕೋಟಿ ರೂಗಳಲ್ಲಿ)
1985-86	1376
1986-87	488
1987-88	1338
1988-89	1330
1989-90	2311
1990-91	6719
1991-92	7816
1992-93	10000

ಬಂಡವಾಳಶಾಹಿ ಪತ್ರಿಕೆಗಳು "ಹಗುರ ಬಜೆಟ್" ಎಂದು ಕೊಂಡಾಡಿದ 1993-94ರ "ಹಗುರ"ತನಕ್ಕೆ ಅದಕ್ಕೆ ಮೊದಲೇ ಮನಮೋಹನ್‌ಸಿಂಗ್‌ರು 10 ಸಾವಿರ ಕೋಟಿಯಷ್ಟು ಸರಕಾರೀ ಆದೇಶ ಹೊರಡಿಸಿ ಬೆಲೆಯೇರಿಸಿ ಜನಗಳಿಂದ ಕಿತ್ತುಕೊಂಡರು, ಅದರಲ್ಲಿ ಅರ್ಧವಷ್ಟನ್ನು ಬಜೆಟ್‌ನಲ್ಲಿ ಸಿರಿವಂತರಿಗೆ ದಾನಮಾಡಿದರು ಎಂದು ಮಾತ್ರ ಅವು ಹೇಳುವುದಿಲ್ಲ. ಹಿಂದೆ ಸರಕಾರಕ್ಕೆ ಆದಾಯ ತರುತ್ತಿದ್ದ ಎಕ್ಸೈಸ್ ಸುಂಕಕ್ಕಿಂತಲೂ ಸರಕಾರೀ ಬೆಲೆಯೇರಿಕೆ ಎಷ್ಟು ಹೆಚ್ಚಾಗಿದೆ ಎಂಬುವದನ್ನು ಕೆಳಗಿನ ಕೋಷ್ಟಕ -1 ತೋರಿಸುತ್ತದೆ.

ಕಳೆದ ಹತ್ತುವರ್ಷಗಳಲ್ಲಿ ಸರಕಾರ ತಾನೇ ಆದೇಶ ಹೊರಡಿಸಿ ಜನಗಳಿಂದ ಕಿತ್ತುಕೊಂಡ ಹಣ 1985-86 ರಲ್ಲಿ 1376 ಕೋಟಿ ರೂಗಳಿದ್ದು 1992-93 ರಲ್ಲಿ 10 ಸಾವಿರ ಕೋಟಿ ರೂಗೇರಿತು. ಕಳೆದ ಎರಡು ವರ್ಷಗಳಲ್ಲಿ ಹೀಗೆ ಸಂಸತ್ತಿಗೆ ತಿಳಿಸದೆಯೇ, ಅದರ ಗಮನಕ್ಕೆ ತರದೆಯೇ ಜನಗಳ ಮೇಲೆ ಹಾಕಿದ ಹೊರೆಯ ಪ್ರಮಾಣ ಹೇಗೆ ಏರುತ್ತಾ ಬಂದಿದೆ ಎಂದು ಕೋಷ್ಟಕ 2 ರಲ್ಲಿ ನೋಡಿ.

1985-86ರಲ್ಲಿ 396 ಕೋಟಿ. ರೂ. ಕಲ್ಲಿದ್ದಲು ಬೆಲೆ ಏರಿಸಿ, 504 ಕೋಟಿರೂ ಪೆಟ್ರೋಲೀಯಂ, 224 ಕೋಟಿರೂ, ಗೋಧಿ ಬೆಲೆ, 92 ಕೋಟಿ ರೂ. ಅಕ್ಕಿಬೆಲೆ ಹಾಗೂ 160 ಕೋಟಿ ರೂ. ಸಕ್ಕರೆ ಬೆಲೆಯೇರಿಸಿ ಸಂಗ್ರಹಿಸಿದ್ದಾರೆ. 1992-93 ರಲ್ಲಿ 9 60 ಕೋಟಿ ರೂ ಕಲ್ಲಿದ್ದಲು ಬೆಲೆಯೇರಿಸಿ, 400 ಕೋಟಿ ರೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಸಿ, 1000 ಕೋಟಿ ರೂ. ಗೋಧಿ ಬೆಲೆಯೇರಿಸಿ, 20ಶೇ. ಅಕ್ಕಿ ಬೆಲೆ ಏರಿಸಿ ಸರಕಾರ ಕಿತ್ತುಕೊಂಡಿದೆ.

ಮಧ್ಯಪ್ರದೇಶದಲ್ಲಿ ರೈತ,ಕಾರ್ಮಿಕ ಆಂದೋಲನ ತೀವ್ರಗೊಳ್ಳಲಿ

-ಪಿ.ರಾಮಚಂದ್ರನ್

65 ಸಮಾಜವಾದಿಗಳು ಸಿಪಿಐ(ಎಂ)ಗೆ

ಮಧ್ಯಪ್ರದೇಶದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಸಂಸತ್ ಸದಸ್ಯ ಯಮುನಾಪ್ರಸಾದ್ ಶಾಸ್ತ್ರಿಯವರ ನೇತೃತ್ವದಲ್ಲಿ ಮಧ್ಯಪ್ರದೇಶ 65 ಪ್ರಮುಖ ಸೋಶಲಿಸ್ಟ್ ಮುಖಂಡರು ಹಾಗೂ ಕಾರ್ಯಕರ್ತರು ಸಿಪಿಐ(ಎಂ)ಗೆ ಸೇರಿದ್ದಾರೆ. ಮಾರ್ಚ್ 28ರಂದು ನಡೆದ ಒಂದು ಸಮಾವೇಶದಲ್ಲಿ ಭಾಗವಹಿಸಿದ ಇವರು ಸಿಪಿಐ(ಎಂ)ನ ಬಲ ಹೆಚ್ಚಿಸಿ, ಏಕೆಂದರೆ ದೇಶದ ಐಕ್ಯತೆಯನ್ನು ಕಾಪಾಡಿಕೊಂಡು ಭಾರತೀಯ ಜನಸಮೂಹಗಳ ನ್ಯಾಯ ದೊರಕಿಸಿಬಹುದಾದ ಏಕೈಕ ಪಕ್ಷ ಇದು ಎಂದು ದೇಶಾದ್ಯಂತ ಹತಾಶ ಸ್ಥಿತಿಯಲ್ಲಿರುವ ಸೋಶಲಿಸ್ಟರಿಗೆ ಕರೆ ನೀಡಿದ್ದಾರೆ.

ಯಮುನಾ ಪ್ರಸಾದ್ ಶಾಸ್ತ್ರಿ ಎರಡು ಬಾರಿ ಮಧ್ಯಪ್ರದೇಶದ ರೇವಾ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು-1977ರಲ್ಲಿ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ, 1989ರಲ್ಲಿ ಜನತಾದಳದ ಅಭ್ಯರ್ಥಿಯಾಗಿ. ಈ 65 ವರ್ಷದ ಸುಪ್ರಸಿದ್ಧ ಸಮಾಜವಾದೀ ಮುಖಂಡ ತಮ್ಮ ಹದಿನೈದನೇ ವಯಸ್ಸಿನಲ್ಲಿ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. 1945ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸೇರಿದ ಇವರು ಜಮೀಂದಾರಿ ಶೋಷಣೆಯ ವಿರುದ್ಧ ಹಲವು ಹೋರಾಟಗಳ ನೇತೃತ್ವ ವಹಿಸಿದವರು. ಗೋವಾ ಸ್ವಾತಂತ್ರ್ಯ ಹೋರಾಟದಲ್ಲೂ ಧೀರ ಪಾತ್ರ ವಹಿಸಿದವರು. ಪೋರ್ಚುಗೀಸ್ ಪೋಲೀಸರ ಚಿತ್ರಹಿಂಸೆಯಿಂದಾಗಿ ಒಂದು ಕಣ್ಣು ಕಳಕೊಂಡರು. ಹೃದಯ ಶಸ್ತ್ರ ಚಿಕಿತ್ಸೆಯ ನಂತರವೂ ಅವರು ಮಧ್ಯಪ್ರದೇಶ, ಬಿಹಾರ, ಉತ್ತರಪ್ರದೇಶದ ಹದಿನಾಲ್ಕು ಜಿಲ್ಲೆಗಳಲ್ಲಿ ನೀರು, ಭೂಮಿ, ವಿದ್ಯುಚ್ಛಕ್ತಿ ಪ್ರಶ್ನೆಗಳನ್ನು ಕುರಿತಂತೆ ಪಾದಯಾತ್ರೆ ನಡೆಸಿದವರು.

ಅವರೊಂದಿಗೆ, ಹಲವು ಮಾಜಿ ಜನತಾದಳ, ಎಂಎಲ್ಎಗಳು, ಒಬ್ಬ ಮಾಜೀ ಮಂತ್ರಿ ಛೋಟೇಲಾಲ್, ಹೆಚ್ಎಂಎಸ್‌ನ ರಾಜ್ಯಕಾರ್ಯದರ್ಶಿ ನಾಥೂಲಾಲ್ ಹಾಗೂ ಇತರ ಹಲವು ಸಾಮೂಹಿಕ ಸಂಘಟನೆಗಳ ಮುಖಂಡರು ಸಿಪಿಐ(ಎಂ)ಗೆ ಸೇರಿದ್ದಾರೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪಿ.ರಾಮಚಂದ್ರನ್ ಈ ಸಂದರ್ಭದಲ್ಲಿ ಹಾಜರಿದ್ದರು.

ದೇಶವನ್ನು ಆವರಿಸಿರುವ ಕೋಮು ಹುಚ್ಚುತನವನ್ನು ಎದುರಿಸಬೇಕಾದರೆ ನಿರುದ್ಯೋಗ, ಭೂ ಹೀನರಿಗೆ ಹೆಚ್ಚುವರಿ ಭೂಮಿಯನ್ನು ಮರುವಿತರಣೆ, ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿಸುವುದು ಇತ್ಯಾದಿ ಮೂಲಭೂತ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು. ಸಿಪಿಐ(ಎಂ) ಅಲ್ಲದೆ ಬೇರೆ ಯಾವ ಪಕ್ಷಕ್ಕೂ ಈ ಬಗ್ಗೆ ದೃಢ ನಿರ್ಧಾರವಾಗಲಿ, ಈ ಮೂಲಭೂತ ಪ್ರಶ್ನೆಗಳನ್ನು ಎತ್ತಿಕೊಳ್ಳುವ ಸೈದ್ಧಾಂತಿಕ ಸಾಮರ್ಥ್ಯವಾಗಲಿ ಇಲ್ಲ ಎಂದು ಈ ಸಮಾವೇಶದಲ್ಲಿ ಅಂಗೀಕರಿಸಿದ ಒಂದು ನಿರ್ಣಯ ತಿಳಿಸಿದೆ.

ದೇಶದಲ್ಲಿ ಒಂದು ಜಾತಿರಹಿತ, ವರ್ಗರಹಿತ ಹಾಗೂ ಜಾತ್ಯಾತೀತ ಸಮಾಜ ಕಟ್ಟಲು ತಮ್ಮನ್ನು ಅರ್ಪಿಸಿಕೊಂಡ ಸೋಶಲಿಸ್ಟರೆಲ್ಲ ಈ ಗುರಿಗಳ ಈಡೇರಿಕೆಗೆ ಒಂದು ಗಂಭೀರ ಹೋರಾಟ ನಡೆಸಿರುವುದು ಸಿಪಿಎಂ ಮಾತ್ರ ಎಂದು ಅರಿಯಬೇಕೆಂದು ಮುಂದುವರೆದು ಈ ನಿರ್ಣಯ ಹೇಳಿದೆ. ಬೇರೆ ಯಾವ ಪಕ್ಷದಲ್ಲೂ ಈಗ ಅಪಾಯಕಾರಿ ಕೋಮು ಸ್ಥಿತಿಯನ್ನು ಎದುರಿಸಲು ಇಂತಹ ನೀತಿಗಳಿಗೆ ಬದ್ಧವಾದ, ಸ್ವಾರ್ಥತ್ಯಾಗಿ, ಅರ್ಪಣಾಭಾವದ ಕಾರ್ಯಕರ್ತರು ಸಿಗಲಾರರು ಎಂದು ಈ ನಿರ್ಣಯ ಅಭಿಪ್ರಾಯಪಟ್ಟಿದೆ. ವಿಸರ್ಜಿತ ಮಧ್ಯಪ್ರದೇಶ ಅಸೆಂಬ್ಲಿಯ ಸದಸ್ಯ ರಾಮರತನ್ ಶರ್ಮಾ ಈ ನಿರ್ಣಯವನ್ನು ಮಂಡಿಸಿದರು. ಎಲ್ಲಾ 65 ಮಂದಿ ಇದನ್ನು ಅನುಮೋದಿಸಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಕಾಂ.ಪಿ.ರಾಮಚಂದ್ರನ್ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅವರು ಈಗ ಸಿಪಿಐ(ಎಂ) ನಲ್ಲಿದ್ದು ನ್ಯಾಯಯುತ ಸಮಾಜಕ್ಕಾಗಿ ಹೋರಾಟವನ್ನು ಮುಂದುವರಿಸುತ್ತಿದ್ದಾರೆ ಎಂದರು. ಸಿಪಿಐ(ಎಂ)ನಲ್ಲಿ ಉಳಿದ ಪಕ್ಷಗಳಂತೆ ನಿರಂತರ ಒಳಜಗಳಗಳು ನಡೆಯುವುದಿಲ್ಲ, ಏಕೆಂದರೆ ಪ್ರತಿಯೊಬ್ಬ ಸಿಪಿಐ(ಎಂ) ಸದಸ್ಯ ಪಕ್ಷದ ನೀತಿ ರೂಪಿಸುವಲ್ಲಿಂದ ಹಿಡಿದು ಅದನ್ನು ಜ್ಯಾರಿಗೊಳಿಸುವವರೆಗೆ ಎಲ್ಲಾ ಪ್ರಕ್ರಿಯೆಯಲ್ಲಿ ಒಳಗೊಂಡಿರುತ್ತಾರೆ. ಸಂಸದೀಯ ಸಮಯ ಸಾಧಕತೆ ಎಂದು ಎಚ್ಚರಿಸಿದ ಪಿ. ರಾಮಚಂದ್ರನ್ ಜನಗಳ ನಡುವೆ ದುಡಿಯುವುದರಿಂದಷ್ಟೇ ದೇಶದಲ್ಲಿ ನಿಜವಾದ ಬದಲಾವಣೆ ಸಾಧ್ಯ ಎಂದರು.

ಈ 65 ಮಂದಿಯ ನಿರ್ಣಯವನ್ನು ಸ್ವಾಗತಿಸಿದ ಕಾಂ.ರಾಮಚಂದ್ರನ್ ಇದರಿಂದ ಮಧ್ಯಪ್ರದೇಶದಲ್ಲಿ ರೈತರ, ಕಾರ್ಮಿಕರ ಆಂದೋಲನ ತೀವ್ರಗೊಳ್ಳುವುದು ಎಂದು ಆಶಿಸಿದರು. ಕೋಮುವಾದದ ವಿರುದ್ಧ ಹೋರಾಟವೂ ಬಲಗೊಳ್ಳುವುದು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ ಕೂಡಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡುತ್ತಾ ಯಮುನಾ ಪ್ರಸಾದ್ ಶಾಸ್ತ್ರಿ ತಾವೆಲ್ಲಾ ಯಾವುದೇ ರಾಜಕೀಯ ಲಾಭಕ್ಕಾಗಿ ಸಿಪಿಎಂ ಸೇರುತ್ತಿಲ್ಲ, ಸಾಮೂಹಿಕ ಆಂದೋಲನಗಳನ್ನು ಕ್ರೋಢೀಕರಿಸಿ, ಸರಿಯಾದ ದಿಕ್ಕಿನಲ್ಲಿ ಸಾಗಿಸುವ ಪ್ರಯತ್ನದಲ್ಲಿ ಪಾಲುಗೊಳ್ಳಲು ಸೇರಿದ್ದೇವೆ ಎಂದರು. ನಿರ್ಣಯದ ಮೇಲೆ ಮಾತನಾಡಿದ ಎಲ್ಲಾ ಮಂದಿ ತಾವು ತಮ್ಮನ್ನು ಒಂದು ಮೇಲಿನ ಮಟ್ಟಕ್ಕೆ ಒಯ್ಯುತ್ತಿದ್ದೇವೆ, ಸಿದ್ಧಾಂತ, ಹೋರಾಟ ಹಾಗೂ ಶಿಸ್ತಿನ ಉನ್ನತ ಮಟ್ಟಕ್ಕೆ ಏರುತ್ತಿದ್ದೇವೆ ಎಂದರು.

ಘೀಸಿಂಗ್‌ರ ಹೊಸ ಆಟ

ಜಿಎನ್‌ಎಲ್‌ಎಫ್ ಮುಖಂಡ ಸುಭಾಶ್ ಘೀಸಿಂಗ್ ಹಾಗೂ ಅವರ ಪಕ್ಷದ ಇತರ ಕೌನ್ಸಿಲರುಗಳು ಮಾರ್ಚ್ 31ರಂದು ಡಾರ್ಜಿಲಿಂಗ್ ಗೋರ್ಖಾ ಪರ್ವತ ಪ್ರದೇಶ ಮಂಡಳಿಯಿಂದ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ರಾಜ್ಯ ಸರಕಾರ ಈ ಮಂಡಳಿಗೆ ಮೀಸಲಿಟ್ಟಿರುವ ಹಣವನ್ನು ಸ್ವೀಕರಿಸುವುದಿಲ್ಲ ಎಂದೂ ಅವರು ಘೋಷಿಸಿದ್ದಾರೆ.

ಆದರೆ ಜಿಎನ್‌ಎಲ್‌ಎಫ್ ಮುಖಂಡರ ಈ ಘೋಷಣೆಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿಲ್ಲ ಎಂದು ಐಎನ್‌ಎಸ್ ಸುದ್ದಿ ಸಂಸ್ಥೆ ತಿಳಿಸಿದೆ. ಜ್ಯೋತಿ ಬಸುರವರು ಡಿವೈಎಫ್ಐ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುವಾಗ ಡಾರ್ಜಿಲಿಂಗ್‌ಗೆ ಬರುವ ಮೊದಲು ಡಾರ್ಜಿಲಿಂಗ್‌ನಲ್ಲಿ ತಾನು ಕಳೆದುಕೊಂಡಿರುವ ಜನಪ್ರಿಯತೆಯನ್ನು ಮತ್ತೆ ಗಿಟ್ಟಿಸಿಕೊಳ್ಳುವ ಒಂದು ತಂತ್ರವಷ್ಟೇ ಇದು ಎಂದು ಹೆಚ್ಚಿನ ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

ಮಾರ್ಚ್ 17ರಂದು ಪಶ್ಚಿಮ ಬಂಗಾಳ ರಾಜ್ಯ ಸರಕಾರ ಪರ್ವತಪ್ರದೇಶ ಮಂಡಳಿಗೆ 12 ಕೋಟಿರೂ. ನಿಗದಿಪಡಿಸಿತ್ತು. ಇದನ್ನು ಸ್ವೀಕರಿಸುವುದಿಲ್ಲ ಎಂಬ ಘೀಸಿಂಗ್ ಘೋಷಣೆ ಈ ಪ್ರದೇಶದಲ್ಲಿ ಎಡರಂಗ ಜನಪ್ರಿಯವಾಗುವುದನ್ನು ತಡೆಯುವ ಒಂದು ದುರ್ಬಲ ಪ್ರಯತ್ನ. ಆದರೆ ಘೀಸಿಂಗ್‌ರ ನಿರ್ಧಾರಗಳಿಂದ ಜನಗಳಲ್ಲಿ ಏನೂ ಪ್ರಭಾವ ಬಿದ್ದಿಲ್ಲ. ಇಲ್ಲಿಯ ಜನಗಳು ಇಂತಹ ಆಟಗಳಿಂದ ಈಗ ಪ್ರಭಾವಿತರಾಗುತ್ತಿಲ್ಲ.

ಭೂಪಾಲ್ ದುರಂತ ಪರಿಹಾರ ಮುಂದುವರೆಸಲು ಆಗ್ರಹ

ಸಿಪಿಐ(ಎಂ) ಸಂಸತ್ ಸದಸ್ಯರಾದ ಹನ್ನನ್ ಮುಲ್ಲಾ ಹಾಗೂ ಮಾಲಿನ ಭಟ್ಟಾಚಾರ್ಯ ಮತ್ತು ಕಾಂಗ್ರೆ ಎಂಪಿ ಸುರೇಶ್ ಪಚೌರಿ, ರಾಸಾಯನಿಕ ಹಾಗೂ ರಸಗೊಬ್ಬರಗಳ ಮಂತ್ರಿ ಎಡ್ವರ್ಡ್ ಫೆಲೆರೋ ಹಾಗೂ ಮಾನವ ಸಂಪನ್ಮೂಲಗಳ ಮಂತ್ರಿ ಅರ್ಜುನ್ ಸಿಂಗ್‌ರನ್ನು ಭೇಟಿ ಮಾಡಿ ಭೂಪಾಲ ವಿಷ ಅನಿಲ ಪೀಡಿತರಿಗೆ ಮಧ್ಯಂತರ ಪರಿಹಾರವನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಭೋಪಾಲ್ ಅನಿಲ ದುರಂತದ ಹಾನಿಗೊಳಗಾಗಿವೆಯೆಂದು ಘೋಷಿಸಲ್ಪಟ್ಟ 36 ಮುನಿಸಿಪಲ್ ವಾರ್ಡ್‌ಗಳಲ್ಲಿ ಪ್ರತಿಯೊಬ್ಬ ನಿವಾಸಿಗೂ ತಿಂಗಳಿಗೆ 200ರೂ. ಮಧ್ಯಂತರ ಪರಿಹಾರವನ್ನು ಮಾರ್ಚ್ 1990ರಲ್ಲಿ ಭಾರತ ಸರಕಾರ ಘೋಷಿಸಿತ್ತು. ಅದು ಮಾರ್ಚ್ 1993ರಲ್ಲಿ ಕೊನೆಗೊಳ್ಳುತ್ತದೆ.

ಕಳೆದ ಒಂದು ವರ್ಷದಲ್ಲಿ ದಾವೆಗಳ ಇತ್ಯರ್ಥ ಮಾಡುವ ನ್ಯಾಯಾಲಯಗಳು ಕೇವಲ ಶೇ. 12. ಮರಣ ದಾವೆಗಳ ಬಗ್ಗೆ ತೀರ್ಮಾನ ನೀಡಲು ಸಾಧ್ಯವಾಗುವುದನ್ನು ನೋಡಿದರೆ ಅಂತಿಮ ಪರಿಹಾರ ಸಿಗಲು ಇನ್ನೂ ಬಹಳ ಸಮಯ ಬೇಕಾಗುತ್ತದೆ ಎನ್ನುವುದು ಸ್ಪಷ್ಟ. ಈ ನಡುವೆ ಅವರಿಗೆ ದೊರೆಯುತ್ತಿರುವ ಅಲ್ಪಸ್ವಲ್ಪ ಪರಿಹಾರವೂ ತೆಗೆದಂತಾಗುತ್ತದೆ ಎಂದು ಈ ಸಂಸತ್ ಸದಸ್ಯರು ಮಂತ್ರಿಗಳ ಗಮನಕ್ಕೆ ತಂದರು.

ಅನಿಲ ದುರಂತ ಪೀಡಿತರ ಸ್ಥಿತಿ[illegible] ಇಬ್ಬರು ಮಂತ್ರಿಗಳೂ ದಾವೆಗಳ ಇತ್ಯರ್ಥಕ್ಕಾಗಿ ನೇಮಿಸಿದ ಆಯೋಗದ ಮುಖ್ಯಸ್ಥ ನ್ಯಾಯ ಮೂರ್ತಿ ಖುರೇಶಿಯವರಿಗೂ ಈ ಸಂಸತ್ ಸದಸ್ಯರು ವಿವರಿಸಿದರು. ರಿಝರ್ವ್ ಬ್ಯಾಂಕ್ ಬಳಿಯಿರುವ ಪರಿಹಾರ ಹಣದ ಮೇಲಿನ ಬಡ್ಡಿಯಿಂದ ಮಧ್ಯಂತರ ಪರಿಹಾರವನ್ನು ಮುಂದುವರಿಸಬಹುದು ಎಂದು ಅವರು ಹೇಳಿದರು. ಇಬ್ಬರು ಮಂತ್ರಿಗಳೂ ಪರಿಹಾರ ಮುಂದುವರಿಸಲು ಏನು ಮಾಡಬಹುದು ಎಂಬ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಮಹಾರಾಷ್ಟ್ರದಲ್ಲಿ ರೈತ ಆಂದೋಲನಕ್ಕೆ ಹೊಸ ದಿಕ್ಕು

ಕಿಸಾನ್ ಸಭಾದ 15ನೇ ರಾಜ್ಯ ಸಮ್ಮೇಳನ

ಮಹಾರಾಷ್ಟ್ರದಲ್ಲಿ ವಿದರ್ಭಾ ಪ್ರದೇಶದ ಬುಲ್ಢಾನಾ ಜಿಲ್ಲೆಯ ಖಾಮಗಾಂವ್‌ನಲ್ಲಿ ಕಳೆದ ತಿಂಗಳು ನಡೆದ ಕಿಸಾನ್ ಸಭಾದ ಮಹಾರಾಷ್ಟ್ರ ರಾಜ್ಯ ಸಮ್ಮೇಳನ ರಾಜ್ಯದಲ್ಲಿ ರೈತ ಆಂದೋಲನಕ್ಕೆ ಒಂದು ಹೊಸ ದಿಕ್ಕು ನೀಡಿದ ಮಹತ್ವದ ಸಮ್ಮೇಳನ ಎಂದು ಐಎನ್‌ಎಸ್ ಸುದ್ದಿ ಸಂಸ್ಥೆಯ ವಿಶ್ಲೇಷಣೆಯೊಂದು ತಿಳಿಸಿದೆ.

1979ರ ಎಐಕೆಎಸ್‌ನ ವಾರಣಾಸಿ ಅಧಿವೇಶನದಲ್ಲಿ ನಿರೂಪಿಸಿದಂತೆ ಕಿಸಾನ್ ಸಭಾ ಚಟುವಟಿಕೆಗಳನ್ನು ವ್ಯಾಪಕಗೊಳಿಸಿ ಕೃಷಿ ಸಾಮಗ್ರಿಗಳು, ಫಲದಾಯಕ ಬೆಲೆ, ನೀರಾವರಿ, ಅಸಮಾನ ನೀರು ವಿತರಣೆ, ಸಾಲ ಇತ್ಯಾದಿ ರೈತರ ಸಮಸ್ಯೆಗಳನ್ನು ಒಂದೆಡೆ ಎತ್ತಿಕೊಳ್ಳುತ್ತಾ ಇನ್ನೊಂದೆಡೆ ಅರಣ್ಯ ಜಮೀನು, ಬಂಜರು ಪ್ರದೇಶ, ಗೋಮಾಳ, ಇನಾಮಿ ಹಾಗೂ ಟ್ರಸ್ಟ್ ಜಮೀನುಗಳಿಗಾಗಿ ಭೂ ಹೋರಾಟಗಳನ್ನು, ಬುಡಕಟ್ಟು ಜಮೀನುಗಳನ್ನು ಕಿತ್ತುಕೊಳ್ಳುವುದರ ವಿರುದ್ಧ ಹೋರಾಟಗಳು ಮುಂದುವರಿಯುತ್ತವೆ. ಇದರಿಂದ ಕಿಸಾನ್ ಸಭಾ ಮಹಾರಾಷ್ಟ್ರದಲ್ಲಿ ಕೇವಲ ಬುಡಕಟ್ಟು ಪ್ರದೇಶಗಳಿಗೇ ಸೀಮಿತಗೊಳ್ಳದೆ ಇತರ ಬಡ, ಮಧ್ಯಮದ ರೈತರ ಹೊಸ ವಿಭಾಗಗಳತ್ತ ಹರಡುವುದು ಸಾಧ್ಯವಾಗುತ್ತದೆ.

ರೈತ ಆಂದೋಲನ ಈಗ ಎರಡು ಅಪಾಯಗಳನ್ನು ಎದುರಿಸುತ್ತಿದೆ. ಒಂದು, ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನೀತಿಗಳು ಹಾಗೂ ಡಂಕೆಲ್ ಪ್ರಸ್ತಾಪಗಳು ಹಾಗೂ ಇನ್ನೊಂದೆಡೆ ಕೋಮುವಾದಿ-ಫ್ಯಾಸಿಸ್ಟ್ ಶಕ್ತಿಗಳು. ಈ ಎರಡೂ ಶತ್ರುಗಳ ವಿರುದ್ಧ ಬಲವಾದ ಹೋರಾಟ ನಡೆಸಬೇಕು ಎಂದು ಸಮ್ಮೇಳನ ಕರೆ ನೀಡಿತು.

ರಾಜ್ಯ ಕಿಸಾನ್ ಸಭಾ ಅಧ್ಯಕ್ಷ ಹಾಗೂ ಸಂಸತ್ ಸದಸ್ಯ ರಾಮಚಂದ್ರ ಗಂಗಾರೆ ಮಹಾರಾಷ್ಟ್ರದ ಶೇತ್‌ಕಾರಿ ಸಂಘಟನಾ ಹಾಗೂ ಅದರ ಮುಖಂಡ ಶರದ್ ಜೋಷಿ "ಮುಕ್ತ ಮಾರುಕಟ್ಟೆ", ಹೊಸ ಆರ್ಥಿಕ ನೀತಿಗಳು ಹಾಗೂ ಮುಖ್ಯ ಡಂಕೆಲ್ ಪ್ರಸ್ತಾಪಗಳನ್ನು ಕೂಡಾ ಸ್ವಾಗತಿಸಿರುವುದನ್ನು ತೀಕ್ಷ್ಣವಾಗಿ ಟೀಕಿಸಿದರು. ಶರದ್ ಜೋಷಿಯವರ ಮೋಸವನ್ನು, ರೈತ-ವಿರೋಧಿ ನಿಲುವನ್ನು ಬಯಲಿಗೆಳೆಯಬೇಕು ಎಂದು ಅವರು ಹೇಳಿದರು.

ಸಮಾಪನ ಅಧಿವೇಶನದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪ್ರಭಾಕರ್ ಸಾಂಝ್‌ಗಿರಿ ಈ ಸಮ್ಮೇಳನ ಕಿಸಾನ್ ಆಂದೋಲನಕ್ಕೆ ಒಂದು ಹೊಸ ಆರಂಭ ಎಂದರು.

ಅಂಡಮಾನ್-ನಿಕೋಬಾರ್‌ನಲ್ಲಿ ಎಸ್‌ಎಫ್‌ಐ ಘಟಕ

ಭಾರತ ವಿದ್ಯಾರ್ಥಿ ಫೆಡರೇಶನ್‌ನ ಮೊದಲ ಅಂಡಮಾನ್-ನಿಕೋಬಾರ್ ಸಂಘಟನಾ ಸಮಿತಿ ಮಾರ್ಚ್ 23ರಂದು ಪೋರ್ಟ್ ಬ್ಲೇರ್‌ನಲ್ಲಿ ನಡೆದ ವಿದ್ಯಾರ್ಥಿ ಸಮಾವೇಶವೊಂದರಲ್ಲಿ ರಚನೆಗೊಂಡಿದೆ. ಈ ದ್ವೀಪದ ಹೈಸ್ಕೂಲ್, ಕಾಲೇಜು, ಪಾಲಿಟೆಕ್ನಿಕ್ ಹಾಗೂ ಐಟಿಐಗಳಲ್ಲಿ ಅಧ್ಯಯನ ಮಾಡುತ್ತಿರುವ 62 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಎಸ್‌ಎಫ್‌ಐನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸುಜನ್ ಚಕ್ರವರ್ತಿ ಹಾಗೂ ಪಶ್ಚಿಮ ಬಂಗಾಳದ ತಾಂತ್ರಿಕ ಶಿಕ್ಷಣ ಮಂತ್ರಿ ಬಸ್ಸುಗೋಪಾಲ ಚೌಧುರಿ ಸಮಾವೇಶದಲ್ಲಿ ಹಾಜರಿದ್ದರು. ಈ ದ್ವೀಪದಲ್ಲಿ ಅಧ್ಯಯನ ಮತ್ತು ಹೋರಾಟದ ಪ್ರಕ್ರಿಯೆಯಲ್ಲಿ ಪಾಲುಗೊಳ್ಳಲು ಒಂದು ಘಟಕ ಆರಂಭಿಸುವುದರ ಮಹತ್ವದ ಬಗ್ಗೆ ಅವರು ಒತ್ತಿ ಹೇಳಿದರು. ಇಲ್ಲಿನ ವಿದ್ಯಾರ್ಥಿಗಳು ಸಂಘಟಿತರಾಗಿ ದೇಶದ ವಿದ್ಯಾರ್ಥಿ ಆಂದೋಲನದ ಮುಖ್ಯಧಾರೆಯಲ್ಲಿ ಬೆರೆಯಬೇಕು ಎಂದರು.

21 ಸದಸ್ಯರುಳ್ಳ ಒಂದು ಸಂಘಟನಾ ಸಮಿತಿ ರಚನೆಗೊಂಡಿತು. ಬಿಭಾಸ್ ರೇ ಇದರ ಸಂಯೋಜಕ. ಆರು ತಿಂಗಳೊಳಗೆ ಒಂದು ಎಸ್‌ಎಫ್‌ಐ ಸಮ್ಮೇಳನ ನಡೆಸುವ ಗುರಿಯನ್ನು ಈ ಸಮಿತಿ ಹಮ್ಮಿಕೊಂಡಿದೆ.

ಪಶ್ಚಿಮ ಬಂಗಾಳದಲಿ ನಿರುದ್ಯೋಗ-ವಿರೋಧಿ ದಿನಾಚರಣೆ

ರಾಜ್ಯಾದ್ಯಂತ ಸಾಮೂಹಿಕ ಸಂಘಗಳು, ಮೆರವಣಿಗೆಗಳ ಮೂಲಕ ಪಶ್ಚಿಮ ಬಂಗಾಳದ ಯುವಜನ ಎಂದಿನಂತೆ ಮಾರ್ಚ್ 29ರಂದು 'ನಿರುದ್ಯೋಗ-ವಿರೋಧಿ ದಿನ'ವನ್ನು ಆಚರಿಸಿದರು. ಕಲ್ಕತ್ತೆಯಲ್ಲಿ ಈ ಸಂದರ್ಭದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಕೇಂದ್ರ ಕಾರ್ಮಿಕ ಸಂಘಟನೆಗಳು, ಬ್ಯಾಂಕ್, ವಿಮಾ ನೌಕರರ ಸಂಘಟನೆಗಳು ಮತ್ತಿತರ ರೈತ,ವಿದ್ಯಾರ್ಥಿ, ಮಹಿಳಾ, ಯುವಜನರ ಸಾಮೂಹಿಕ ಸಂಘಟನೆಗಳು ಜಂಟಿಯಾಗಿ ಈ ರ್‍ಯಾಲಿಯನ್ನು ಸಂಘಟಿಸಿದ್ದವು. 1973ರಿಂದ ಮಾರ್ಚ್ 29ನ್ನು ನಿರುದ್ಯೋಗ-ವಿರೋಧಿ ದಿನವಾಗಿ ಇಲ್ಲಿ ಆಚರಿಸಲಾಗುತ್ತಿದೆ. ನಿರುದ್ಯೋಗವನ್ನು ಉಲ್ಬಣಗೊಳಿಸುತ್ತಿರುವ ಕೇಂದ್ರ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳನ್ನು ತಕ್ಷಣ ಬದಲಿಸಬೇಕು ಎಂದು ಒತ್ತಾಯಿಸಿದ ರ್‍ಯಾಲಿ ಇಂತಹ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರಕಾರದ ವಿರುದ್ಧ ವ್ಯಾಪಕ ಹೋರಾಟದ ಕಾರ್ಯಕ್ರಮವನ್ನು ಏಪ್ರಿಲ್ 15ರಂದು ನವದೆಹಲಿಯಲ್ಲಿ ನಡೆಯುವ ಸಮಾವೇಶ ನಿರ್ಧರಿಸಲಿದೆ ಎಂದಿದೆ.

ಸ್ಟಾರ್ ಟಿವಿ ಪ್ರಸಾರ ತಡೆಯಲು ಪಶ್ಚಿಮ ಬಂಗಾಳದಲ್ಲಿ ಕ್ರಮ

ಸ್ಟಾರ್ ಟಿವಿ ಜಾಲದ ಹರಡುವಿಕೆಯನ್ನು ತಡೆಯಲು ನಿರ್ದಿಷ್ಟ ಮಾರ್ಗದರ್ಶನ ನೀಡಿ ಎಂದು ಕೇಂದ್ರ ಸರಕಾರವನ್ನು ಪದೇ ಪದೇ ಕೇಳಿಕೊಂಡರೂ ಏನೂ ಉತ್ತರ ಬರದಿದ್ದರಿಂದ ಪಶ್ಚಿಮ ಬಂಗಾಳ ಸರಕಾರ ತಾನಾಗಿಯೇ ಕೆಲವು ಕ್ರಮಗಳನ್ನು ಕೈಗೊಂಡಿದೆ. ಕೇಬಲ್ ಟಿವಿ ನಡೆಸುವವರು ಅಗತ್ಯ ಲೈಸೆನ್ಸ್ ಪಡೆಯುವಂತೆ ಮಾಡಬೇಕೆಂದು ಪೋಲೀಸ್ ವಿಭಾಗಕ್ಕೆ ಆದೇಶ ನೀಡಿದೆ.

ರಾಜ್ಯದಲ್ಲಿ ಸ್ಟಾರ್ ಟಿವಿ ಪ್ರಸಾರ ನಡೆಸುವವರಿಗೆ ಲೈಸೆನ್ಸ್ ನೀಡುವ ಬಗ್ಗೆ ಮಾರ್ಗದರ್ಶನಗಳನ್ನು ಒದಗಿಸಬೇಕೆಂದು ಕೇಂದ್ರವನ್ನು ಮತ್ತೆ-ಮತ್ತೆ ಕೇಳಲಾಯಿತು, ಆದರೆ ಅಲ್ಲಿಂದ ಏನೂ ಉತ್ತರ ಬರಲಿಲ್ಲ ಎಂದು ವಿಧಾನಸಭೆಗೆ ರಾಜ್ಯ ಸುದ್ದಿ ಮತ್ತು ಸಾಂಸ್ಕೃತಿಕ ವ್ಯವಹಾರಗಳ ಮಂತ್ರಿ ಬುದ್ಧದೇವ ಭಟ್ಟಾಚಾರ್ಯ ತಿಳಿಸಿದರು.

ಅಗತ್ಯ ಲೈಸೆನ್ಸ್ ಇಲ್ಲದ ಹಾಗೂ ಮನರಂಜನಾ ತೆರಿಗೆ ನೀಡದ ವಿಡಿಯೋ ಪ್ರಸಾರಗಳನ್ನು ರಾಜ್ಯ ಸರಕಾರ ಆಗಲೇ ನಿರ್ಬಂಧಿಸಿದೆ.

ದಿಲ್ಲಿ : ರೈಲು ಭವನದೆದುರು ಯುವಜನರ ಪ್ರದರ್ಶನ

ಹತ್ತು ಎಡ-ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ವಿದ್ಯಾರ್ಥಿ-ಯುವಜನರ ಸಂಘಟನೆಗಳು ಮಾರ್ಚ್ 31ರಂದು ನವದೆಹಲಿಯಲ್ಲಿ 'ರೈಲು ಭವನ'ದ ಎದುರು ರೈಲ್ವೇ ದರಗಳ ಏರಿಕೆಯನ್ನು ಪ್ರತಿಭಟಿಸಿ ಮತ[illegible] ಪ್ರದರ್ಶನ ಸಂಘಟಿಸಿದವು. ಮೆರವಣಿಗೆಯನ್ನು ಪೋಲೀಸರು ಮಾರ್ಗ ಮಧ್ಯದಲ್ಲಿಯೇ ತಡೆದುದರಿಂದ ಪ್ರತಿಭಟನಾಕಾರರು ಬಂಧನಕ್ಕೊಳಗಾದರು. ಬಂಧನದ ಮೊದಲು ನಡೆದ ಸಭೆಯಲ್ಲಿ ಎಲ್ಲಾ ಸಂಘಟನೆಗಳ ಮುಖಂಡರು ಏಪ್ರಿಲ್ 1ರಿಂದ ದೇಶಾದ್ಯಂತ ವಿದ್ಯಾರ್ಥಿ-ಯುವಜನ ರೈಲ್ವೇ ಬಜೆಟ್ ಹಾಗೂ ಸಾಮಾನ್ಯ ಬಜೆಟ್ ವಿರುದ್ಧ ಏಪ್ರಿಲ್ 1ರಂದು 'ರೈಲ್ ರೋಖೋ' ನಡೆಸುವರು ಎಂದು ತಿಳಿಸಿದರು. ನಾವು ಸರಕಾರದಿಂದ ಭಿಕ್ಷೆ ಕೇಳುತ್ತಿಲ್ಲ, ಆದ್ದರಿಂದ ದರ[illegible] ಏರಿಕೆಯನ್ನು ಪೂರ್ಣ ರದ್ದುಗೊಳಿಸಬೇಕು[illegible] ಪ್ರಧಾನಮಂತ್ರಿಗಳ ಅಳಿಯನಿಗೆ ರೈಲ್ವೇ ಸ್ಲೀಪ[illegible]ರ್‌ಗಳ ಆರ್ಡರ್‌ನಲ್ಲಿ ಕಾನೂನು ಬಾಹಿರ[illegible]ರಿಯಾಯ್ತಿ ನೀಡಿದ ರೈಲ್ವೇ ಮಂತ್ರಿಗಳಿರುವ[illegible] ಸರಕಾರಕ್ಕೆ ಜನಗಳ ಮೇಲೆ ಹೊರೆ ಹಾಕುವ[illegible] ಯಾವುದೇ ಹಕ್ಕಿಲ್ಲ ಎಂದು ಎಸ್‌ಎಫ್‌ಐ[illegible] ಜಂಟಿ ಕಾರ್ಯದರ್ಶಿ ಬ್ರತಿನ್ ಸೇನ್‌ಗುಪ್ತ[illegible] ಹೇಳಿದರು.

ಎಸ್‌ಎಫ್‌ಐನ ಮಹೇಶ್‌ಕುಮಾರ್[illegible] ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎ[illegible]ಫ್‌ಐ, ಡಿವೈಎಫ್‌ಐ, ಎಐವೈಎಫ್, ಎಐ[illegible] ಎಸ್‌ಎಫ್, ಎಐಪಿಎಸ್‌ಯು, ಆರ್‌ವೈ[illegible] ಎಫ್, ಎಐಎಸ್‌ಬಿ, ಎಐವೈಎಲ್ ಹಾಗೂ ಸಿಜೆಡಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ[illegible] ಸಂಘಟನೆಗಳು.

ಭಿಕ್ಷಾಪಾತ್ರೆ ಹಿಡಿದು ಹೊರಟ ಯೆಲ್ಟ್‌ಸಿನ್

ಶರತ್ ಚಂದ್ರ

ಜನತಾ ಪ್ರತಿನಿಧಿಗಳ ಸಭೆ ರಶ್ಯನ್ ಪಾರ್ಲಿಮೆಂಟಿನ ವಿಶ್ವಾಸ ಕಳೆದುಕೊಂಡಿರುವ ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್ ತಮ್ಮ ಉಳಿವಿಗೆ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್‌ರ ಮೊರೆ ಹೊಕ್ಕಿದ್ದಾರೆ. ಕೆನಡಾದ ವ್ಯಾಂಕೂವರ್ ಪಟ್ಟಣದಲ್ಲಿ ಇಬ್ಬರು ಅಧ್ಯಕ್ಷರುಗಳ ನಡುವೆ ಶೃಂಗಸಭೆ ನಡೆಯಿತು. ಅಧ್ಯಕ್ಷ ಯೆಲ್ಟ್‌ಸಿನ್ ತಮ್ಮನ್ನು ಹಾಗೂ ರಶ್ಯದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಸ್ಥಾಪಿಸುವ ತಮ್ಮ ಯೋಜನೆಯನ್ನು ಬದುಕಿ ಉಳಿಸುವಂತೆ ರಕ್ಷಣೆಗೆ ಕ್ಲಿಂಟನ್ ಮೊರೆ ಹೊಕ್ಕಿದ್ದಾರೆ.

ಅಧ್ಯಕ್ಷ ಕ್ಲಿಂಟನ್ ಯೆಲ್ಟ್‌ಸಿನ್ ಮತ್ತು ರಶ್ಯದ ಬಂಡವಾಳಶಾಹಿಯನ್ನು ಉಳಿಸಿಕೊಳ್ಳಲು ಒಂದೂವರೆ ಶತ ಕೋಟಿ ಡಾಲರು ಸಾಲ ಮಂಜೂರು ಮಾಡಿದ್ದಾರೆ. ಇದು ಮೊದಲನೇ ಹಂತ. ಎರಡನೇ ಹಂತ ಮೂರ ಗಾಮಿ ಯೋಜನೆಯಾಗಿ ಗುಂಪು-7 ವಿಕಸಿತ ದೇಶಗಳು ರಶ್ಯಕ್ಕೆ ಸಹಾಯಧನ ಘೋಷಿಸಲಿವೆಯಂತೆ.

ಇದಕ್ಕಿಂತ ಮೊದಲು ರಶ್ಯನ್ ಪಾರ್ಲಿಮೆಂಟು ಅಧ್ಯಕ್ಷ ಯೆಲ್ಟ್‌ಸಿನ್‌ರ ನಾಲ್ಕು ಸುಗ್ರೀವಾಜ್ಞೆಗಳು ಕಾನೂನುಬದ್ಧವೇ ಎಂದು ಪರಿಶೀಲಿಸಲು ಕೋರ್ಟಿಗೆ ಕೇಳಿಕೊಂಡಿದೆ. ಇದರಲ್ಲಿ ವಿಶೇಷಾಧಿಕಾರ ವಹಿಸಿಕೊಂಡ ಸುಗ್ರೀವಾಜ್ಞೆಯೂ ಸೇರಿದೆ. ಏಪ್ರಿಲ್ 25ರಂದು ಜನಮತ ಸಂಗ್ರಹಕ್ಕೆ ಹಾಕಿದ ಪ್ರಶ್ನೆಗಳು ಯೆಲ್ಟ್‌ಸಿನ್‌ರನ್ನು ಇಕ್ಕಟ್ಟಿಗೆ ಸಿಲುಕಿಸಿವೆ. ಅಧ್ಯಕ್ಷರಲ್ಲಿ ವಿಶ್ವಾಸವಿದೆಯೇ ಎಂಬ ಪ್ರಶ್ನೆಯನ್ನು ಜನಮತಸಂಗ್ರಹದಲ್ಲಿ ಕೇಳಲಾಗುತ್ತಿದೆ. ಪ್ರಶ್ನೆಗೆ ಹೌದು ಅಥವಾ ಇಲ್ಲ ಎಂದು ನಿರ್ಧರಿಸಲು ಅರ್ಹ ಮತದಾರರ ಶೇಕಡಾ 50ರಷ್ಟು ಇರಬೇಕು ಎಂದು ವಿಧಿಸಿದೆ. ಈ ನಡುವೆ ತನ್ನದೇ ಜನಮತಸಂಗ್ರಹ ನಡೆಸಲು ನಿರ್ಧರಿಸಿದ್ದ ಯೆಲ್ಟ್‌ಸಿನ್ ಅದನ್ನು ನಡೆಸದಿರಲು ನಿರ್ಧರಿಸಿದ್ದಾರೆ.

ಸುಭಿಕ್ಷದ ನಡುವೆ ಕ್ಷಾಮ

ಹೀಗೂ ಕೇಳಿದ್ದೀರಾ? ಆಹಾರ ಉತ್ಪನ್ನಗಳ ಬೆಲೆ ಕಡಿಮೆಯಾಗದಂತೆ ನೋಡಿಕೊಳ್ಳಲು ಉತ್ಪನ್ನಗಳನ್ನು ನಾಶಮಾಡಲಾಗುತ್ತದೆ. ಯುರೋಪಿಯನ್ ಸಮುದಾಯ ಪ್ರತಿ ವರ್ಷ 10ಕೋಟಿ ಪೌಂಡ್ ಬೆಲೆ ಬಾಳುವ ಆಹಾರ ಉತ್ಪನ್ನಗಳನ್ನು ನಾಶ ಮಾಡುತ್ತಿದೆಯಂತೆ. ತರಕಾರಿ, ಹಣ್ಣುಗಳನ್ನು ಮುಖ್ಯವಾಗಿ ನಾಶ ಮಾಡಲಾಗುತ್ತಿದೆ.

ವಿಕಾಸಶೀಲ ದೇಶಗಳಲ್ಲಿ ಕ್ಷಾಮ ಉತ್ತಮ ಆಹಾರ ಉತ್ಪನ್ನ ಕೊರತೆ, ಇರುವಾಗ ಯುರೋಪಿಯನ್ ಸಮುದಾಯದ ಈ ಕ್ರಿಮಿನಲ್ ಕಾರ್ಯಾಚರಣೆ ಆಶ್ಚರ್ಯಕರ. ಇಂತಹ 'ಸುಭಿಕ್ಷ' ಬಂಡವಾಳಶಾಹಿಗಳಲ್ಲದೆ ಬೇರೆ ಯಾರಿಗೂ ಸಾಧ್ಯವಿಲ್ಲ.

ಯುರೋಪಿಯನ್ ಕಾರ್ಮಿಕರ ಐಕ್ಯ ಹೋರಾಟ

ಯುರೋಪಿಯನ್ ಸಮುದಾಯದ ಏಕೀಕರಣದ ಯೋಜನೆ ಯುರೋಪಿಯನ್ ಏಕೀಕೃತ ಮಾರುಕಟ್ಟೆ ಸರಿಯಾದ ಸಾಮಾಜಿಕ ಕಾನೂನುಗಳಿಲ್ಲದಿದ್ದರೆ ಏನಾದೀತು ಎಂದು ಇತ್ತೀಚಿನ ಘಟನೆಗಳು ತೋರಿಸಿಕೊಟ್ಟಿವೆ ಎಂದು ಯುರೋಪಿಯನ್ ಟ್ರೇಡ್ ಯೂನಿಯನ್ ಕಾನ್ಫಡರೇಶನ್ ತೋರಿಸಿಕೊಟ್ಟಿದೆ.

ಇದರ ವಿರುದ್ಧ ಪ್ರತಿಭಟಿಸಲು ಏಪ್ರಿಲ್ 2ರಂದು ಪ್ರತಿಭಟನಾ ದಿನವಾಗಿ ಗುರುತಿಸಲಾಗಿತ್ತು. ಯುರೋಪಿಯನ್ ಸಮುದಾಯ ಮತ್ತು ಇತರ ದೇಶೀಯ ಸರಕಾರಗಳ ಗಮನವನ್ನು ಸೆಳೆಯುವುದು ಈ ಕಾರ್ಯಾಚರಣೆಯ ಉದ್ದೇಶ. ಪ್ರದರ್ಶನಗಳು, ಧರಣಿ, ಸಾರ್ವತ್ರಿಕ ಮುಷ್ಕರ ಮುಂತಾದ ರೂಪಗಳಲ್ಲಿ ಪ್ರತಿಭಟನೆ ಮಾಡಲಾಯಿತು. ಜೂನ್‌ನಲ್ಲಿ ನಡೆಯುವ ಯುರೋಪಿಯನ್ ಸಮುದಾಯದ ಸಭೆಯಲ್ಲಿ ಆರ್ಥಿಕ ಹಿಂಜರಿತ ಎದುರಿಸಿ ಉದ್ಯೋಗಗಳನ್ನು ಕಾಪಾಡುವಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗುತ್ತಿದೆ.

ಅಮೇರಿಕಕ್ಕೆ ಚೀನಾದ ಸವಾಲು

ಅಣ್ವಸ್ತ್ರ ನಿಷೇಧ ಪ್ರಸಾರ ಒಪ್ಪಂದದಿಂದ ಉತ್ತರ ಕೊರಿಯಾ ಹೊರಬಂದ ಹಿನ್ನೆಲೆಯಲ್ಲಿ ಅಮೇರಿಕ, ಜಪಾನುಗಳು ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಮೂಲಕ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದ್ದವು. ಉತ್ತರ ಕೊರಿಯಾವನ್ನು ಇರಾಕಿನಂತೆ ಆರ್ಥಿಕ ದಿಗ್ಬಂಧನದಿಂದ ಮಣಿಸುವ ಸಂಚು ಇದಾಗಿತ್ತು. ಆದರೆ ಚೀನಾ ಈ ವಿಷಯದ ಮೇಲೆ ಉತ್ತರ ಕೊರಿಯಾದ ವಿರುದ್ಧ ದಿಗ್ಬಂಧನದಲ್ಲಿ ತಾನು ಭಾಗವಹಿಸುವುದಿಲ್ಲ ಎಂದು ಹೇಳಿ ಅಮೇರಿಕಾಕ್ಕೆ ಸವಾಲು ಹಾಕಿದೆ. ಭದ್ರತಾ ಸಮಿತಿಯ ಶಾಶ್ವತ ಸದಸ್ಯ ದೇಶವಾಗಿ ಚೀನಾಕ್ಕೆ ವೀಟೋ ಇರುವುದರಿಂದ ಮುಖಭಂಗವಾದೀತು ಎಂದು ಅಮೇರಿಕ ಭದ್ರತಾ ಸಮಿತಿಯ ಕ್ರಮದ ಬಗ್ಗೆ ಒತ್ತಾಯಿಸಲಿಕ್ಕಿಲ್ಲ ಎನ್ನಲಾಗಿದೆ.

ಈ ನಡುವೆ ಉತ್ತರಕೊರಿಯಾ ಅಂತರಾಷ್ಟ್ರೀಯ ಅಣು ಶಕ್ತಿ ಕಮಿಶನ್ ದಕ್ಷಿಣ ಆಫ್ರಿಕಾದಲ್ಲಿ ತಪಾಸಣೆ ಮಾಡಿದ್ದಾಗ್ಯೂ, ಅಣ್ವಸ್ತ್ರದ ಯೋಜನೆಯ ಸುಳಿವು ಸಿಕ್ಕಿಲ್ಲ. ಆದರೆ ದಕ್ಷಿಣ ಆಫ್ರಿಕಾದ ಅಧ್ಯಕ್ಷರೇ ಅವರ ದೇಶ ಹಿಂದೆ ಬಾಂಬ್ ತಯಾರಿಸಿತ್ತು ಎಂದು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಇದು ಅಮೇರಿಕಾವನ್ನು ಪೇಚಿಗೆ ಸಿಲುಕಿಸಿದೆ. ಅಮೇರಿಕ ಏಕೆ ಗದ್ದಲ ಮಾಡುತ್ತಿಲ್ಲ ಎಂದು ಉತ್ತರ ಕೊರಿಯಾ ಪ್ರಶ್ನಿಸಿದೆ.



ಯಾರು ದಕ್ಷರು?

ವಿದೇಶೀ ಬ್ಯಾಂಕುಗಳು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುತ್ತವೆ. ಇದು 'ಆರ್ಥಿಕ ಸುಧಾರಣೆ'ಗಳ ಹೆಸರಿನಲ್ಲಿ ಸರಕಾರ ಹೇಳುತ್ತಿರುವ ಮನಮೋಹನ ಸುಳ್ಳುಗಳಲ್ಲಿ ಒಂದು.

ಬಾರ್‌ಕ್ಲೇಸ್ ಬ್ರಿಟನ್‌ನ ದೊಡ್ಡ ಬ್ಯಾಂಕುಗಳಲ್ಲೊಂದು. ಈ ವರ್ಷ ಅದು 24 ಕೋಟಿ ಪೌಂಡುಗಳ ನಷ್ಟ ಅನುಭವಿಸಿದೆ. 255 ಕೋಟಿ ಪೌಂಡ್‌ಗಳನ್ನು ತಿರುಗಿ ಪಾವತಿಯಾಗದ ಸಾಲ ತುಂಬಿಕೊಳ್ಳಲಿಕ್ಕಾಗಿ ತೆಗೆದಿರಿಸಿದೆ.

"ಮೈತ್ರಿ ಜ್ಯೋತಿ"

ದೇಶದ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಕೋಮುವಾದಿ ಶಕ್ತಿಗಳು ಹಾಳುಗೆಡವುತ್ತಿರುವ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಅಚ್ಚಳಿಯದ ಹೆಸರಾದ ಭಗತ್ ಸಿಂಗ್‌ರವರು ಬ್ರಿಟಿಷರ ನೇಣುಗಂಬವನ್ನೇರಿ ಹುತಾತ್ಮರಾದ ಮಾರ್ಚ್ 23ರಂದು ಡಿವೈಎಫ್‌ಐ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಮತ್ತೆ ಜಾಗೃತಗೊಳಿಸುವ ಪ್ರಯತ್ನವಾಗಿ "ಮೈತ್ರಿ ಜ್ಯೋತಿ" ಕಾರ್ಯಕ್ರಮವನ್ನು ದೇಶಾದ್ಯಂತ ನಡೆಸಿತು. ಹಿಂದಿನ ಎರಡು ಸಂಚಿಕೆಗಳಲ್ಲಿ ರಾಜ್ಯದ ಹಲವೆಡೆ ಈ ಸಂದರ್ಭದಲ್ಲಿ ನಡೆದ ಕಾರ್ಯಕ್ರಮಗಳ ಬಗ್ಗೆ ಓದಿರುವಿರಿ. ನಂತರ ಇನ್ನಷ್ಟು ವರದಿಗಳು ಬಂದಿವೆ. ಅವನ್ನು ಮುಂದೆ ಕೊಡಲಾಗಿದೆ.

ನೆಲಮಾಕನಹಳ್ಳಿ : ಮಳವಳ್ಳಿ ತಾಲೂಕು ನೆಲಮಾಕನಹಳ್ಳಿ ಗ್ರಾಮದಲ್ಲಿ ಸಂಜೆ 7 ಗಂಟೆಗೆ ಮೈತ್ರಿ ಜ್ಯೋತಿ ಉದ್ಘಾಟನೆ ಜಿ.ರಾಮಕೃಷ್ಣ ಸಿಪಿಐ(ಎಂ) ಶಾಖಾ ಕಾರ್ಯದರ್ಶಿ ಮಳವಳ್ಳಿ ಇವರಿಂದ ಪ್ರಾರಂಭವಾಯಿತು. ಈ ಗ್ರಾಮದಲ್ಲಿ ಸುಮಾರು 500 ಮನೆಗಳಲ್ಲಿ ದೀಪ ಬೆಳಗಿದವು. ರಾತ್ರಿ 9 ಗಂಟೆಗೆ ಸಮಾರಂಭ ಉದ್ಘಾಟನೆಯನ್ನು ಬಿಜಿವಿಎಸ್‌ನ ರಾಜ್ಯ ಸಮಿತಿಯ ಸದಸ್ಯರಾದ ಅಬ್ದುಲ್ ಲತೀಫ್ ನಡೆಸಿದರು. ಜಯಶೇಖರಪ್ಪ ಡಿವೈಎಫ್‌ಐನ ತಾಲೂಕು ಅಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದರು. ಭಾಷಣಕಾರರಾಗಿ ಎಸ್.ಸಿದ್ದಯ್ಯ(ವಕೀಲರು), ಮುಖ್ಯ ಅತಿಥಿಗಳಾಗಿ ಜಿ.ರಾಮಲಿಂಗೇಗೌಡ, ಎನ್.ಎಸ್.ಸಿದ್ದೇಗೌಡ ಉಪಸ್ಥಿತರಿದ್ದರು. ನೆಲಮಾಕನಹಳ್ಳಿ ಯುವಜನರಿಂದ ಕೋಲಾಟ ಹಾಗೂ ಕೊದೇನುಕೊಪ್ಪಲ್ ಶಾಲಾ ಬಾಲಕಿಯರಿಂದ ಕೋಲಾಟ ಮತ್ತು ನಾರಾಯಣ ಹಾಗೂ ಸಂಗಡಿಗರಿಂದ ಕ್ರಾಂತಿ ಗೀತೆಗಳ ಕಾರ್ಯಕ್ರಮವಿತ್ತು. ಎನ್.ಎಸ್.ಸಂದೀಶ್ ಸ್ವಾಗತ ಮಾಡಿದರು. ಕಾರ್ಯದರ್ಶಿ ಶಂಕರೇಗೌಡ ನಿರೂಪಣೆ ಮಾಡಿದರು. ನೆಲಮಾಕನಹಳ್ಳಿ ಡಿವೈಎಫ್‌ಐ ಅಧ್ಯಕ್ಷ ಎನ್.ಭರತ್‌ರಾಜ್ ವಂದನಾರ್ಪಣೆ ಮಾಡಿದರು.

ಉಡುಪಿ : ಮಾರ್ಚ್ 23ರ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಸ್ವಾತಂತ್ರ್ಯ ಹೋರಾಟಗಾರ ನ್ಯಾಯವಾದಿ ಶ್ರೀ ಯೋಗೀಶ್ವರ ಹೊಳ್ಳರವರು ಭಗತ್ ಸಿಂಗ್‌ರವರ ಆದರ್ಶಗಳು, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರದ ಬಗ್ಗೆ ವಿವರಿಸಿ ಇಂತಹ ಕಾರ್ಯಕ್ರಮ ನಡೆಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಶಂಭು ಶೆಟ್ಟಿಯವರು ಮಾತನಾಡಿ ಭಗತ್‌ಸಿಂಗ್‌ರವರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಹಾಗೂ ಈಗಲೂ ಸಹ ಸಾಮ್ರಾಜ್ಯಶಾಹಿ ಶಕ್ತಿಗಳು ನಮ್ಮ ದೇಶದ ಸಂಪತ್ತನ್ನು ದೋಚುತ್ತಿರುವುದರ ಬಗ್ಗೆ ಉದಾಹರಣೆ ಸಹಿತ ವಿವರಿಸಿ ಇದನ್ನು ಪ್ರತಿಭಟಿಸಲು ಕರೆ ನೀಡಿದರು.

ಅತಿಥಿಯಾಗಿ ಭಾಗವಹಿಸಿದ ದೂರವಾಣಿ ನೌಕರರ ಸಂಘದ ಶ್ರೀ ದೇಜಪ್ಪನವರು ಜಾತೀಯತೆಯ ಹಾಗೂ ಮತೀಯ ಭಾವನೆಯ ವಿಷವು ನಮ್ಮ ಸಮಾಜವನ್ನು ನಾಶಗೊಳಿಸುತ್ತಿರುವುದನ್ನು ವಿವರಿಸಿ ಈ ಬಗ್ಗೆ ಜನಜಾಗೃತರಾಗಬೇಕೆಂದು ಕರೆ ನೀಡಿದರು. ಅಧ್ಯಕ್ಷತೆ ವಹಿಸಿದದ ಶ್ರೀ ಕೆ.ಪ್ರಭಾಕರ್ ನಾಯಕ್‌ರವರು ಮಾತನಾಡಿ ಸಾಮ್ರಾಜ್ಯಶಾಹಿಗಳ ಕುತಂತ್ರಗಳ ವಿರುದ್ಧ ಹೋರಾಡಬೇಕಾದ ಈ ಸಂದರ್ಭದಲ್ಲಿ ನಮ್ಮೊಳಗಿನ ಐಕ್ಯತೆ ನಾಶವಾಗಿರುವುದು ದುರಂತವೆಂದು ಹೇಳಿ, ಕೋಮುವಾದದ ವಿರುದ್ಧ ಹಾಗೂ ಸಾಮ್ರಾಜ್ಯಶಾಹಿಗಳ ವಿರುದ್ಧ ಜನ ಜಾಗೃತಿ ಮೂಡಿಸುವಂತೆ ವಿನಂತಿಸಿದರು. ಕಾರ್ಯಕ್ರಮದ ಆರಂಭದಿ-ದ ಕೊನೆಯವರೆಗೂ ಡಿವೈಎಫ್‌ಐ ಸದಸ್ಯರು ಹಾಗೂ ಸಾರ್ವಜನಿಕರು ದೀಪಗಳನ್ನು ಹಿಡಿದು ಮೈತ್ರಿ ಜ್ಯೋತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕೊನೆಗೆ ಕಾರ್ಯದರ್ಶಿ ಪಿ.ವಿಶ್ವನಾಥ್‌ರವರು ವಂದಿಸಿದರು.

ದೊಡ್ಡಬಳ್ಳಾಪುರ : ಡಿವೈಎಫ್‌ಐ ಮತ್ತು ಸ್ಪಂದನ ಸಾಹಿತ್ಯವೇದಿಕೆಯು ಜಂಟಿಯಾಗಿ ತಾ. 4.4.93ರಂದು ದೊಡ್ಡಬಳ್ಳಾಪುರದ ಪುರಭವನದಲ್ಲಿ ಹುತಾತ್ಮ ಭಗತ್‌ಸಿಂಗ್ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಸ್ವಾಗತ ಭಾಷಣವನ್ನು ವಕೀಲರಾದ ಎಸ್.ರುದ್ರಾರಾಧ್ಯರವರು ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ವೆಂಕಟರೆಡ್ಡಿಯವರು ವಹಿಸಿದ್ದರು. ಕಾರ್ಯಕ್ರಮವನ್ನು ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಮುಗವಾಳಪ್ಪನವರು ಉದ್ಘಾಟಿಸಿದರು. ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದ ವಕೀಲರಾದ ಶ್ರೀ ಆರ್.ಶಿವಚಂದ್ರ ನಾಯಕ್‌ರವರು "ನಮ್ಮ ಮುಂದಿರುವ ಸವಾಲುಗಳು ಮತ್ತು ಯುವಜನರ ಪಾತ್ರ" ಎಂಬ ವಿಷಯವಾಗಿ ಭಾಷಣ ಮಾಡಿದರು.

ಕಾರ್ಮಿಕ ಮುಖಂಡರಾದ ಕಾಂ.ಸಿ.ರಾಮಭದ್ರಯ್ಯನವರು ಭಾರತ ಮತ್ತು ಡಂಕೆಲ್ ಪ್ರಸ್ತಾಪನೆಗಳು ಎಂಬ ವಿಷಯವಾಗಿ ಭಾಷಣ ಮಾಡಿದರು.

ಜಿ.ರಾಮಕೃಷ್ಣ ಇಂಗ್ಲಿಷ್ ಪ್ರಾಧ್ಯಾಪಕ, ನ್ಯಾಷನಲ್ ಕಾಲೇಜ್‌ಬೆಂಗಳೂರು, "ಭಗತ್ ಸಿಂಗ್ ಮತ್ತು ಪ್ರಸ್ತುತ ರಾಜಕೀಯ ಪರಿಸ್ಥಿತಿ" ಕುರಿತು ಭಾಷಣ ಮಾಡಿದರು. ಸಂಜೆ 5 ಗಂಟೆಗೆ ಕವಿಗೋಷ್ಠಿ ನಡೆಯಿತು. ಶ್ರೀಮತಿ ಕೆ.ಎಸ್.ಪ್ರಭಾ ಉಪನ್ಯಾಸಕರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಕೇರಂ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ಅಶ್ವಥ್‌ರೆಡ್ಡಿ ವಹಿಸಿದ್ದರು. ಕಾಂ.ಹೇಮಂತರಾಜು ವಂದನಾರ್ಪಣೆ ಮಾಡಿದರು.

ಕುಂದಾಪುರ : ಸ್ವಾತಂತ್ರ್ಯ ಹೋರಾಟಗಾರ ಗಂಗೊಳ್ಳಿ ವೇಣುಗೋಪಾಲ ನಾಯಕ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಈ ಕಾರ್ಯಕ್ರಮದ ಮೂಲಕ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪು ಮಾಡುತ್ತಿರುವ ಡಿವೈಎಫ್‌ಐ ಸಂಘಟನೆಯನ್ನು ಶ್ಲಾಘಿಸಿದರು.

ಮುಖ್ಯ ಅತಿಥಿ ಡೆವಿಡ್ ಕರ್ಕಡ ಅವರು ಮಾತನಾಡಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ದೇಶದಿಂದ ಓಡಿಸಲು ಭಗತ್‌ಸಿಂಗ್, ರಾಜ್‌ಗುರು, ಸುಖದೇವ್ ಕೈಗೊಂಡ ಕ್ರಾಂತಿಕಾರಿ ಹೋರಾಟಗಳನ್ನು ನೆನಪಿಸಿದರು. ಮತ್ತು ಪ್ರಸ್ತುತ ಕೇಂದ್ರ ಸರಕಾರ ದೇಶದಲ್ಲಿ ಅನುಸರಿಸುತ್ತಿರುವ ಅಪಾಯಕಾರಿ ಆರ್ಥಿಕ, ಕೈಗಾರಿಕಾ ನೀತಿಗಳು, ಐಎಂಎಫ್-ವಿಶ್ವಬ್ಯಾಂಕ್ ಸಾಲಗಳು, ದೇಶವನ್ನು ಇನ್ನೊಮ್ಮೆ ಸಾಮ್ರಾಜ್ಯಶಾಹಿಗಳಿಗೆ ಒತ್ತೆ ಇಡುವ ಸಂಚನ್ನು ವಿವರಿಸಿ ಯುವಜನರು ಜಾಗೃತರಾಗಿ ಇದನ್ನು ಪ್ರತಿಭಟಿಸಬೇಕೆಂದು ಕರೆ ನೀಡಿದರು. ತಾವು ಹಿಂದುಗಳ ಪರವೆಂದು ವಾದಿಸುವ ಬಿಜೆಪಿಗಳು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಅನೇಕ ಮುಸ್ಲಿಂ ಮುಖಂಡರುಗಳ ತ್ಯಾಗವನ್ನು ಅಲ್ಲಗಳೆದು ಹಿಂದು- ಮುಸ್ಲಿಂ ಎಂದು ದೇಶದ ಜನರ ಐಕ್ಯತೆ ಒಡೆಯುವ ಅಪಾಯದ ಬಗ್ಗೆ ಜನರಿಗೆ ತಿಳಿಹೇಳಬೇಕೆಂದು ಡಿವೈಎಫ್‌ಐಯನ್ನು ವಿನಂತಿಸಿದರು.

ಪ್ರಾರಂಭದಲ್ಲಿ ಡಿವೈಎಫ್‌ಐನ ತಾಲೂಕು ಕಾರ್ಯದರ್ಶಿ ಹೆಚ್.ನರಸಿಂಹ ಅವರು ದೇಶದ ಐಕ್ಯತೆಯನ್ನು ಕಾಪಾಡುವ ಪ್ರತಿಜ್ಞೆಯನ್ನು ಓದಿ ಹೇಳಿದರು. ತಾಲೂಕು ಅಧ್ಯಕ್ಷ ರಾಜೀವ್ ಪಡುಕೋಣೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕೆ. ಬಾಲಕೃಷ್ಣ ವಂದಿಸಿದರು.

ಶಿರುಗುಪ್ಪ : ಭಗತ್‌ಸಿಂಗ್, ರಾಜ್‌ಗುರು, ಸುಖದೇವ್‌ರವರು ಕಂಡಿದ್ದ ಕನಸನ್ನು ನನಸು ಮಾಡುವ ಜವಾಬ್ದಾರಿ ಇಂದಿನ ಯುವಜನರ ಮೇಲಿದೆ. ಹಿಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಶೋಷಣೆಯಿಂದ ಬಳಲುತ್ತಿದ್ದ ಭಾರತದಲ್ಲಿ ಯುವ ಜನರು ಪ್ರಾಣವನ್ನೇ ಬಲಿಯಾಗಿ ಕೊಟ್ಟು ಭಾರತದ ಯುವಜನರಿಗೆ ದಾರಿದೀಪವಾಗಿದ್ದಾರೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ತಾಲೂಕು ಸಂಚಾಲಕರಾದ ಈ.ಆರ್.ಎಲ್ಲಪ್ಪ ಶಿರುಗುಪ್ಪ ತಾಲೂಕಿನ ರಾರಾವಿ ಗ್ರಾಮದಲ್ಲಿ ಡಿವೈಎಫ್‌ಐನವರು ಏರ್ಪಡಿಸಿದ್ದ ಭಗತ್‌ಸಿಂಗ್ ಹುತಾತ್ಮ ದಿನಾಚರಣೆಯ ಅಂಗವಾಗಿ ನಡೆದ ಮೈತ್ರಿ ಜ್ಯೋತಿ ಕಾರ್ಯಕ್ರಮ ಉದ್ಘಾಟಿಸುತ್ತಾ ಹೇಳಿದರು.

ಶುಭಾಶಯ ಕೋರಿದ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಷಣ್ಮುಖಪ್ಪ ಮಾತಾಡಿ ಇಂದು ಯುವಜನರು ದೇಶದ ಭದ್ರತೆಗೆ ಅಪಾಯವನ್ನುಂಟು ಮಾಡುವ ಕೆಲಸಗಳಲ್ಲಿ ತೊಡಗಿರುವುದಕ್ಕೆ ಸ್ವತಂತ್ರ ಭಾರತವನ್ನಾಳಿದ ಸರಕಾರಗಳು ಅನುಸರಿಸಿದ ನೀತಿಗಳ ಪರಿಣಾಮವಾಗಿ ನಿರುದ್ಯೋಗ ಸಮಸ್ಯೆ ತಲೆದೋರಿ ಯುವ ಶಕ್ತಿ ಹಾಳಾಗುತ್ತಿದೆ ಎಂದರು.

ಈ ಕಾರ್ಯಕ್ರಮದಲ್ಲಿ 101 ಜ್ಯೋತಿಗಳು ಬೆಳಗಿದವು ಅಲ್ಲದೆ ಸಭೆಯಲ್ಲಿ 200 ಜನ ಭಾಗವಹಿಸಿದ್ದು ಕಾರ್ಯಕ್ರಮದ ನೇತೃತ್ವವನ್ನು ಡಿವೈಎಫ್‌ಐನ ಅಂಜನಪ್ಪ, ಚನ್ನಬಸವನಗೌಡ ಮುಂತಾದವರು ವಹಿಸಿದ್ದರು.

ತೆಕ್ಕಲ ಕೋಟೆ : ತೆಕ್ಕಲಕೋಟೆ ಡಿವೈಎಫ್‌ಐ ಘಟಕದ ಉಪಾಧ್ಯಕ್ಷರಾದ ಕಾ. ದಮ್ಮೂರ್.ಎಂ. ಮಾತನಾಡಿದರು. ಯಾವ ಆಶಯಕ್ಕಾಗಿ ಭಗತ್‌ಸಿಂಗ್, ರಾಜ್‌ಗುರು ಮತ್ತು ಸುಖದೇವ್ ಹೋರಾಡಿ ಪ್ರಾಣವನ್ನೇ ಕಳೆದುಕೊಂಡರೋ ಆ ಆಶಯಗಳ ಈಡೇರಿಕೆಗಾಗಿ ನಾವು ಮತ್ತೊಮ್ಮೆ ಸಮರಕ್ಕೆ ಇಳಿಯಬೇಕು ಎಂದರು. ಮತ್ತೆ ಸಂಗಾತಿ ವೀರಯ್ಯ ಮಾತಾಡಿ, ಭಗತ್‌ಸಿಂಗ್‌ನ ಆದರ್ಶಗಳು ಇಂದಿನ ಯುವಜನರಿಗೆ ಸ್ಫೂರ್ತಿದಾಯಕ ಎಂದರು. ಈ ಕಾರ್ಯಕ್ರಮದಲ್ಲಿ 51 ಜ್ಯೋತಿಗಳು ಬೆಳಗಿ ಸಾರ್ವಜನಿಕರು ಕುತೂಹಲದಿಂದ ನೋಡುತ್ತಿದ್ದರು. ಈ ಕಾರ್ಯಕ್ರಮದ ನೇತೃತ್ವವನ್ನು ಲಕ್ಷ್ಮಣ, ವೀರೇಶ್‌ನಾಯಕ್, ಖಾದರ್‌ಅಲೀ,ಸುದೀರ್, ಸಿದ್ದಪ್ಪ ಮುಂತಾದವರು ವಹಿಸಿದ್ದರು.

ಸೂಗೂರು : ಕ್ರಾಂತಿ ಚಿರಾಯುವಾಗಲಿ ಬ್ರಿಟಿಷರೇ ದೇಶ ಬಿಟ್ಟು ತೊಲಗಿರಿ ಎಂಬ ಘೋಷಣೆಗಳನ್ನು ಕೂಗುತ್ತಾ ಕೆಚ್ಚೆದೆಯಿಂದ ಗಲ್ಲಿಗೇರಿದ ಭಗತ್‌ಸಿಂಗ್‌ನ ದೇಶಪ್ರೇಮದ ಆದರ್ಶಗಳನ್ನು ಯುವಕರು ರೂಢಿಸಿಕೊಳ್ಳಬೇಕೆಂದು ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಂಚಾಲಕರಾದ ಹೆಚ್.ಚನ್ನಬಸಪ್ಪ ಡಿವೈಎಫ್‌ಐ ಕೆ. ಸೂಗೂರು ಘಟಕವು ಹಮ್ಮಿಕೊಂಡಿದ್ದ ಮೈತ್ರಿ ಜ್ಯೋತಿ ಕಾರ್ಯಕ್ರಮದ ಸಂದರ್ಭದಲ್ಲಿ ಅತಿಥಿಗಳಾಗಿ ಮಾತನಾಡುತ್ತಾ ಯುವಜನರಿಗೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಪಿ.ಹೊನ್ನೂರ್ ಸಾಹೇಬ್ ಸಹಾಯಕ ಕೃಷಿ ನಿರ್ದೇಶಕರು ಜನರು ತಮ್ಮ ಬಗ್ಗೆ ಇರುವ ಕೀಳುಮೆಯನ್ನು ತೊರೆದು ಸ್ವಾಭಿಮಾನಿಗಳಾಗಬೇಕು. ಯಾರೋ ಬಂದು ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾವೇ ಮುಂದಾಗಬೇಕು. ಸಂಘಟಿತರಾಗಿ ಹೋರಾಡಬೇಕು. ತಾರ್ಕಿಕ ಮನೋಭಾವನ್ನು ಬೆಳೆಸಿಕೊ-ಂಡು ವೈಜ್ಞಾನಿಕ ಹಾದಿಯಲ್ಲಿ ಈ ದೇಶವನ್ನು ಕೊಂಡೊಯ್ಯಬೇಕು, ನೈತಿಕ ನೆಲೆಗಟ್ಟಿನ ಆಧಾರದಲ್ಲಿ ಯುವಕರು ನಡೆಯಬೇಕೆಂದು ಕರೆ ನೀಡಿದರು.

ನಂತರ ಜನವಾದಿ ಮಹಿಳಾ ಸಂಘಟನೆಯ ಸಂಚಾಲಕರಾದ ಎ.ಶಕುಂತಲಾ ಮಾತನಾಡಿ ಬದುಕಿನ ಬಂಡಿ ಸರಾಗವಾಗಿ ಚಲಿಸಬೇಕಾದರೆ ಗಂಡಿನಷ್ಟೇ ಹೆಣ್ಣಿನ ಪಾತ್ರ ಇದೆ. ಆದ್ದರಿಂದ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವುದು ಅತ್ಯವಶ್ಯಕವಾಗಿದೆ. ಆದರೆ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದು ಹೇಳುತ್ತಾ ಹೆಣ್ಣನ್ನು ಸ್ವಾತಂತ್ರ್ಯ ವಿದ್ಯೆಯಿಂದ ವಂಚಿತರನ್ನಾಗಿ ಮಾಡಲಾಗಿದೆ ಎಂದರು.

ಕುಷ್ಟಗಿ ತಾಲೂಕಿನ ಮೊದಲ ಘಟ್ಟದಲ್ಲಿ ಶರಣವ್ವಳ ಮೇಲಾದ ಅತ್ಯಾಚಾರದ ಘಟನೆಯನ್ನು ಖಂಡಿಸಿ ಶರಣವ್ವಳ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗಬೇಕು. ಅಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಡಿವೈಎಫ್‌ಐನ ಜಿಲ್ಲಾ ಕಾರ್ಯದರ್ಶಿಗಳಾದ ಕೆ.ಎಸ್.ರಾಮಾಂಜನೇಯ ಅವರು ಡಿವೈಎಫ್‌ಐನ ಧ್ಯೇಯೋದ್ದೇಶಗಳನ್ನು ತಿಳಿಸಿ ನಮ್ಮ ದೇಹ ಛಿದ್ರವಾದರೂ ದೇಶವನ್ನು ವಿಛಿದ್ರವಾಗಲು ಬಿಡುವುದಿಲ್ಲ ಎಂಬ ಘೋಷಣೆಯನ್ನು ನಾವು ಹೆಮ್ಮೆಯಿಂದ ಹೇಳುತ್ತೇವೆ ಎಂದು ತಿಳಿಸಿದರು.

ಭಗತ್‌ಸಿಂಗ್, ರಾಜ್‌ಗುರು, ಸುಖದೇವ್, ಚಂದ್ರಶೇಖರ್ ಆಜಾದ್‌ರ ದಾರಿ ನಮ್ಮದು ಎಂದರು.

ನಂತರ ಎಸ್.ಎ.ಖಾದ್ರಿ ಸಾಲುಗುಂದಿ ಇವರು ಭಾವೈಕ್ಯತಾ ಭಜನೆಗಳನ್ನು ಹಾಡಿ ಜನರನ್ನು ಐಕ್ಯತೆಯುತ್ತ ವಾಲುವಂತೆ ಮಾಡಿದರು.

KRNM/BGS-405 MAG(2) PRB DECR 319-78/79

ಕೃಷಿ, ಔಷಧಿ ಉದ್ದಿಮೆಯ ಮೇಲೆ ದುಷ್ಪರಿಣಾಮ ಬೀರುವ ಡಂಕೆಲ್ ಪ್ರಸ್ತಾಪ

ಅವಸರದ ನಿರ್ಣಯ ಬೇಡ ಸಿಪಿಐ(ಎಂ) ಎಚ್ಚರ

ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ನೇತೃತ್ವದಲ್ಲಿ ಮೂವರು ಸದಸ್ಯರು ಒಂದು ಸಿಪಿಐ(ಎಂ) ನಿಯೋಗ ಕೇಂದ್ರ ವಾಣಿಜ್ಯ ಮಂತ್ರಿ ಪ್ರಣಬ್ ಮುಖರ್ಜಿಯವರನ್ನು ಭೇಟಿ ಮಾಡಿ ಅಂತರ್ರಾಷ್ಟ್ರೀಯ ವ್ಯಾಪಾರ ಮತ್ತು ಸುಂಕ ದರಗಳನ್ನು ಸಂಬಂಧಪಟ್ಟಂತಹ ಡಂಕೆಲ್ ಪ್ರಸ್ತಾವಗಳು ಭಾರತದ ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು, ಅವನ್ನು ಒಪ್ಪಿದರೆ ದೇಶದ ಸಾರ್ವಭೌಮತೆಯನ್ನು ಒತ್ತೆಯಿಟ್ಟಂತೆಯೇ ಎಂಬ ಖಡಾಖಂಡಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಪೊಲಿಟ್‌ಬ್ಯೂರೋ ಸದಸ್ಯರಾದ ಎಸ್. ರಾಮಚಂದ್ರನ್ ಪಿಳ್ಳೆ ಹಾಗೂ ಸೀತಾರಾಂ ಯೆಚೂರಿಯವರಿದ್ದ ನಿಯೋಗ ಡಂಕೆಲ್ ಪ್ರಸ್ತಾವಗಳು ಒಂದು ಕ್ಲಿಷ್ಟ ದಸ್ತಾವೇಜು, ಆರ್ಥಿಕ ಪ್ರತಿಯೊಂದು ವಲಯವನ್ನು ತಟ್ಟುವಂತದ್ದು ಎನ್ನುತ್ತಾ ಈ ಪ್ರಸ್ತಾವಗಳ ಕೆಲವು ಅತ್ಯಂತ ಅಪಾಯಕಾರಿ ಪರಿಣಾಮಗಳನ್ನು ಎತ್ತಿ ತೋರಿಸಿತು.

ವಿವಾದಗ್ರಸ್ತ ಡಂಕೆಲ್ ಕರಡು ಪ್ರತಿ ಬೌದ್ಧಿಕ ಆಸ್ತಿ ಹಕ್ಕುಗಳು, ಪೇಟೆಂಟ್ ಕಾನೂನುಗಳು ಇತ್ಯಾದಿಗಳ ಬಗ್ಗೆ ಈಗಿರುವ ನಿಯಮಗಳಲ್ಲಿ ತೀವ್ರ ಬದಲಾವಣೆಗಳನ್ನು ಸೂಚಿಸಿದ್ದು ಇವು ಭಾರತದ ದೀರ್ಘಾವಧಿಯ ಹಿತಾಸಕ್ತಿಗಳಿಗೆ ಅತ್ಯಂತ ಪ್ರತಿಕೂಲವಾಗಿವೆ.

ಈ ಪ್ರಸ್ತಾವಗಳನ್ನು ಸ್ವೀಕರಿಸಿದರೆ ತಾನು ಎಷ್ಟು ಪ್ರಮಾಣದ ಬಳಕೆ ವಸ್ತುಗಳನ್ನು, ಬಂಡವಾಳ ಸರಕುಗಳನ್ನು ಹಾಗೂ ಕೈಗಾರಿಕಾ ಸರಕುಗಳನ್ನು ಆಮದು ಮಾಡಬೇಕೆಂದು ನಿರ್ಧರಿಸುವ ಭಾರತದ ಹಕ್ಕನ್ನೇ ಬಿಟ್ಟುಕೊಡಬೇಕಾಗುತ್ತದೆ ಎಂದು ಸಿಪಿಐ(ಎಂ) ಮುಖಂಡರು ಹೇಳಿದ್ದಾರೆ.

ವ್ಯಾಪಾರಕ್ಕೆ ಸಂಬಂಧಪಟ್ಟ ಬೌದ್ಧಿಕ ಆಸ್ತಿ ಹಕ್ಕುಗಳ(TRIPS) ಕುರಿತಾದ ಪ್ರಸ್ತಾವಗಳಂತೂ ಇನ್ನೂ ಗಂಭೀರ ಸ್ವರೂಪದ್ದು. ಇದನ್ನು ಒಪ್ಪಿಕೊಂಡರೆ 1917 ರ ಭಾರತೀಯ ಪೇಟೆಂಟ್ ಶಾಸನದ ಮುಖ್ಯ ಲಕ್ಷಣಗಳನ್ನೇ ಕೈಬಿಟ್ಟಂತಾಗುತ್ತದೆ. ಈ ಶಾಸನ ಭಾರತದ ರಾಸಾಯನಿಕ, ಔಷಧಿ ಉದ್ದಿಮೆಯ ಬೆಳವಣಿಗೆಗೆ, ಬಳಕೆದಾರರ ಹಿತಾಸಕ್ತಿಗಳ ರಕ್ಷಣೆಗೆ ನೀಡಿದ ಅವಕಾಶಗಳನ್ನೇ ಮುಚ್ಚಿಬಿಟ್ಟಂತಾಗುತ್ತದೆ ಎಂದು ಸಿಪಿಐ(ಎಂ) ನಿಯೋಗ ಆತಂಕ ವ್ಯಕ್ತಪಡಿಸಿದರು.

ಡಂಕೆಲ್ ಪ್ರಸ್ತಾವಗಳಿಗೆ ಸಹಿ ಹಾಕಿದರೆ ಅವುಗಳಿಂದ ಎರಡು ರೀತಿಯ ದುಷ್ಪರಿಣಾಮಗಳಾಗುತ್ತವೆಂದು ಸಿಪಿಐ(ಎಂ) ನಿಯೋಗ ತಿಳಿಸಿತು. ಒಂದು - ಭಾರತದ ಜನತೆಗೆ ಅಗ್ಗದರದಲ್ಲಿ ಔಷಧಿಗಳು ಸಿಗದಂತಾಗುತ್ತದೆ, ಎರಡು - ಭಾರತದ ಔಷಧಿ ಉತ್ಪಾದಕರು ತಮ್ಮ ಉದ್ದಿಮೆಗಳನ್ನು ಮುಚ್ಚಬೇಕಾಗಿ ಬಂದು ಆರ್ಥಿಕಕ್ಕೆ ತೀರಾ ಹಾನಿಯುಂಟಾಗುತ್ತದೆ.

ಕೃಷಿಯಂತಹ ನಿರ್ಣಾಯಕ ಪ್ರಶ್ನೆಗಳ ಕುರಿತಂತೆ ಡಂಕೆಲ್ ಪ್ರಸ್ತಾವಗಳು ಸ್ವಾವಲಂಬನೆ ಹಾಗೂ ಆಹಾರದ ಭದ್ರತೆಗೆ ನೀಡುವ ಸಬ್ಸಿಡಿಗಳಿಗೂ, ವಿದೇಶೀ ಮಾರುಕಟ್ಟೆ ಗಿಟ್ಟಿಸಲು ನೀಡುವ ಸಬ್ಸಿಡಿಗಳಿಗೂ ಏನೂ ವ್ಯತ್ಯಾಸವನ್ನೇ ಕಾಣುವುದಿಲ್ಲ ಎಂದು ಸಿಪಿಐ(ಎಂ) ನಿಯೋಗ ತಿಳಿಸಿತು. ಭಾರತದ ಸಂದರ್ಭದಲ್ಲಿ ಸಬ್ಸಿಡಿಗಳು ಅಗತ್ಯ, ಏಕೆಂದರೆ ನಮ್ಮ ಬಹುಪಾಲು ಜನ ಕೃಷಿಯನ್ನೇ ಅವಲಂಬಿಸಿದ್ದು, ಅವರು ಬದುಕಬೇಕಾದರೆ ಸಬ್ಸಿಡಿಗಳು ಅಗತ್ಯ ಎಂದು ಸಿಪಿಐ(ಎಂ) ಮುಖಂಡರು ವಾಣಿಜ್ಯ ಮಂತ್ರಿಗಳಿಗೆ ಹೇಳಿದರು.

ನಮ್ಮ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ 80 ಕೋಟಿ ಜನ ಆಹಾರದಲ್ಲಿ ಸ್ವಾವಲಂಬನೆ ಸಾಧಿಸಲು ಕೂಡಾ ಸಬ್ಸಿಡಿಗಳು ಅಗತ್ಯ. ಸಬ್ಸಿಡಿಗಳ ರದ್ದತಿ ಎಂದರೆ ಭಾರತ ಆಹಾರದ ಆಮದಿನ ಮೇಲೆ ಅವಲಂಬಿಸಬೇಕು ಎಂದರ್ಥ. ಸಬ್ಸಿಡಿಗಳು ಮತ್ತು ರಫ್ತಿನ ಪ್ರಶ್ನೆಗೂ ಮಾರುಕಟ್ಟೆಯಲ್ಲಿ ದೇಶದ ಪಾಲಿಗೂ ಸಂಬಂಧವಿರಬೇಕು ಎಂದು ಸಿಪಿಐ(ಎಂ) ಮುಖಂಡರು ಒತ್ತಿ ಹೇಳಿದರು.

ಹೆಚ್ಚು ಇಳುವರಿಯ ಬೀಜಗಳು ಇತ್ಯಾದಿ ಭಾರತದ ಹಸಿರು ಕ್ರಾಂತಿಗೆ ಕಾರಣವಾದ ಕೃಷಿ ವಲಯದಲ್ಲಿ ಮುನ್ನಡೆಗಳೆಲ್ಲಾ ಡಂಕೆಲ್ ಪ್ರಸ್ತಾವಗಳನ್ನು ಸ್ವೀಕರಿಸಿದರೆ ಮೂಲೆಗುಂಪಾಗುತ್ತವೆ ಎಂದೂ ಅವರು ಎತ್ತಿ ತೋರಿಸಿದರು. ಕೃಷಿ ಸರಕುಗಳ ಆಮದಿನ ಮೇಲೆ ಎಲ್ಲಾ ಹತೋಟಿ ಕ್ರಮಗಳನ್ನು ರದ್ದು ಮಾಡಿದರೆ ಅದು ದೇಶದ ಹಿತಾಸಕ್ತಿಗಳಿಗೇ ಮಾರಕ. ಏಕೆಂದರೆ ಇದು ಬೆಲೆಗಳನ್ನು ಹೆಚ್ಚಿಸುತ್ತದೆ, ಆಮದಿನ ಮೇಲೆ ನಮ ಅವಲಂಬನೆಯನ್ನು ಹೆಚ್ಚಿಸುತ್ತದೆ.

ಸಿಪಿಐ(ಎಂ) ಮುಖಂಡರು ಡಂಕೆಲ್ ಪ್ರಸ್ತಾವಗಳ ಈ ಕೆಲವು ಅಂಶಗಳನ್ನು ಎತ್ತಿ ತೋರಿಸುತ್ತಾ ದೇಶದ ಮೇಲೆ ಇಂತಹ ದೀರ್ಘಾವಧಿ ದುಷ್ಪರಿಣಾಮ ಬೀರುವ ಪ್ರಸ್ತಾವಗಳ ಬಗ್ಗೆ ಅವಸರದ ನಿರ್ಣಯ ಬೇಡ ಎಂದು ಸರಕಾರವನ್ನು ಎಚ್ಚರಿಸಿದರು. ಯಾವುದೇ ನಿರ್ಣಯ ಕೈಗೊಳ್ಳುವ ಮೊದಲು ಭಾರತದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ ಎಂದು ವಾಣಿಜ್ಯ ಮಂತ್ರಿಗಳು ಭರವಸೆ ನೀಡಿದರು.

(ಐ.ಎನ್.ಎಸ್.)

ಎಡ - ಪ್ರಜಾಪ್ರಭುತ್ವ ರಂಗದ ಜಯಭೇರಿ

ಪುಟ 8ರಿಂದ

ಕಟ್ಟಿ ಜನ ಹಸಿವಿನಿಂದ ಸಾಯುವಂತೆ ಮಾಡಿದ ಮಂದಿಯನ್ನು ತಿರಸ್ಕರಿಸಿದರು; ನೂರಾರು ಎಡರಂಗದ ಬೆಂಬಲಿಗರನ್ನು ಕೊಂದ, ನೂರಾರು ತಂಗಿ-ತಾಯಂದಿರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಖೂಳರನ್ನು ಕಿತ್ತೆಸೆದರು. ನರಸಿಂಹರಾಯರು ತ್ರಿಪುರಾಕ್ಕೆ ಕಳಿಸಿದ, ತ್ರಿಪುರಾದ ರಾಜಕೀಯದಲ್ಲಿ ಕ್ರಿಮಿನಲ್‌ಗಳನ್ನು ದೇಕಾಬಿಟ್ಟಿ ಬಳಸಿದ ಕೇಂದ್ರ ಮಂತ್ರಿ ಸಂತೋಷ್ ಮೋಹನ್ ದೇಬ್‌ಗೆ ಸರಿಯಾದ ಪಾಠ ಕಲಿಸಿದರು. ಕಳೆದ ಬಾರಿ ಚುನಾವಣೆಯ ಮೊದಲು ಸಾಮೂಹಿಕ ಹತ್ಯೆ ನಡೆಸಿ ಕಾಂಗ್ರೆಗೆ ನೆರವಾದ ಟಿಎನ್‌ವಿಯ ಮುಖ್ಯಸ್ಥ ಬಿಜೊಯ್ ಕುಮಾರ್ ಹ್ರಾಂಗ್‌ಕಾವ್ಲ್, ಟಿಯುಜೆಎಸ್‌ನ ಅಧ್ಯಕ್ಷ ಶ್ಯಾಮಚರಣ್ ತ್ರಿಪುರಾ(ಆತ ಸ್ಪರ್ಧಿಸಿದ ಎರಡೂ ಕ್ಷೇತ್ರಗಳಲ್ಲಿ) ಹಾಗೂ ಇನ್ನೂ ಹಲವಾರು ಕಾಂಗ್ರೆ-ಟಿಯುಜೆಎಸ್ ಅತಿರಥ- ಮಹಾರಥರ ಮೇಲೆ ತಮ್ಮ ತೀವ್ರ ಸಿಟ್ಟನ್ನು ತೋರಿಸಿದರು. ರಾಜ್ಯದ ಚುನಾವಣಾ ಇತಿಹಾಸದಲ್ಲಿ ಇಷ್ಟೊಂದು ಸಂಖ್ಯೆಯ ಅತಿರಥ-ಮಹಾರಥರ ಸೋಲು ಇದೇ ಮೊದಲು ಎಂದು ಹೇಳಲಾಗುತ್ತಿದೆ. ಸ್ಪೀಕರ್ ಜ್ಯೋತಿರ್ಮಯ ನಾಥ್, ಎಲ್ಲಾ ಕಾಂಗ್ರೆ ಪರ ಪಕ್ಷಗಳ ಅಧ್ಯಕ್ಷರು-ಆರು ಕ್ಯಾಬಿನೆಟ್ ಮಂತ್ರಿಗಳು, ಎಂಟು ರಾಜ್ಯ ಮಂತ್ರಿಗಳು ನೆಲಕಚ್ಚುವಂತೆ ಮಾಡಿದ ತ್ರಿಪುರಾದ ಜನತೆಯನ್ನು ಇಡೀ ದೇಶದ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಹಾರ್ದಿಕವಾಗಿ ಅಭಿನಂದಿಸುತ್ತವೆ.

ಈ ಬಾರಿಯ ಚುನಾವಣೆಯ ಇನ್ನೊಂದು ವಿಶೇಷವೆಂದರೆ ಹಲವಾರು ಪ್ರಾಮಾಣಿಕ ಕಾಂಗ್ರೆಸ್ಸಿಗರೂ ಕಾಂಗ್ರೆ-ಟಿಯುಜೆಎಸ್ ಕೂಟದ ದುರಾಡಳಿತದಿಂದ ಬೇಸತ್ತು ಎಡ-ಪ್ರಜಾಪ್ರಭುತ್ವ ರಂಗಕ್ಕೆ ಬಹಿರಂಗ ಬೆಂಬಲ ನೀಡಿದರು. ಹಿಂದಿನ ಒಬ್ಬ ಕಾಂಗ್ರೆಸ್ ಸಂಸತ್ ಸದಸ್ಯ, ತ್ರಿಪುರಾದ ಕಾಂಗ್ರೆಸ್ ಮಂತ್ರಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ತರಿತ್ ಮೋಹನ್ ದಾಸ್ ಗುಪ್ತಾ ಸಿಪಿಐ(ಎಂ) ಅಭ್ಯರ್ಥಿಗಳ ಪರವಾಗಿ ವ್ಯಾಪಕ ಪ್ರಚಾರ ನಡೆಸಿದರು. ಆತ್ಮಸಾಕ್ಷಿಯ ಕರೆಗೆ ಓಗೊಡುವುದನ್ನು ಬಿಟ್ಟು ಪ್ರಾಮಾಣಿಕ ಕಾಂಗ್ರೆಸ್ಸಿಗರಿಗೆ ಈಗ ಬೇರೆ ದಾರಿಯಲ್ಲ ಎಂದು ಅವರು ತಮ್ಮ ಭಾಷಣಗಳಲ್ಲಿ ಪದೇ-ಪದೇ ಹೇಳುತ್ತಿದ್ದರು.

ಸಂತೋಷ್ ಮೋಹನ್ ದೇಬ್-ಸುಧೀರ್ ಮಜುಮ್‌ದಾರ್-ಸಮೀರ್ ರಂಜನ್ ಬರ್ಮನ್ ಕೂಟ ಹಲವಾರು ಯುವಕರನ್ನು ಕೊಲೆಗಡುಕ ಗೂಂಡಾಗಳಾಗಿ ಪರಿವರ್ತಿಸಿ ಕಳೆದ ಐದು ವರ್ಷಗಳ[ಲ್ಲಿ] ಎಡರಂಗದ ಮುಖಂಡರ, ಕಾರ್ಯಕರ್ತ[ರ] ಕೊಲೆ ಮಾಡಲು ಚುನಾವಣೆಗಳಲ್ಲಿ ಮೋ[ಸ] ನಡೆಸಲು, ತಾಯಂದಿರ- ಸೋದರಿಯರ ಮಾನಹರಣ ಮಾಡಲು ಉಪಯೋಗಿಸಿಕೊಂಡಿತ್ತು. ಪ್ರಾಮಾಣಿಕ ಕಾಂಗ್ರೆಸ್ ಜನರು ಇದರಿಂದ ರೊಚ್ಚಿಗೆದ್ದು ಕಾಂಗ್ರೆಸ್ ತ್ಯಜಿಸಿ ಪ್ರಜಾಪ್ರಭುತ್ವ ನಾಗರಿಕ ವರ್ತನೆಯ ಹಾಗೂ ತ್ರಿಪುರಾದ ಪರಂಪರೆಯ ರಕ್ಷಣೆಗಾಗಿ ಎಡ- ಪ್ರಜಾಪ್ರಭುತ್ವ ರಂಗಕ್ಕೆ ಬೆಂಬಲ ನೀಡಿ ಎಡ-ಪ್ರಜಾಪ್ರಭುತ್ವ ರಂಗದ ಪ್ರಚಂಡ ಜಯಕ್ಕೆ ತಮ್ಮ ಕಾಣಿಕೆ ನೀಡಿದರು.

ಕಳೆದ ಐದು ವರ್ಷಗಳಲ್ಲಿ ಕಾಂಗ್ರೆ-ಟಿಯುಜೆಎಸ್ ಕೂಟದ ಅತ್ಯಾಚಾರ- ಅನಾಚಾರಗಳ ಬಗ್ಗೆ ಮೌನವಾಗಿದ್ದ, ಸಿಪಿಐ(ಎಂ) ಒಳಜಗಳವೇ ಎಲ್ಲದಕ್ಕೂ ಕಾರಣ ಎನ್ನುವಂತೆ ಚಿತ್ರಿಸುತ್ತಿದ್ದ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳು ಈ ಪ್ರಚಂಡ ವಿಜಯದಿಂದ ಅವಾಕ್ಕಾಗಿದ್ದಾರೆ. ಅತ್ತ ಈಶಾನ್ಯ ಭಾರತದಲ್ಲೂ ತನ್ನ ಪ್ರಭಾವ ಇದೆ ಎಂದು ತೋರಿಸುತ್ತೇನೆಂದು ಹೊರಟ ಬಿಜೆಪಿಗೂ ಸಂಪೂರ್ಣ ಮುಖಭಂಗವಾಗಿದೆ.

ರೈಲ್ವೇ ಬಜೆಟ್ ಅಂಗೀಕಾರಕ್ಕಾಗಿ ಸಂಸತ್ ಸದಸ್ಯರ ಹಕ್ಕುಗಳ ನಿರಾಕರಣೆ

ಮಾರ್ಚ್ 31ರಂದು ಲೋಕಸಭೆ ರೈಲ್ವೇ ಬಜೆಟನ್ನು ಅಂಗೀಕರಿಸಿತು. ಆದರೆ ಅದನ್ನು ಪಾಸು ಮಾಡಿಸಿಕೊಂಡ ರೀತಿ ಅಭೂತಪೂರ್ವ ಎಂದು ಲೋಕಸಭೆಯಲ್ಲಿ ಸಿಪಿಐ(ಎಂ) ಮುಖಂಡ ಸೋಮನಾಥ ಚಟರ್ಜಿ ಖಂಡಿಸಿದ್ದಾರೆ. ತಮ್ಮ ಸ್ಥಗನ ನಿಲುವಳಿಗಳನ್ನು ಮತಕ್ಕೆ ಹಾಕಬೇಕೆಂದು ಒತ್ತಾಯಿಸಲು ಸದಸ್ಯರಿಗೆ ಅವಕಾಶವನ್ನೇ ನೀಡಲಿಲ್ಲ. ವಿರೋಧ ಪಕ್ಷಗಳ ಸದಸ್ಯರಿಗೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಬಿಡದೆ ಸರಕಾರ ಬಜೆಟನ್ನು ಲೋಕಸಭೆಯಲ್ಲಿ ತನ್ನ ಮನಸ್ವೇಚ್ಛೆಯಂತೆ ಪಾಸು ಮಾಡಿಸಿಕೊಂಡದ್ದು ದುರದೃಷ್ಟಕರ. ಆದ್ದರಿಂದ ಎಡಪಕ್ಷಗಳು ಮತ್ತು ರಾಷ್ಟ್ರೀಯರಂಗಕ್ಕೆ ರೈಲ್ವೇ ಬಜೆಟಿನ ಜನ-ವಿರೋಧಿ ಅಂಶಗಳ ಬಗ್ಗೆ, ಹಾಗೂ ಸದಸ್ಯರ ಹಕ್ಕುಗಳ ವಂಚನೆಯ ಬಗ್ಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಲು ಸಭಾತ್ಯಾಗ ಮಾಡುವುದಲ್ಲದೆ ಬೇರೆ ದಾರಿ ಉಳಿದಿರಲಿಲ್ಲ ಎಂದು ಸೋಮನಾಥ್ ಚಟರ್ಜಿ ಹೇಳಿದ್ದಾರೆ.

ಮೈತ್ರಿ ಜ್ಯೋತಿ....

ಪುಟ 7 ರಿಂದ.

ಮೈತ್ರಿಜ್ಯೋತಿಯನ್ನು ರಾರಾವಿ ಮಂಡಲದ ಮಾಜಿ ಉಪಪ್ರಧಾನರಾದ ಗಿರಿಮಲ್ಲಪ್ಪ ಬೆಳಗಿದರು. ಜ್ಯೋತಿ ಬೆಳಗುವ ಮೂಲಕ ರಾಷ್ಟ್ರೀಯ ಭಾವೈಕ್ಯತಾ ಘೋಷಣೆಗಳನ್ನು ಒಕ್ಕೊರಲಿನಿಂದ ಹೇಳಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಡಿವೈಎಫ್‌ಐನ ಕೆ.ಸೂಗೂರು ಘಟಕದ ಅಧ್ಯಕ್ಷರಾದ ಕೆ. ನಾಗಲಿಂಗಪ್ಪ ವಹಿಸಿದ್ದರು. ಡಿವೈಎಫ್‌ಐನ ಜಿಲ್ಲಾ ಸಮಿತಿ ಸದಸ್ಯರಾದ ಪೆಸಿದ್ದಪ್ಪ ಸ್ವಾಗತಿಸಿದರು. ಸ್ಥಳೀಯ ಘಟಕದ ಕಾರ್ಯದರ್ಶಿಗಳಾದ ಬಿ.ಯಲ್ಲಪ್ಪ ವಂದನಾರ್ಪಣೆ ಸಲ್ಲಿಸಿದರು. ಈ ಸಮಾರಂಭದಲ್ಲಿ 400 ಜನ ಭಾಗವಹಿಸಿದ್ದು ಸಭೆಯು ಹೆಚ್ಚು ಸ್ಫೂರ್ತಿದಾಯಕವಾಗಿತ್ತು. ಈ ಸಮಾರಂಭದ ನೇತೃತ್ವವನ್ನು ವಿ. ಶ್ರೀನಿವಾಸ, ಹೆಚ್.ಹೇಮಣ್ಣ, ವಿ.ಮಲ್ಲಯ್ಯ, ಲಕ್ಷ್ಮಣ, ಶೇಖರಪ್ಪ, ಅಮರೇಶ್, ಶೇಕಪ್ಪ ವಹಿಸಿದ್ದರು.

ತೊಕ್ಕೋಟು : ಕೋಮುವಾದಿಗಳು ಭಾರತದ ವೈವಿಧ್ಯಮಯವಾದ ಸಂಸ್ಕೃತಿಯನ್ನು ನಾಶ ಮಾಡಿ ಏಕರೀತಿಯ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯವಾದಿಗಳೆಂದು ಹೇಳಿಕೊಳ್ಳುತ್ತಿರುವ ಇವರು ನಮ್ಮ ರಾಷ್ಟ್ರೀಯ ಸಂಸ್ಕೃತಿಗೆ ಅಪಾಯವಾಗಿದ್ದಾರೆ ಎಂದು ಸಮುದಾಯ ಕಾರ್ಯದರ್ಶಿ ವಾಸುದೇವ ಉಚ್ಚಿಲ್‌ರವರು ತೊಕ್ಕೋಟುವಿನಲ್ಲಿ ನಡೆದ "ಮೈತ್ರಿ ಜ್ಯೋತಿ" ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಹೇಳಿದರು.

ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ಉಪಾಧ್ಯಕ್ಷರಾದ ಸುಕುಮಾರ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದು ಸಿಪಿಐ(ಎಂ) ಮುಂದಾಳು ಜನಾರ್ಧನ ನಾಯಕ್ ಹಾಗೂ ಎಂ.ವೆಂಕಪ್ಪ ಶೆಟ್ಟಿ ಮೋರ್ಲ ಇವರು ಉಪಸ್ಥಿತರಿದ್ದರು.

ಡಿವೈಎಫ್‌ಐ ವಲಯ ಸಮಿತಿ ಕಾರ್ಯದರ್ಶಿ ಬಾಬು ಪಿಲಾರ್‌ರವರು ಸ್ವಾಗತಿಸಿ ಕ್ರೀಡಾ ಕಾರ್ಯದರ್ಶಿ ಹರೀಶ್ ಕೆ.ಉಳ್ಳಾಲ್‌ರವರು ವಂದಿಸಿದರು.

ಬೀಡಿ ಕಾರ್ಮಿಕರ ಸಮ್ಮೇಳನ ಏಪ್ರಿಲ್ 28-29

ಬೀಡಿ ಕಾರ್ಮಿಕರ 6ನೇ ರಾಜ್ಯ ಸಮ್ಮೇಳನವನ್ನು ಇದೇ ಏಪ್ರಿಲ್ ತಿಂಗಳ 28 ಮತ್ತು 29ರಂದು ಬೆಂಗಳೂರಿನಲ್ಲಿ ನಡೆಸಲಾಗುವುದು. ಅಖಿಲ ಭಾರತ ಸಿಐಟಿಯು ಕಾರ್ಯದರ್ಶಿಯಾಗಿರುವ ಕಾಮ್ರೇಡ್ ವಿಮಲ ರಣದಿವೆಯವರು ಮತ್ತು ದಕ್ಷಿಣ ವಲಯ ಬೀಡಿ ಕಾರ್ಮಿಕರ ಸಮನ್ವಯ ಸಮಿತಿ ಸಂಚಾಲಕರಾದ ಕಾಮ್ರೇಡ್ ಸಿ. ಕಣ್ಣನ್ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

"ದಿಲ್ಲಿ ಚಲೋ" ಯಶಸ್ವಿಗೊಳಿಸಲು ಗುಲ್ಬರ್ಗಾ ಸಿಐಟಿಯು ಸಂಗಾತಿಗಳ ನಿರ್ಧಾರ

ಕೇಂದ್ರ ಕಾರ್ಮಿಕ ಸಂಘಗಳ ಪ್ರಾಯೋಜಿಕ ಸಮಿತಿಯ ಕರೆಯಂತೆ ನವದೆಹಲಿಯಲ್ಲಿ ಏಪ್ರಿಲ್ 14, 1993ರಂದು ರಾಷ್ಟ್ರೀಯ ಏಕತಾ ರ್‍ಯಾಲಿಯನ್ನು ಹಾಗೂ ಏಪ್ರಿಲ್ 15, 1993ರಂದು ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ, ಐಎಂಎಫ್ ಹಾಗೂ ಹೊಸ ಕೈಗಾರಿಕಾ ನೀತಿಗಳ ವಿರುದ್ಧ ಒಂದು ಬೃಹತ್ ರಾಷ್ಟ್ರೀಯ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಮಹಿಳೆಯರು, ಎಂ.ಎಸ್.ಕೆ.ಮಿಲ್ ಕಾರ್ಮಿಕರು ಸೇರಬೇಕೆಂದು ಗುಲ್ಬರ್ಗಾ ಜಿಲ್ಲೆಯಲ್ಲಿನ ಸಿಐಟಿಯುಗೆ ಸೇರಿರುವ ಸಂಘಗಳ ಪ್ರತಿನಿಧಿಗಳ ಒಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಶಹಾಬಾದ್ ಎಸಿಸಿ ಬ್ಯಾಂಕಾಕ್ ಜನರಲ್ ವರ್ಕರ್ಸ್ ಯೂನಿಯನ್ ಉಪ ಅಧ್ಯಕ್ಷರಾದ ಕಾಂ.ಚಂದು ಜಾಧವ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಾರಾಯಿ ಮಾರಾಟ ವಿರುದ್ಧ ಡಿವೈಎಫ್‌ಐ ಕಾರ್ಯಕರ್ತರಿಂದ ಪ್ರತಿಭಟನೆ

ಮಾರ್ಚ್ 17ರಂದು ಕೂಡ್ಲಿಗಿ ತಾಲೂಕು ವಿರುಪಾಪುರ ಗ್ರಾಮದ ಮಹಿಳೆಯರು ಮತ್ತು ರೈತ ಕೂಲಿಕಾರರು ಸುಮಾರು 50 ಜನ ತಾಲೂಕು ಕಛೇರಿಯ ಮುಂದೆ ವಿರೂಪಾಪುರ ಗ್ರಾಮದಲ್ಲಿ ಸಾರಾಯಿ ಮಾರಾಟವನ್ನು ನಿಲ್ಲಿಸಬೇಕೆಂದು ತಾಲೂಕು ಕಚೇರಿಯ ಮುಂದೆ ಪ್ರತಿಭಟಿಸಿದರು. ಇದನ್ನು ಉದ್ದೇಶಿಸಿ ಡಿವೈಎಫ್‌ಐನ ತಾಲೂಕು ಅಧ್ಯಕ್ಷರಾದ ಕೆ.ಕೊಟ್ರೇಶ್ ಮಾತನಾಡಿ ಸಾರಾಯಿ ಮಾರಾಟದಿಂದ ಹಳ್ಳಿಯ ಬಡ ರೈತ ಕೂಲಿಕಾರರ ಮದ್ಯ ಸೇವನೆಯಿಂದ ಕುಟುಂಬಗಳು ಬೀದಿ ಪಾಲಾಗಿವೆ ಮತ್ತು ಗ್ರಾಮದಲ್ಲಿ ಶಾಂತಿಗೆ ಭಂಗ ಉಂಟಾಗುತ್ತದೆ ಎಂದು ಹೇಳಿ ತಹಸೀಲ್ದಾರರಿಗೂ ಹಾಗೂ ಪೋಲೀಸ್ ಅಧಿಕಾರಿಗೂ ಡಿವೈಎಫ್‌ಐ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಿದರು.

ಉಜ್ಜಲಪೇಟೆಯಲ್ಲಿ ಕೃಷಿಕೂಲಿಕಾರರ ಸಂಘ

ಬಳ್ಳಾರಿ ತಾಲೂಕಿನ ಕುರುಗೋಡು ಗ್ರಾಮದಲ್ಲಿ ದಿನಾಂಕ 2.4.93ರಂದು ಜೆ.ಕೆ. ಲಕ್ಷ್ಮಣ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೂಲಿಕಾರರ ಸಂಘವನ್ನು ಕಾಂ. ಶಿವಶಂಕರ್ ಇವರು ಉದ್ಘಾಟಿಸಿದರು. ಅವರು ಮಾತನಾಡಿ ಕೂಲಿಕಾರರಿಗೆ ಸರಿಯಾದ ಕೂಲಿ ನಿಗದಿಯಾಗಬೇಕಾದರೆ ಹೋರಾಟವೇ ದಾರಿಯಾಗಬೇಕೆಂದು ತಿಳಿಸಿದರು. ನಂತರ 12 ಸದಸ್ಯರುಳ್ಳ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಜೆ.ಕೆ.ಲಕ್ಷ್ಮಣ ಅವರನ್ನು ಗೌರವ ಅಧ್ಯಕ್ಷರನ್ನಾಗಿಯೂ ಕೆ.ರಾಮಣ್ಣ ಅವರನ್ನು ಅಧ್ಯಕ್ಷರನ್ನಾಗಿಯೂ ಹಾಗೂ ಹನುಮಂತ ಅವರನ್ನು ಕಾರ್ಯದರ್ಶಿಯಾಗಿಯೂ ಆರಿಸಲಾಯಿತು.

ಕೇರಳದಲ್ಲಿ...

ಪುಟ 3 ರಿಂದ.

ತಾನೇ ಸ್ವತಃ ಪರಿಶೀಲಿಸುವೆವೆಂಬ ಭರವಸೆಯನ್ನು ಶ್ರೀಯುತ ನರಸಿಂಹರಾಯರಿಂದ ಪಡೆದುಕೊಂಡಿದೆ.

ಸಂಸತ್ ಸದಸ್ಯರಾದ ಸುಶೀಲಾ ಗೋಪಾಲನ್ ಮತ್ತು ಮಾಲಿನಿ ಭಟ್ಟಾಚಾರ್ಯ, ಎಐಡಿಡಬ್ಲ್ಯುಎನ ಬೃಂದಾ ಕಾರಟ್, ಮಹಿಳಾ ದಕ್ಷತಾ ಸಮಿತಿಯ ಹುಸ್ನಾ ಸುಭಾನಿ ಹಾಗೂ ಜೆಡಬ್ಲ್ಯುಪಿನ ವಿನಿತಾ ಥಾಮಸ್‌ರವರಿದ್ದ ನಿಯೋಗ ಪ್ರಧಾನಮಂತ್ರಿಗಳನ್ನು ಸಂಸದ್ ಭವನದಲ್ಲಿರುವ ಅವರ ಕಛೇರಿಯಲ್ಲಿ ಭೇಟಿಯಾಗಿ ಇತ್ತೀಚೆಗೆ ಭೂಪಾಲ, ಅಹ್ಮದಾಬಾದ್ ಮತ್ತು ಸೂರತ್‌ಗಳಿಗೆ ಭೇಟಿ ನೀಡಿದ ಜಂಟಿ ಮಹಿಳಾ ನಿಯೋಗದ ವಿವರವಾದ ವರದಿಯನ್ನು ಅವರಿಗೆ ನೀಡಿತು. ಮಹಿಳೆಯರು ಮತ್ತು ಮಕ್ಕಳ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ಎತ್ತಿ ತೋರಿರುವ ಏಕೈಕ ವರದಿಯಿದು.

ಗಲಭೆಗಳಲ್ಲಿ ತಮ್ಮ ಮೇಲೆ ಹಿಂಸಾಚಾರ ನಡೆಸಿದವರೆಂದು ಗುರುತಿಸಿದ ಕ್ರಿಮಿನಲ್‌ಗಳನ್ನು ಇನ್ನೂ ಬಂಧನಕ್ಕೊಳಗಾಗದ್ದರಿಂದ ಇಂತಹ ಕುಟುಂಬಗಳನ್ನು ಮತ್ತೆ ನೆಲೆಗೊಳಿಸುವ ಪ್ರಶ್ನೆ ಇನ್ನೂ ತೀವ್ರವಾಗಿಬಿಟ್ಟಿದೆ. ತಪ್ಪಿತಸ್ಥ ಪೋಲೀಸ್ ಸಿಬ್ಬಂದಿಯ ಮೇಲೂ ಏನೂ ಕ್ರಮ ಕೈಗೊಂಡಿಲ್ಲ ಎಂದು ನಿಯೋಗ ಪ್ರಧಾನಮಂತ್ರಿಗಳಿಗೆ ತಿಳಿಸಿತು.

ಸ್ಥಳೀಯ ಮಟ್ಟಗಳಲ್ಲಿ ಪುನರ್ವಸತಿ ಕ್ರಮಗಳಲ್ಲಿ ಮಹಿಳಾ ಸಂಘಟನೆಗಳನ್ನು ಒಳಗೊಳ್ಳಬೇಕು ಎಂದು ಪ್ರಧಾನಮಂತ್ರಿಗಳು ಸೂಚಿಸಿದರು. ತಪ್ಪಿತಸ್ಥರನ್ನು ಇನ್ನೂ ಬಂಧಿಸಿಲ್ಲ ಎಂಬ ದೂರುಗಳ ಬಗ್ಗೆ ತಾನೇ ಸ್ವತಃ ವಿಚಾರಣೆ ನಡೆಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಾಗಿ ಪ್ರಧಾನಮಂತ್ರಿಗಳು ನಿಯೋಗಕ್ಕೆ ಭರವಸೆ ನೀಡಿದರು.

[...] ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್ : 236462 ಸಂಪಾದಕರು :